ಕರ್ಮವೀರ

ಹುಬ್ಬಳ್ಳಿ ತಾ. ೩೧—೮—

ಸಂಪುಟ ೨೮]

ಜನಪ್ರಿಯ. ಸಚಿತ್ರ ವಾರಪತ್ರಿಕೆ

ಸಂಪಾದಕರು:
ಪ. ರಾ. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು
ರಂ. ರಾ. ದಿವಾಕರ

ಸಂತತವಾದ ಉಲ್ಲಾಸವೇ ಜ್ಞಾನದ ಹೆಗ್ಗುರುತು.

— ಮೊಂಟೇನ

*

ಮನುಷ್ಯಜಾತಿಗೆ ಮಹತ್ತರವಾದ ಸೇವೆ ಸಲ್ಲಿಸಿದಲ್ಲದೆ ಮಹಾತ್ಮರಾದವರನ್ನು ನಾ ಕಾಣೆ.

— ವಾಲ್ಟೇರ

*

ನಾವು ಎಣಿಸಿದ್ದು, ನಾವು ಅರಿತದ್ದು, ನಾವು ನಂಬಿದ್ದು ಇವಕ್ಕೆಲ್ಲ ಇರುವ ಮಹತ್ವ ಕೊನೆಗೆ ಅತ್ಯಲ್ಪವೇ. ಮಹತ್ವವಿರುವದು ನಾವು ಮಾಡುವದಕ್ಕೆ ಮಾತ್ರ.

— ರಸ್ಕಿನ್

*

ಅರಿಯದವನನ್ನು ಮೆಚ್ಚಿಸುವದು ಸುಲಭ; ಚೆನ್ನಾಗಿ ಅರಿತವನನ್ನು ಮೆಚ್ಚಿಸುವದು ಇನ್ನಷ್ಟು ಸುಲಭ; ಆದರೆ ಸ್ವಲ್ಪ ಅರಿತು ಬಹಳ ಅರಿತೆನೆಂಬ ಮೂರ್ಖನನ್ನು ಬ್ರಹ್ಮನೂ ಮೆಚ್ಚಿಸಲಾರ.

— ಭರ್ತೃಹರಿ

*

ನಿಜವಾದ ಸುಖವನ್ನು ಸಾಧಿಸಿಕೊಳ್ಳುವ ಉಪಾಯವೆಂದರೆ, ತನ್ನೊಳಗಿಂದ ತಾನೇ, ಜೇಡನಂತೆ, ದಿಕ್ಕು ದಿಕ್ಕುಗಳಲ್ಲಿ ಹೊರಗೆ ಹಬ್ಬುವದು; ಹಬ್ಬಿ, ಪ್ರೇಮದ ಒಂದು ಇಡಿ ಜೇಡನ ಬಲೆಯನ್ನೆ ಹೆಣೆಯುವದು; ಮತ್ತು ಹೆಣೆದು, ಬಂದುದನ್ನೆಲ್ಲ —ಅದು ಮುದುಕಿಯಿರಲಿ, ಮಗುವಿರಲಿ, ಹುಡುಗಿಯಿರಲಿ ಪೋಲೀಸ ಸಿಪಾಯಿ ಇರಲಿ— ಆ ಬಲೆಯಲ್ಲಿ ಹಿಡಿಯುವದು.

— ಟಾಲಸ್ಟಾಯ



ಜನರಲ್ ತಿಮ್ಮಯ್ಯನವರು

ಕೊಡಗಿನವರಾದ ಮೇಜರ ಜನರಲ್ ತಿಮ್ಮಯ್ಯನವರು ಸ್ವತಂತ್ರ ಭಾರತದಲ್ಲಿ ಉಚ್ಚ ಸೇನಾಧಿಕಾರಕ್ಕೇರಿದ ಮೊದಲಿಗರಲ್ಲಿ ಒಬ್ಬರು. ಈಗ ಪಶ್ಚಿಮ ಆಧಿಪತ್ಯದ ಮುಖ್ಯ ಸೇನಾಧಿಕಾರಿಗಳಾದ ಅವರು ಕಾಶ್ಮೀರದಲ್ಲಿ ಹಿಂದೀ ಸೈನ್ಯದ ಚಟುವಟಿಕೆಗಳಿಗೆ ಹೊಣೆಗಾರರಿದ್ದಾರೆ.


೬

ಇಂದಿನ ಜರ್ಮನಿಯ ಮುಖ, ಮನಸ್ಸು

— ಪುಟ ೫

ಆಕಳಿಕೆ (ಹರಟೆ)

— ನಾ. ಕಸ್ತೂರಿ ಪುಟ ೧೫



KARMAVEER

ಚಿಕ್ಕಕತೆ

'ಮರೆಯದಿರಿ'

ಲೇ:— ವಿ. ಪುಟ್ಟಮಾದಪ್ಪ

ಹೊರಗೆ ಗಾಳಿಯ ರಭಸ ಬಲವಾಗಿತ್ತು. ಮಳೆ ನೀರು ಧಾರೆಯಂತೆ ಒಂದೇ ಸಮನೆ ಸುರಿಯುತ್ತಿತ್ತು. ಆಗಾಗ ಮಿಂಚುತ್ತಿದ್ದ ಮಿಂಚಿನ ದೀಪ್ತಿ ನಾನು ಕುಳಿತಿದ್ದ ಹತ್ತಿರ ಗೋಡೆಯನ್ನು ಬೆಳಗಾಗಿಸುತ್ತಿತ್ತು. ಗಾಳಿ ಮಳೆ, ಮಿಂಚುಗಳ ಪ್ರಯುಕ್ತ ಮನೆಯ ದೀಪ ಆರಿಹೋಗಿ ಬಹಳ ಹೊತ್ತಾಗಿತ್ತು. ಮನೆಯಲ್ಲಿದ್ದ ಒಂದೇ ಒಂದು ಲೇಂಪ್ ಅನ್ನು ಪ್ರೇಮ ಅಡುಗೆಮನೆಗೆ ಒಯ್ದಿದ್ದಳು. ಪ್ರೇಮ ಕಿರುದನಿಯಲ್ಲಿ ಹಾಡುತ್ತಿದ್ದ 'ದೇವಿ ಭುವನಮನಮೋಹಿನಿ' ಹಾಡು ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ಕುಳಿತಲ್ಲಿಯೇ ಗೋಡೆಗೊರಗಿ ಎವೆ ಮುಚ್ಚಿದ್ದೆ. ಅಷ್ಟರಲ್ಲಿ ಒಳ ಬಂದ ಪ್ರೇಮ "ಮರೆತೆ ಶಾಸ್ತ್ರಿ ಮಧ್ಯಾಹ್ನ ಅಂಚೆಯವನು ಕಾಗದವೊಂದನ್ನು ಕೊಟ್ಟುಹೋದ. ಇಲ್ಲಿದೆ ನೋಡಿ" ಎಂದಳು. "ಈ ಮೂಲೆಯಲ್ಲಿ ಗೋಡೆಗೊರಗಿ ಕುಳಿತಿದ್ದೇನೆ ಪ್ರೇಮ. ಹುಷಾರು... ಎಲ್ಲಾದರೂ ಮುಗ್ಗರಿಸೀಯೆ. ದೀಪ ಬರಲಿಬಿಡು. ಆ ಮೇಲೆ ಓದೋಣಂತೆ. ಯಾರೋ ಸ್ನೇಹಿತರು ಬರೆದಿರಬೇಕು" ಎಂದೆ. "ಮೇಜಿನ ಮೇಲೆ ಇಟ್ಟಿದ್ದೇನೆ ನೋಡಿ ಕಾಗದವನ್ನ" ಎಂದು ಪ್ರೇಮ ಅಡುಗೆ ಮನೆಗೆ ನಡೆದಳು.

ಇನ್ನೇನು ಆರಿಹೋಗುವಂತಿದ್ದ ದೀಪದ ಮುಂದೆ ಕುಳಿತು ಊಟ ಮಾಡುತ್ತಿದ್ದಾಗ ವಿದ್ಯುದ್ದೀಪ ಹತ್ತಿಕೊಂಡಿತು. ಪ್ರೇಮ ನಗುತ್ತ "ಕೊನೆಗಾದರೂ ಬಂದಿತಲ್ಲ" ಎಂದಳು.

ಊಟ ಮುಗಿಸಿ, ಕೋಣೆಗೆ ನಡೆದು ಹಾಸಿಗೆಯ ಮೇಲೆ ದೇಹ ಚಾಚಿದಾಗ ಕಾಗದದ ನೆನಪಾಯಿತು. ಮೇಲೆದ್ದು ಮೇಜಿನ ಮೇಲಿದ್ದ ಕಾಗದವನ್ನು ತೆಗೆದುಕೊಂಡೆ. ಲಕೋಟೆಯ ಮೇಲೆ ಬರೆದಿದ್ದ ವಿಳಾಸ ವಿಚಿತ್ರವಾಗಿತ್ತು. ಅಪರಿಚಿತ ಹಸ್ತಾಕ್ಷರಗಳನ್ನು ಕಂಡು ನನ್ನ ಕುತೂಹಲ ಕೆರಳಿತು. ಲಕೋಟೆಯನ್ನು ಹರಿದು ಮಡಿಚಿದ್ದ ಕಾಗದವನ್ನು ಅಗಲವಾಗಿ ಚಾಚಿದೆ. ಮೊದಲು ಬರೆದವರ ಹೆಸರನ್ನು ನೋಡಿದೆ. ಓ!! ಬರೆದಿದ್ದವರು ನಿಜವಾಗಿಯೂ ಆ ಕೆಯೇ! ಆ ವ್ಯಕ್ತಿಯೇ!! ೬ ವರುಷಗಳ ಬಳಿಕ ಪ್ರಥಮತಃ ನನ್ನೆಡೆಗೆ ಬಂದಿದ್ದ ಕಾಗದ ನನ್ನಲ್ಲಿ ಯೋಚನಾತರಂಗಗಳನ್ನೆಬ್ಬಿಸಿತು. ಹಿಂದಿನ ಘಟನೆಗಳೆಲ್ಲಾ ಒಂದೊಂದಾಗಿ ಮುಂದೆ ಸುಳಿಯಲಾರಂಭಿಸಿದುವು. ಕಣ್ಣಿಗೆ ಕಾವಳ ಮುಸುಕಿದಂತಾಯ್ತು. ಕಾಗದವನ್ನು ಬದಿಗಿಟ್ಟು ಹಣೆಯ ಮೇಲೆ ಜಾರುತ್ತಿದ್ದ ಸ್ವೇದಬಿಂದುಗಳನ್ನು ಬೆರಳುಗಳಿಂದ ಮಿಡಿದೆ. ಹಾಲಿನ ಲೋಟವನ್ನು ಕೈಲಿ ಹಿಡಿದು ಒಳ ಬಂದ ಪ್ರೇಮ, ಶಿಲಾಮೂರ್ತಿಯಂತೆ ಕುಳಿತಿದ್ದ ನನ್ನನ್ನು ಕಂಡು ಬೆಚ್ಚಿರಬೇಕು. "ಏನ್ರಿ, ಹೀಗೆ ಕುಳಿತ್ರಿ... ಯಾರಿಂದ ಕಾಗದ? ಎಲ್ಲಾ ಸೌಖ್ಯತಾನೆ?" ಎಂದಳು ಪ್ರೇಮ. ಎಚ್ಚೆತ್ತ ನಾನು "ಆ್ಞ? ಕಾಗದಾನೆ? ಇದು ನನ್ನ ಬಹಳ ಹಳೆಯ ಸ್ನೇಹಿತರಿಂದ ಪ್ರೇಮ. ಕಾಗದಾನ ಇನ್ನೂ ಪೂರ್ತಿ ಓದಿಲ್ಲ ಬಾ ಕುಳಿತುಕೋ ಓದುತ್ತೇನೆ" ಎಂದೆ. ಹಾಲಿನ ಲೋಟವನ್ನು ಪಕ್ಕದಲ್ಲಿಟ್ಟು ಪ್ರೇಮ "ನೀವು ಓದಿ ಮುಗಿಸಿ, ನಾನು ಪಾತ್ರೆಗಳನ್ನು ಶುಭ್ರಪಡಿಸುತ್ತೇನೆ" ಎಂದಳು. "ಹಾಗಲ್ಲ ಪ್ರೇಮ ಈ ಕಾಗದ ಬರೆದಿರುವ ವ್ಯಕ್ತಿಯನ್ನು ಕುರಿತು ನಿನಗೆ ನಾನು ಹಲವಾರು ವಿಷಯಗಳನ್ನು ತಿಳಿಸಿದ್ದೇನೆ. ಆಕೆಯಿಂದಲೇ ಈ ಕಾಗದ. ಕುಳಿತುಕೋ ಕೇಳುವಿಯಂತೆ" ಎಂದೆ. ಪ್ರೇಮ ಗೋಡೆಗೊರಗಿ ಕುಳಿತಳು. "ಆಗಾಗ ನಿನ್ನಲ್ಲಿ ಲೀಲ ಎಂಬ ವ್ಯಕ್ತಿಯನ್ನು ಕುರಿತು ಮಾತನಾಡಿದ್ದೆ ನೋಡು ಪ್ರೇಮ ಆಕೆಯಿಂದಲೇ ಈ ಕಾಗದ. ಆಕೆಯನ್ನು ನೋಡಿಯೇ ೬ ವರುಷಗಳಾದುವು. ಇಂದು ಆಕೆಯಿಂದ ಬಂದ ಈ ಕಾಗದ ಹಿಂದಿನ ನೆನಪುಗಳನ್ನೆಲ್ಲಾ ಸ್ಮೃತಿಗೆ ತಂದಿತು" ಎಂದೆ. ನಿಧಾನವಾಗಿ ಆಶ್ಚರ್ಯಮಿಳಿತ ದನಿಯಲ್ಲಿ ಪ್ರೇಮ "ಓ, ಆಕೆಯಿದೇನು ಪಾಪ, ನೋಡಿ. ೬ ವರುಷಗಳಾದರೂ ಆಕೆ ನಿಮ್ಮನ್ನು ಮರೆತಿಲ್ಲ. ಎಷ್ಟೇ ಆಗಲಿ ಹೆಣ್ಣುಹೃದಯ. ನೀವು ನೋಡಿ, ನಾವೇನಾದರೂ ಆಕೆಯ ಮಾತೆತ್ತಿದರೆ 'ಈಗೇಕೆ ಪ್ರೇಮ ಅದು, ಅದೆಲ್ಲ ಹಿಂದಿನ ಕತೆ" ಎನ್ನುವಿರಲ್ಲ. ಹಿಂದೊಮ್ಮೆ ನೀವು ಅಷ್ಟು ಪ್ರೀತಿಸಿದ್ದ ವ್ಯಕ್ತಿಯನ್ನು ಇಂದು ಇಷ್ಟು ಸುಲಭವಾಗಿ ಮರೆತಿದ್ದೀರಿ. ಆದರೆ ಆಕೆ ಮಾತ್ರ ನಿಮ್ಮನ್ನು ಆಗಾಗ ನೆನಸುತ್ತಿರಬೇಕು." ಎಂದಳು. ಮೊದಲೇ ನನ್ನ ಹೃದಯ ಹಿಂದಿನ ನೆನಪುಗಳಿಂದ ನೊಂದಿತ್ತು. ಆ ನೋವಿನ ಜ್ವಾಲೆಗೆ ಪ್ರೇಮಳ ನುಡಿಗಳು ಗಾಳಿ ಹಾಕಿದುವು. ತುಸು ಹೊತ್ತು ತೆಪ್ಪಗಿದ್ದು ಬಳಿಕ ಕಾಗದವನ್ನೋದಲು ತೊಡಗಿದೆ. ಪ್ರೇಮ ಆಲಿಸುತ್ತ ಕುಳಿತಳು. ಕಾಗದವನ್ನು ಓದಿ ಮುಗಿಸಿದ ಬಳಿಕ "ಎಂತಹ ನಿರ್ಭಾಗ್ಯೆ ಆಕೆ. ಪಾಪ ಇತ್ತ ಪತಿಯಿಂದಲೂ ಸೌಖ್ಯವಿಲ್ಲ, ಅತ್ತ ಮಕ್ಕಳಂತೂ ಇಲ್ಲವೇ ಇಲ್ಲ. ಮೊದಲನೆಯ ಮಗು ೯ ತಿಂಗಳು ಜೀವಿಸಿತ್ತಂತೆ, ಎರಡನೆಯದು ೨ ತಿಂಗಳು; ಮೂರನೆಯದು ಹೊಟ್ಟೆಯಿಂದ ೪ ತಿಂಗಳುಗಳಿಗೇ ಹೊರಬಿತ್ತಂತೆ. 'ಎಲ್ಲಾ ನನ್ನ ಕರ್ಮ' ಎಂದು ಬರೆದಿದ್ದಾಳೆ. ಆಕೆಯ ಪತಿಯಂತೂ ಯಾವ ವಿಷಯಗಳನ್ನೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲವಂತೆ. ಎಲ್ಲವನ್ನೂ ಓದುತ್ತೇನೆ ಕೇಳು.

"ಅವರಿಗೇನು? ಈ ಶಹರಿನಲ್ಲಿ ಹತ್ತಿರ ಹತ್ತಿರ ಆರೇಳು ಪತ್ನಿಯರಿದ್ದಾರೆ. ಹತ್ತಿರ ಹಣವಿದೆ. ಮನೆಗೆ ಬಂದರೆ ಅವರು ನನ್ನ ಬಳಿಯಿರುವುದು ಒಂದೆರಡು ಘಂಟೆಗಳು ಮಾತ್ರ. ಅವರು ಮನೆಗೆ ಬಂದಾಗಲಾದರೂ ನಾನು ಅವರ ಹತ್ತಿರ ಇರಲಾಗುವುದೇ? ಸದಾ ಕುಡಿಯುತ್ತಿರುವ ಬೀರು, ವಿಸ್ಕಿ, ಸಿಗರೇಟುಗಳ ದುರ್ವಾಸನೆ ನನ್ನನ್ನು ದೂರವಿರಿಸುತ್ತದೆ. ನಮ್ಮಿಬ್ಬರ ಹೃದಯಗಳು ದಿನ ದಿನಕ್ಕೆ ದೂರವಾಗುತ್ತಿವೆ.

"೩ ದಿನಗಳ ಹಿಂದೆ ನಾನು ಪುಸ್ತಕವೊಂದನ್ನೋದಲು ಕೈಗೆ ತೆಗೆದುಕೊಂಡೆ. ನಾನು ವಿದ್ಯಾರ್ಥಿನಿಯಾದಾಗ ನನ್ನ ಪಠ್ಯಪುಸ್ತಕವದು. ಪುಸ್ತಕ ಕೈಲಿ ಹಿಡಿದಿರುವಾಗ ಕೆಳಕ್ಕೆ ಏನೋ ಜಾರಿ ಬಿದ್ದಿತು. ಬಿದ್ದುದೇನೆಂದು ಬಾಗಿ ನೋಡಲು ಅದು ನಿಮ್ಮ ಭಾವಚಿತ್ರವಾಗಿತ್ತು. ಒಂದು ದಿನ ನೀವು "ನನ್ನ ಪ್ರೇಮದ ಕುರುಹಾಗಿ ಇದು ನಿನ್ನ ಬಳಿ ಇರಲಿ" ಎಂದು ಆ ಭಾವಚಿತ್ರವನ್ನು ನನಗೆ ಕೊಟ್ಟಿದ್ದಿರಿ. ಅಂದಿನಿಂದಲೂ ಆ ಭಾವಚಿತ್ರ ಆ ಪುಸ್ತಕದಲ್ಲಿಯೇ ಇತ್ತು. ಆಕಸ್ಮಿಕವಾಗಿ ಸಿಕ್ಕ ಆ ಒಂದು ಭಾವಚಿತ್ರ ನನಗೆ ಹಿಂದಿನ ನೆನಪುಗಳನ್ನೆಲ್ಲಾ ಸ್ಮೃತಿಗೆ ತಂದಿತು. ಒಮ್ಮೆ ನಿಮ್ಮ ಮೃದು ಹೃದಯವನ್ನು ನಾನೆಷ್ಟು ಗಾಯಗೊಳಿಸಿದೆ ಎಂದು ನನ್ನನ್ನು ನಾನೇ ಹಳಿದುಕೊಂಡೆ. ಅಗ ಜೀವನ ಎಷ್ಟು ಸುಖಮಯವಾಗಿತ್ತು. ನಿಮ್ಮಲ್ಲಿ ನನಗೆ ಗೌರವವಿತ್ತು, ಪುರಸ್ಕಾರವಿತ್ತು; ಆದರೆ ಪ್ರೇಮವಿರಲಿಲ್ಲ. ನನ್ನನ್ನು ಅಷ್ಟು ಪ್ರೀತಿಸುತ್ತಿದ್ದ ನಿಮ್ಮಲ್ಲಿ ನನಗೇಕೆ ಪ್ರೇಮವಿರಲಿಲ್ಲವೋ ನಾ ಕಾಣೆ.

"ಒಂದು ದಿನ ನೀವು ನಮ್ಮಿಬ್ಬರ ವಿವಾಹದ ಪ್ರಶ್ನೆ ಎತ್ತಿದಿರಿ. ಜ್ಞಾಪಕವಿದೆಯೇನು? ನೀವು ಮರೆತರೂ ನಾನದನ್ನು ಮರೆಯಲಾರೆ. ಹೌದು, ನಾನು ಒಲ್ಲೆನೆಂದೆ. ನಿಮ್ಮ ಉದ್ಧಟತನಕ್ಕೆ ನಿಮ್ಮನ್ನು ಹಳಿದೆ. ತಲೆ ತಗ್ಗಿಸಿ ನೀರವವಾಗಿ ಕುಳಿತಿದ್ದ ನೀವು ಕೊನೆಗೆ ಮೇಲೆದ್ದು 'ನನ್ನನ್ನು ಮರೆಯದಿರಿ' ಎಂಬ ಪದಗಳನ್ನು ಮಾತ್ರ ಹೇಳಿ ಮಾಯವಾದಿರಿ. ನೀವು ಹೊರಹೋದಬಳಿಕ ಬಹಳ ಹೊತ್ತು ನಾನು ಕುಳಿತಲ್ಲಿಯೇ ಕುಳಿತೆ. ನನ್ನೆದುರಿಗೆ ಬರಿದಾಗಿದ್ದ ಕುರ್ಚಿಯಲ್ಲಿ ನೀವಿನ್ನೂ ಕುಳಿತಿರುವಂತೆ ಭಾಸವಾಯಿತು. ನನ್ನ ಮಾತುಗಳು ನಿಮ್ಮ ಮೃದು ಹೃದಯದ ಮೇಲೆ ಪಡಿಸುವ ಆಘಾತವನ್ನು ನಾನು ಚೆನ್ನಾಗಿ ಅರಿತಿದ್ದೆ. ಮತ್ತೆ ನಿಮ್ಮನ್ನು ಕರೆಯೋಣವೇ ಎನ್ನಿಸಿತು. ಆದರೆ ನೀವು ದೃಷ್ಟಿಯಿಂದ ದೂರವಾಗಿದ್ದಿರಿ. ಕೊನೆಗೆ ನಡೆದು ನಿಮ್ಮ ಭಾವಚಿತ್ರವನ್ನು ನೋಡುತ್ತ ಕುಳಿತೆ. ಅಂದಿನ ರಾತ್ರಿಯೆಲ್ಲ 'ನನ್ನನ್ನು ಮರೆಯದಿರಿ' ಎಂಬ ನಿಮ್ಮ ಪದಗಳು ಕೇಳಿ ಬರುತ್ತಿದ್ದುವು.

"ಹೌದು, ಅದು ೬ ವರುಷಗಳ ಹಿಂದಿನ ಮಾತು. ನಮ್ಮಿಬ್ಬರ ಜೀವನದಲ್ಲಿ ಈ ನಡುವೆ ಅದೆಷ್ಟೋ ಬದಲಾವಣೆಗಳಾಗಿವೆ. ನೀವು ಸುಖವಾಗಿರುವಿರೆಂದು ಬಗೆದಿದ್ದೇನೆ. ವಿರಾಮವಿದ್ದರೆ ಒಂದೆರಡು ದಿನ ನಮ್ಮ ಮನೆಗೆ ಬನ್ನಿ. ಹಾಗೇ ನಿಮ್ಮ ಪತ್ನಿಯನ್ನೂ ಕರೆತರಲು ಮರೆಯಬೇಡಿ. ಆಕೆಗೆ ನನ್ನ ನಮನಗಳನ್ನು ತಿಳಿಸಿ."

ಪ್ರೇಮ, ನಾನು, ಬಹಳ ಹೊತ್ತು ಮೂಕರಂತೆ ಕುಳಿತೆವು. ಪ್ರೇಮ ಅಶ್ರುನಯನಳಾಗಿ "ದೀನ ಬಾಳಿನ ದುರಂತ ವ್ಯಕ್ತಿ ಹೆಣ್ಣು. ಪಾಪ, ಹೋಗಿ ಆಕೆಯನ್ನೊಮ್ಮೆ ಕಂಡು ಬನ್ನಿ. ಆಕೆಯ ಹೃದಯ ಈ ನಡುವೆ ಬಹಳ ನೊಂದಿರಬೇಕು. ಛೇ ಭೂಮಿಯ ಮೇಲೆ ಹೆಣ್ಣಾಗಿ ಜನಿಸಬಾರದು" ಎಂದಳು. ಹೊರಗಡೆ ಮಳೆ ನಿಂತಿತ್ತು. ಕಿಟಕಿಯಿಂದ ಶೀತಳ ಗಾಳಿ ಒಳಬೀಸಿ ನಾನು ಕೈಲಿ ಹಿಡಿದಿದ್ದ ಲೀಲಳ ಪತ್ರವನ್ನು ಅಲುಗಾಡಿಸುತ್ತಿತ್ತು. ಕೊಠಡಿಯಲ್ಲಿನ ಬೆಳಕು ಕಿಟಕಿಯಿಂದ ತೂರಿ ಹೊರಗಡೆ ರಸ್ತೆಯ ಮೇಲೆ ಪಸರಿಸಿತ್ತು. ಯಾರೋ ಒಮ್ಮೆ "ಹೆಣ್ಣಿನ ಬಾಳು ಕಣ್ಣೀರು" ಎಂದುದು ಜ್ಞಾಪಕಕ್ಕೆ ಬಂದಿತು. ಮೇಲೆದ್ದ ಪ್ರೇಮ "ಸಾರ್ಥಕವಾಯಿತು ಲೋಟದಲ್ಲಿರುವ ಹಾಲನ್ನು ಗೋಡೆಯ ಮೇಲಿರುವ ಕೃಷ್ಣನಿಗೆ ಅರ್ಪಿಸಿದ್ದೀರೋ?" ಎಂದಳು. ಎಚ್ಚೆತ್ತ ನಾನು "ಓ... ಹಾಲು ಆರಿ ಹೋಯಿತೇನು... ಹೋದರೆ ಹೋಗಲಿ, ಅದನ್ನೇ ಕುಡಿಯುತ್ತೇನೆ" ಎಂದೆ.

ಮರುದಿನ ಬೆಳಗ್ಗೆ ಅಫೀಸಿಗೆ ಹೊರಟು ನಿಂತಾಗ "ಪ್ರೇಮ, ಇನ್ನು ಒಂದು ವಾರ ಬಿಟ್ಟು ಬೊಂಬಾಯಿಗೆ ಲೀಲಳನ್ನು ನೋಡಲು ಹೋಗೋಣ" ಎಂದೆ. ಪ್ರೇಮ ತಲೆದೂಗಿದಳು.

× × ×

ಹೊಗೆಯನ್ನುಗುಳುತ್ತ ಬೊಂಬಾಯಿಯ ದಿಕ್ಕಿಗೆ ರೈಲು ಧಾವಿಸುತ್ತಿತ್ತು. ದಾರಿಯುದ್ದಕ್ಕೂ ನಾನು ಪ್ರೇಮಳಿಗೆ ಲೀಲಳಿಗೆ ಸಂಬಂಧಿಸಿದ ವಿಷಯಗಳನ್ನೇ ಹೇಳುತ್ತಿದ್ದೆ. ಹಿಂದಿನ ಒಂದೊಂದು ದೃಶ್ಯವನ್ನೂ ಇಂದು ಕಲ್ಪಿಸಿಕೊಂಡಾಗ, ಏಕೋ, ನಾನು ಗಂಡಸೆಂದೇ ಮರೆಯುತ್ತಿದ್ದೆ. ಲೀಲಳೆಂದರೆ ಹಿಂದೆ ನನಗೆಷ್ಟು ಪ್ರೇಮವಿತ್ತು. ಅವಳೊಡನೆ ಎಷ್ಟು ಸರಸವಾಡುತ್ತಿದ್ದೆ... ಎಷ್ಟು ಕೆಣಕುತ್ತಿದ್ದೆ. ಒಂದು ದಿನ ಲೀಲಳನ್ನು ಕೆಣಕಿ, ಅವಳು ಕೋಪಗೊಂಡಂತೆ ನಟಿಸಿದಾಗ ಅವಳ ಕೆನ್ನೆಗೇರಿದ ರಕ್ತ ಅವಳ ರೂಪವನ್ನು ದ್ವಿಗುಣಿತಗೊಳಿಸಿತ್ತು. ಸನಿಯದಲ್ಲಿದ್ದ ನಾನು ಮೈಮರೆತು ಅವಳ ಕೈಹಿಡಿದುಕೊಂಡಿದ್ದೆ. ನಾಚಿ ಪ್ರೇಮ 'ಕೈಬಿಡಿ' ಎಂದು ಕೊಸರಿಕೊಂಡಿದ್ದಳು. ಆ ಧೈರ್ಯ ಆಗ ನನ್ನಲ್ಲೆಲ್ಲಿಂದ ಬಂದಿತು?... ಇನ್ನೂ ಹೀಗೇ ಯೋಚನಾಲಹರಿ ರೈಲಿನ ವೇಗಕ್ಕಿಂತಲೂ ಅತಿಯಾದ ವೇಗದಿಂದ ಮುಂದೆ ಸಾಗಿತ್ತು.

ವಿಕ್ಟೋರಿಯ ಟರ್ಮಿನಸ್ಸನ್ನು ತೊರೆದು ಹೊರಗೆ ನಡೆದಾಗ ಡ್ರೈವರ್ ಒಬ್ಬ ಹತ್ತಿರ ಬಂದು ನನ್ನ ಹೆಸರನ್ನು ಕೇಳಿದ. ಲೀಲ ಅವನನ್ನು ನಿಲ್ದಾಣದಿಂದ ನಮ್ಮನ್ನು ಕರೆದೊಯ್ಯಲು ಕಳುಹಿಸಿದ್ದಳು. ಪ್ರೇಮ ನಾನು ಕಾರಲ್ಲಿ ಕುಳಿತು ಲೀಲಳ ಮನೆಗೆ ಹೊರಟೆವು. ನನ್ನ ಹೃದಯ ಮಿಡಿಯುತ್ತಿದ್ದ ರವವು ಪಕ್ಕದಲ್ಲಿದ್ದ ಪ್ರೇಮಳಿಗೂ ಕೇಳಿಸಿರಬೇಕು. ೬ ವರುಷಗಳ ಬಳಿಕ ಮತ್ತೆ ನಾನು ಹಿಂದೊಮ್ಮೆ ಪ್ರೀತಿಸುತ್ತಿದ್ದ ವ್ಯಕ್ತಿಯನ್ನು ಕಾಣಲು ಹೋಗುತ್ತಿದ್ದೆ. ಯಾರು 'ನನ್ನನ್ನು ಮರೆತು ಬಿಡಿ' ಎಂದಿದ್ದಳೋ ಆಕೆಯಿಂದಲೇ ಆಹ್ವಾನಿತನಾಗಿ ಆಕೆಯ ಮನೆಗೆ ಹೋಗುತ್ತಿದ್ದೆ. ಹಿಂದಿನ ದಿನಗಳೆಲ್ಲಾ ಮುಂದೆ ಸುಳಿಯುತ್ತಿದ್ದುವು.


ಕಾರು ಬಂಗಲೆಯ ಮುಂದೆ ಹೋಗಿ ನಿಂತುದೇ ತಡ. ಒಳಗಿನಿಂದ ಲೀಲ ಧಾವಿಸಿ ಬಂದಳು. ಅವಳ ಮುಖದಮೇಲೆ ಆನಂದವೇ ಮೂರ್ತಿಮತ್ತಾಗಿ ನೆಲಸಿತ್ತು. ಆಕೆಯ ಸಂತೋಷ ಆಕೆಯ ಪ್ರಫುಲ್ಲಿತವದನದಿಂದಲೇ ಕಂಡುಬರುತ್ತಿತ್ತು. ೬ ವರುಷಗಳು ಸಂದಿದ್ದರೂ ಲೀಲ ಎಷ್ಟು ಚಲುವಾಗಿದ್ದಳು? ಹತ್ತಿರ ಬಂದು "ಕೊನೆಗಾದರೂ ಬಂದಿರಲ್ಲ" ಎಂದಳು ತೊದಲುನುಡಿಗಳಿಂದ. ಅದೇ ಮಂಜುಳ ಧ್ವನಿ... ಅದೇ ಮಧುರ ಕೊರಲು... ಅದೇ ಚೆಲುವಿನ ನಿಲುವು. ಲೀಲ ಪ್ರೇಮಳನ್ನು ಕಂಡಳು. ಅವರಿಬ್ಬರೂ ಕ್ಷೇಮಸಮಾಚಾರಗಳನ್ನು ಕುರಿತು ಮಾತನಾಡುತ್ತಿದ್ದರು. ನಗುತ್ತ ನಾನು "ಪ್ರೇಮ, ಈ ವ್ಯಕ್ತಿಯ ವಿಷಯವಾಗಿ ಇಷ್ಟು ದಿನವೂ ನನ್ನಿಂದ ನೀನು ಕೇಳಿದ್ದೆ. ಇಂದು ಆ ವ್ಯಕ್ತಿಯನ್ನೇ ಕಾಣುತ್ತಿರುವೆ" ಎಂದೆ. ಲೀಲ ನಕ್ಕಳು. ಹಿಂದಿನ ಕುಂಟುನಗೆ ಮಾಯವಾಗಿ ಈಗಿನ ನಗುವಿನಲ್ಲಿ ಗಾಂಭೀರ್ಯವಿತ್ತು. ಹೆಣ್ಣು ಹೃದಯಗಳೆರಡೂ ಒಂದನ್ನೊಂದು ಅರಿತುವು. ನಾನು ಕುರ್ಚಿಯೊಂದರಲ್ಲಿ ಕುಳಿತುಕೊಂಡೆ. ಏಕೋ, ಬಹಳ ಹೊತ್ತು ಕೂರಲೂ ಸಹ ದೇಹದಲ್ಲಿ ಕಸುವಿರಲಿಲ್ಲ. ಬಹಳ ದಿನಗಳ ಹಿಂದೆ ಪ್ರೇಮ ನನ್ನ ಪತ್ನಿಯಾಗಲು ಎಷ್ಟು ಹತ್ತಿರದಲ್ಲಿದ್ದಳು... ಈಗೇಕೆ ಆ ಮಾತು ..

ಬಹಳ ದಿನಗಳ ಬಳಿಕ ಮತ್ತೆ ಕಲೆತ ನಮ್ಮಿಬ್ಬರ ಬಾಯಿಗಳಿಗೆ ಬೀಗ ಹಾಕಿದಂತಾಯ್ತು. ಇಬ್ಬರ ಬಾಯಿಂದಲೂ ಮಾತೇ ಹೊರಡದು. ಒಬ್ಬರನ್ನೊಬ್ಬರು ನೋಡುತ್ತ ಲೀಲ ನಾನು ಬಹಳ ಹೊತ್ತು ಕುಳಿತಿರುತ್ತಿದ್ದೆವು. ಲೀಲಳದು ಎಂತಹ ಪ್ರೇಮ ಹೃದಯ! ೬ ವರುಷಗಳು ಸಂದಿದ್ದರೂ ನನ್ನನ್ನು ಮರೆತಿಲ್ಲವಲ್ಲ... ಅಂದು ರಾತ್ರಿ ಲೀಲಳ ಪತಿಯನ್ನು ಕಂಡೆ. ಪೋಕಿ ಮನುಷ್ಯ. ಸೂಳೆಯರ ಸಹವಾಸದ ಹುಚ್ಚಿನಲ್ಲಿ ಮನೆಯಲ್ಲಿದ್ದ ಮುದ್ದಿನ ಗಿಣಿಯನ್ನು ಮರೆತಿದ್ದ. ಎಷ್ಟೇ ಆಗಲಿ ದೂರದ ಬೆಟ್ಟ... ಲೀಲ ನಾನು ಹಿಂದಿನ ದಿನಗಳನ್ನು ನೆನೆಯುತ್ತ ಕುಳಿತರೆ ದಿನ ಹೋಗುವುದೇ ತಿಳಿಯುತ್ತಿರಲಿಲ್ಲ. ಒಂದು ದಿನ ಮಾತಿನ ಮಧ್ಯೆ ಲೀಲ "ನಾನು ಅಂದು ಬಹಳ ನಿಷ್ಠುರಳಾಗಿದ್ದೆ, ಅಲ್ಲವೇ?" ಎಂದಳು. "ಎಂದು ಲೀಲ... ಓ!... ಅಂದೇನು? ನಾನು 'ಮರೆಯದಿರಿ' ಎಂದ ದಿನ. ನೀನು ಎಂದೂ ನಿಷ್ಠುರಳಾಗಿರಲಿಲ್ಲ. ಲೀಲ. ನಿನಗೆ ನಾನು ಒಪ್ಪಿಗೆಯಿಲ್ಲದ ಮಾತ್ರಕ್ಕೆ ನೀನು ನಿಷ್ಠುರಳಾಗುವಿಯೇನು? ಆ ದಿನಗಳಲ್ಲಿ ನಾನು ನಿನಗೆ ಬಹಳ ಕಿರುಕುಳ ಕೊಟ್ಟಿರಬೇಕು" ಎಂದೆ. ಗಂಭೀರವಾಗಿ ಲೀಲ "ನನ್ನ ಜೀವನದ ರಸನಿಮಿಷಗಳವು" ಎಂದಳು.

ಒಂದು ವಾರದ ಬಳಿಕ ನಾವು ಹೊರಟು ನಿಂತೆವು. ಲೀಲಳ ಕಣ್ಣುಗಳು ಅಶ್ರುಪೂರಿತವಾದುವು. ನನ್ನನ್ನು— ಹಿಂದಿನ ಗೆಳೆಯನನ್ನು— ಆಕೆ ಒಬ್ಬ ಆತ್ಮೀಯ ಬಂಧುವೆಂದು ಭಾವಿಸಿದ್ದಳು. ಪರಊರಿನಲ್ಲಿ ಸೌಖ್ಯವರಿಯದ ಆ ಜೀವಿ ಇಂದು ಮತ್ತೆ "ಹಳೆಯ ಪಳಕೆಯ ಮುಖಗಳೊಡನೆ" ಕಲೆತು ಹಲವಾರು ದಿನಗಳು ವಾಸಿಸಲು ಬಯಸಿತ್ತು.

ನಾನು ಪ್ರೇಮ ಕಾರಿನಲ್ಲಿ ಕುಳಿತಾಗ ಹತ್ತಿರ ಬಂದು ನಿಂತ ಲೀಲ "ಆಗಾಗ ಬರುತ್ತಿರಬೇಕು. ಮುಂದಿನ ಸಲ ಬರುವಾಗ ಇಬ್ಬರೇ ಬರಬೇಡಿ. ನೀವು ಹಿಂದೊಮ್ಮೆ ಹೇಳಿದ್ದ ನುಡಿಗಳನ್ನು ನಾನೇ ಇಂದು ಹೇಳುತ್ತೇನೆ. ನನ್ನನ್ನು 'ಮರೆಯದಿರಿ' ... ನಮಸ್ಕಾರ..." ಎಂದಳು. ಗದ್ಗದಕಂಠಳಾಗಿ ಪ್ರೇಮ ಕರವಸ್ತ್ರವನ್ನು ಕಣ್ಣಿಗೊತ್ತಿದ್ದಳು. ಕಾರು ಮುಂದೆ ನಡೆದಾಗ ಪ್ರೇಮ ನಿಟ್ಟುಸಿರು ಬಿಟ್ಟು" ಎಂತಹ ಪ್ರೇಮಹೃದಯ ಆಕೆಯದು. ನಾಲ್ಕೈದು ದಿನಗಳಲ್ಲಿ ನನ್ನ ಮನವನ್ನೇ ಸೂರೆಗೊಂಡಳಲ್ಲ. ಆಕೆ ತನ್ನ ಸತ್ತ ಮಕ್ಕಳ ವರ್ಣನೆಯನ್ನು ಮಾಡುತ್ತಿದ್ದಾಗಲಂತೂ ನನ್ನನ್ನು ನಾನೇ ಮರೆತು ಬಿಡುತ್ತಿದ್ದೆ. ಅಳಲಿನ ಕೊಳದಲ್ಲಿ ಆಕೆಯೊಂದು ಹಂಸ" ಎಂದಳು. ಉಕ್ಕಿ ಬರುತ್ತಿದ್ದ ದುಃಖವನ್ನು ತಡೆಯಲು ಕಿಟಕಿಯಿಂದ ಹೊರಕ್ಕೆ ತಲೆ ಹಾಕಿದೆ.

ರೈಲು ವಿಕ್ಟೋರಿಯ ಟರ್ಮಿನಸ್ಸನ್ನು ಬಿಟ್ಟು ಕದಲಿತು. ರೈಲಿನ ಜೊತೆಗೆ ಲೀಲಳ ರೂಪೂ ನಮ್ಮನ್ನು ಹಿಂಬಾಲಿಸಿ ಬರುತ್ತಿದ್ದಂತೆ ಭಾಸವಾಯಿತು.



ಮಾಲನ್ನರ ದುರ್ಮಾರ್ಗ

ದಕ್ಷಿಣ ಆಫ್ರಿಕದ ಮುಖ್ಯ ಮಂತ್ರಿ ಡಾ. ಮಾಲನ್ನರ ದುರ್ಮಾರ್ಗನೀತಿಯು ನಾಗರಿಕ ಲೋಕಕ್ಕೆ ಅವಮಾನಗೊಳಿಸುವಂಥದಾಗಿದೆ. ಬಿಳಿಯರನ್ನೂ ಉಳಿದವರನ್ನೂ ಸಂಪೂರ್ಣವಾಗಿ ಪ್ರತ್ಯೇಕಿಸುವುದರ ಸಲುವಾಗಿ ಅವರ ಸರಕಾರವು ರೇಲ್ವೆ, ಟ್ರಾಂ ಮತ್ತು ವಾಯುಮಾರ್ಗ ಈ ಎಲ್ಲವುಗಳಲ್ಲೂ ವಿಂಗಡವನ್ನು ಅಮಲಿಗೆ ತರುವ ಕಾಯದೆಗಳನ್ನು ಪಾಸುಮಾಡಿದೆ. ನೆಲ, ಜಲ, ವಾಯು ಮಾರ್ಗಗಳಲ್ಲಿ ಎಲ್ಲಿ ಪಯಣಮಾಡಿದರೂ ಬಿಳಿಯರಿಗೆ ಬಣ್ಣಗರ ನೆರಳು ಕೂಡ ಸೋಂಕದಂತೆ ವ್ಯವಸ್ಥೆ ಮಾಡಲಾಗಿದೆ. ಮೂಲನಿವಾಸಿಗಳಿಗಂತೂ ನಾಗರಿಕ ಹಕ್ಕುಗಳೇ ಇಲ್ಲ. ಹಿಂದೀಯರಿಗಿದ್ದ ಕೆಲವೇ ನಾಗರಿಕ ಹಕ್ಕುಗಳನ್ನೂ ಈಗ ಕಸಿದುಕೊಳ್ಳಲು ಅಗತ್ಯವಿರುವ ಕಾಯದೆಗಳನ್ನು ರಚಿಸಲಾರಂಭವಾಗಿದೆ. ಏಶಿಯನ್ನರ ಭೂಸುಧಾರಣೆಯ ಕಾಯದೆಯನ್ನು ತಿದ್ದಲು ಈಗ ಡಾ. ಮಾಲನ್ನರೇ ಸ್ವತಃ ಒಂದು ತಿದ್ದುಪಡಿಯನ್ನು ಶಾಸನ ಸಭೆಯ ಮುಂದೆ ಇಡಲಿದ್ದಾರೆ. ಆ ತಿದ್ದುಪಡಿಯ ಪ್ರಕಾರ ಹಿಂದೀಯರಿಗೆ ದ. ಆಫ್ರಿಕದ ಪಾರ್ಲಿಮೆಂಟಿನಲ್ಲಿ ಇರುವ ಪ್ರಾತಿನಿಧ್ಯವನ್ನು ಪೂರ್ಣವಾಗಿ ಕಿತ್ತು ಹಾಕಲಾಗುತ್ತದೆ. ಇದರಿಂದ ಹಿಂದೀಯರಿಗೆ ವ್ಯಾಪಾರ, ಕೃಷಿ, ಉದ್ಯಮಗಳಲ್ಲಿ ಬಿಳಿಯರ ಆಳಾಗಿ ಬಾಳಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಸಂ. ರಾ. ಸಂಘದಲ್ಲಿ ಪ್ರಭಾವಿಗಳಾಗಿರುವ ಬಿಳಿಯರು ಇದನ್ನು ಸಹಿಸಿದರೆ ಆಫ್ರಿಕ ಮತ್ತು ಏಶಿಯಗಳ ಸರ್ವಪ್ರಜೆಗಳ ಶತ್ರುತ್ವವನ್ನು ಕಟ್ಟಿಕೊಳ್ಳಬೇಕಾದೀತು; ಬಣ್ಣದ ಪ್ರಶ್ನೆಯು ಬಣ್ಣವೇ ಆಗ ಬದಲಾಗಿ ಅವರು ತಮ್ಮ ಗಂಡಸುತನವನ್ನು ತೋರಿಸುವ ಪ್ರಸಂಗ ಬರದಿರಲಾರದು.

"ಸಂಡೇ ಎಕ್ಸ್‌ಪ್ರೆಸ್ಸಿ"ನ ಪ್ರಕಾರ ಸಂ. ರಾ. ಸಂಘಕ್ಕೆ ದಕ್ಷಿಣ ಆಫ್ರಿಕದ ಪ್ರತಿನಿಧಿಯಾಗಿ ಹೋಗಲಿರುವ ಶ್ರೀಯುತ ಎರಿಕ್ ಲೌ ಎಂಬವನು ದಕ್ಷಿಣ ಆಫ್ರಿಕದಿಂದ ಎಲ್ಲ ಹಿಂದೀಯರನ್ನೂ ಹಿಂದುಸ್ತಾನಕ್ಕೆ ತಿರುಗಿ ಕಳಿಸುವ ಒಂದು ಯೋಜನೆಯನ್ನು ತಯಾರಿಸಿ ಸಂ. ರಾ. ಸಂಘವನ್ನು ಅದರಲ್ಲಿ ಸಹಕರಿಸಲು ಕೇಳಿಕೊಳ್ಳುವುದಾಗಿ ತಿಳಿಯುತ್ತದೆ. ಹಾಗೆ ಹಿಂದೀಯರನ್ನು ಹಿಂದಕ್ಕಟ್ಟಲು ೫ ರಿಂದ ೮ ಕೋಟಿ ಪೌಂಡುಗಳು ಬೇಕಾಗಬಹುದೆಂದೂ ಅದನ್ನು ದ. ಆಫ್ರಿಕದ ಒಕ್ಕೂಟ ಸರಕಾರವೇ ವಹಿಸುವುದೆಂದೂ ಆ ಯೋಜನೆಗೊಪ್ಪದೆ ಅಲ್ಲೇ ಉಳಿವ ಹಿಂದೀಯರು ಕಾಯದೆ ಒಡ್ಡುವ ಆತಂಕಗಳಿಗೆ ಬಲಿಯಾಗಿ ಬಾಳಬೇಕಾಗುವುದೆಂದೂ ಹೇಳಲಾಗಿದೆ.


ಅಮೇರಿಕದಲ್ಲಿ ಸ್ತ್ರೀ ಸಾಹಸ!

ಅಮೇರಿಕದಲ್ಲಿ ಅಧ್ಯಕ್ಷ ಚುನಾವಣೆಯ ಸಿದ್ಧತೆ ಸಾಗಿರುವುದು ತಿಳಿದ ವಿಷಯ. ರಿಪಬ್ಲಿಕನ್, ಡೆಮೊಕ್ರಾಟಿಕ್ ಮುಂತಾದ ಪಕ್ಷಗಳ ಜೊತೆಗೆ "ಮೇಡಂ ಪ್ರಸಿಡೆಂಟ್ಸ್ ಪಾರ್ಟಿ" ಎಂಬುದೊಂದು ಹೊಸ ಪಕ್ಷ ಸ್ಥಾಪಿತವಾಗಿದೆ. ಆ ಪಕ್ಷ ಹೆಂಗಸರದು. ಅವರು ಹೆಂಗಸೊಬ್ಬಳನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಬೇಕು ಎಂದು ಸಾರಿದ್ದಾರೆ. ಆದರೀಗ ಹಾಗೆ ಅವರು ಹುರಿಯಾಳನ್ನು ಹೆಸರಿಸಲಿಲ್ಲ. "ಹೆಂಗಸರೇ ಎದ್ದೇಳಿರಿ" ಎಂಬ ಒಂದು ಹೇಳಿಕೆಯಲ್ಲಿ ಹೆಂಗಸರು ಉತ್ತಮ ಪ್ರಪಂಚ ನಿರ್ಮಾಣದತ್ತ ಸಾಗಬೇಕು ಎಂದು ಪ್ರಕಟಿಸಿದೆ. ಆ ಸಂಘಕ್ಕೆ ೧ ಕೋಟಿ ಸದಸ್ಯೆಯರಿದ್ದಾರೆಂದೂ ಆ ಸಂಖ್ಯೆಯನ್ನು ೫ ಕೋಟಿಗೇರಿಸುವ ಪ್ರಯತ್ನ ನಡೆದಿದೆಯೆಂದೂ ತಿಳಿಯುತ್ತದೆ.

ದಿ. ರೂಸ್ವೆಲ್ಟರ ಪತ್ನಿ ಶ್ರೀಮತಿ ಎಲೀನರ್ ರೂಸ್ವೆಲ್ಟ್ ಮತ್ತು ಇತರ ಸ್ತ್ರೀ ಪ್ರಮುಖರು ಸಾರ್ವಜನಿಕ ಅಭಿಪ್ರಾಯದಂತೆ ಅಧ್ಯಕ್ಷಸ್ಥಾನಕ್ಕೆ ಅರ್ಹರೆಂದು ಹೇಳಲಾಗುತ್ತಿದೆ. ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳೆರಡರಲ್ಲೂ ಒಬ್ಬಳಿಗೆ ಸ್ಥಾನ ಸಿಗಬೇಕು ಇಲ್ಲದಿದ್ದರೆ ತಮ್ಮದೇ ಆದ ಒಂದು ಪಕ್ಷವನ್ನು ಸ್ಥಾಪಿಸಬೇಕಾಗುತ್ತದೆ ಎಂದು ಸ್ತ್ರೀ ಪ್ರಮುಖರು ಸಾರಿದರು.

ದುಸ್ತ್ಯಜ ನಾಡಾದ ಅಮೇರಿಕದಲ್ಲಿ ಮನೆ ಬಿಟ್ಟು ಹೊರ ಬರಲು ಸ್ತ್ರೀಯರಿಗೆ ಸಾಧ್ಯವಾಯಿತು. ಸ್ತ್ರೀ ಚಳವಳದ ಪುರಸ್ಕರ್ತರಿಲ್ಲದರೂ ಮೇಲಿನ ಮಾತನ್ನು ಗಮನಿಸತಕ್ಕದ್ದು: ಗೃಹೇತರ ವ್ಯವಹಾರದಲ್ಲಿ ಭಾಗವಹಿಸುವ ಹಕ್ಕು ಹೆಂಗಸರಿಗಿರಬೇಕೆಂಬುದಕ್ಕೆ ಯಾರೂ ವಿರೋಧಿಸಕೂಡದು. ಆಗಲೇ ಅವರಿಗೆ ಹೊಣೆ ಎಂದರೇನೆಂಬುವರ ಅರಿವಾಗುವುದು.

ಆದರೆ ಅಮೇರಿಕದ ಆರ್ಥಿಕ ಸುಸ್ಥಿತಿಯ ಸೋಪಾನದಲ್ಲಿ ಕುಳಿತ ನಮ್ಮ ಪ್ರಜಾವರ್ಗಗಳಲ್ಲಿ ಮೇಲಿನ ಸಮಾಜದ ಸ್ತ್ರೀಯರು ಕೆಳಗಿನ ಸಮಾಜದ ಸ್ತ್ರೀಪುರುಷರ ಅನುಕೂಲ ಅನನುಕೂಲಗಳನ್ನು ದುರ್ಲಕ್ಷಿಸುವುದು ಇಂದಿನ ರೂಢಿಯಾಗಿ ಬಿಟ್ಟಿದೆ. ಕೆಳಗಿನ ವರ್ಗದವರಲ್ಲಿ ಅಪ್ರಬುದ್ಧರಾದವರು ಊರು ಓಡುತ್ತದೆಂದು ಕುರುಡನೂ ಓಡಿದ ಎಂಬ ಗಾದೆಯನ್ನು ಅನುಸರಿಸಿ ತಂತಮ್ಮ ಮತ್ತು ಪರಸ್ಪರರ ಸೌಖ್ಯಭಂಗಕ್ಕೆ ಕಾರಣರಾಗುತ್ತಾರೆ.



ಈಗ ಲಂಡನ್ನಿನಲ್ಲಿ ನಡೆಯುತ್ತಿರುವ ೧೪ ನೆಯ ಒಲಿಂಪಿಕ್ ಪಂದ್ಯದ ಪ್ರಾರಂಭದ ಸಾಮಾನ್ಯ ನೋಟ. ಮುಂದೆ ಪರಿಕ್ರಮಿಗಾರರೂ ಮೇಲೆ ಪಾರಿವಾಳಗಳು ಸುತ್ತ ಹಾರುತ್ತಿರುವುದೂ ಇಲ್ಲಿ ಕಾಣುತ್ತಾರೆ.

ಮೇಲಿನ ಮಾತನ್ನು ಹೇಳಲು ಕೆಳಗಿನ ಉದಾಹರಣೆಯೇ ಕಾರಣ. ಅಮೇರಿಕದ ಸ್ತ್ರೀಯರಲ್ಲಿ ಹಲವರಿಂದು ಅನಾಗರಿಕತೆಗಿಳಿದಿದ್ದಾರೆ. ಕ್ಯಾಲಿಫೋರ್ನಿಯದಲ್ಲಿ ಶ್ರೀಮತಿ ಐಡಾ ಕೆಲ್ಲಿವರ್ತನಿಯನ್ ಎಂಬಾಕೆ ತಾನು ಸಾಕಿದ ಒಂದು ಇಲಿಯನ್ನು ತನ್ನ ಗಂಡ ಬೆಚ್ಚಗಿಡಲಿಲ್ಲ ಮತ್ತು ಅದು ಬಹಳ ತಿನ್ನುತ್ತದೆಯೆಂದು ಟೀಕಿಸಿದ ಎಂಬ ಆರೋಪದ ಮೇಲೆ ವಿವಾಹವಿಚ್ಛೇದ ಮಾಡಿಕೊಂಡಳೆಂದು ಪ್ರಸಿದ್ಧಿಯಾಗಿದೆ.

ಕಾಯದೆಯನ್ನು ವಂಚಿಸಬಹುದು; ಆದರೆ ನಮ್ಮ ಮನಸ್ಸನ್ನು ನಾವು ವಂಚಿಸಲಾರೆವು. ಮನಸ್ಸು ನಂಬಿಗೆಯಿಂದ ಗಟ್ಟಿಯಾಗುವುದಲ್ಲದೆ ಕೇವಲ ಬೌದ್ಧಿಕ ನಿರ್ಣಯದಿಂದಲ್ಲ. ಈ ಸತ್ಯವನ್ನು ಅರಿತು ಸಾಮಾಜಿಕ ನರನಾರಿಯರು ವಿವೇಕಿಗಳಾಗಿ ನಾಡಿನ ಪ್ರಜಾವರ್ಗಗಳ ಆರ್ಥಿಕ ವೈಷಮ್ಯವನ್ನು ತೊಡೆದು ಹಾಕಲು ಪ್ರಯತ್ನಿಸಿದರೆ ಸರ್ವರಿಗೂ ಸಮಾನ ಸಂದರ್ಭಗಳು ದೊರಕಿ ಭಾರತದಲ್ಲಿ ಅಮೇರಿಕದಂತೆಯೇ ಅತೃಪ್ತಿಯೆಂಬುದು ಮಾಯವಾಗಿ ಸರ್ವಾಂಗೀಣ ಉನ್ನತಿಯಾಗುವುದು. ಈ ದೃಷ್ಟಿಯಿಂದ ಅಮೇರಿಕದ ಸ್ತ್ರೀ ಪಕ್ಷದ ಸಾಹಸ ಶ್ಲಾಘನೀಯವಾಗಿದೆಯೆನ್ನಬೇಕಲ್ಲವೆ?

ಜೇರೂಸಲೇಮಿನಲ್ಲಿ ನಿಃಶಸ್ತ್ರೀಕರಣ

ಜೇರೂಸಲೇಮಿನಲ್ಲಿ ಶಾಂತಿ ಸ್ಥಾಪನೆ ಮಾಡಲು ೧೨ ಅಂಶಗಳ ಒಂದು ಯೋಜನೆಯನ್ನು ಅರಬರು ತಯಾರಿಸಿ ಸಂ. ರಾ. ಸಂಘದ ಮಧ್ಯಸ್ಥ ಕೌಂಟ್ ಬರ್ನಡೊತ್ತೆಯವರೊಡನೆ ಚರ್ಚಿಸುತ್ತಿರುವುದಾಗಿ ಸುದ್ದಿ ಬಂದಿದೆ. ಅದರಲ್ಲಿ ಜೇರೂಸಲೇಮಿನಲ್ಲಿ ಸಮಸಂಖ್ಯೆಯ ಯೆಹೂದಿ ಮತ್ತು ಅರಬ ಪೋಲೀಸರು ಸಂ. ರಾ. ಸಂಘದ ಸಂರಕ್ಷಕರೊಡನೆ ನಗರದ ಎರಡೂ ಭಾಗಗಳ ನಡುವೆ ನಿಂತು ಶಾಂತಿ ಪಾಲನೆ ಮಾಡಬೇಕೆಂದಿದೆ.

ಹೈದರಾಬಾದಿನ ತನ್ನ ರಾಯಭಾರಿಯ ಕಚೇರಿಯು ಮೇಲೆ ಪೊಲೀಸರಿಗಳು ಪಾಕಿಸ್ತಾನದಿಂದ ತನ್ನ ... ಬದಲು ... ಸಂಘಕ್ಕೆ ದೂರು ಕೊಟ್ಟಿದೆ. ಹೈದರಾಬಾದಿನ ಪಾಕಿಸ್ತಾನ ರಾಯಭಾರಿಯು ಹೇಳಿದಂತೆ ಆಗಸ್ಟ ೬ ರಂದು ಅವನ ಕಚೇರಿಯನ್ನು ಪೊಲೀಸರು ಪರೀಕ್ಷಿಸಿ ... ಮಾಡಿತೆಂದು ತಿಳಿಯುತ್ತದೆ.

ಅರಬ ಪರಿಷತ್ ಸಮಿತಿಯ ಉಪಾಧ್ಯಕ್ಷನಾದ ಜಮಾಲ್‌ಬೇ ಹುಸೇನಿಯು ನ್ಯೂಯಾರ್ಕಿನಿಂದ ದಮಾಸ್ಕಸ್ಸಿಗೆ ಹೋಗುವಾಗ ರಾಯ್ಟರ ಪ್ರತಿನಿಧಿಯೊಡನೆ, "ಅಮೇರಿಕವು ಯಹೂದಿಗಳಿಗೆ ಬೆಂಬಲಿಸುತ್ತ ಹೋದರೆ ಅರಬರು ರಶಿಯದ ಕೈಗೆ ಬೀಳಬಹುದು; ಅಂಥ ವೇಳೆಯಲ್ಲಿ ಅರಬರು ಪಾಲಿಸ್ತಾನದಲ್ಲಿ ಯುದ್ಧವನ್ನು ಸಾಗಿಸುತ್ತಲೇ ಹೋಗುವರು. ಒಂದು ವೇಳೆ ಅಲ್ಲಿಂದ ಅವರನ್ನು ಹೊರಗೆ ಹಾಕಿದರೆ ಹೊರಗೆ ನಿಂತಾದರೂ ಯುದ್ಧ ಮಾಡುವರಲ್ಲದೆ ಯಾವ ಒಪ್ಪಂದಕ್ಕೂ ಬರಲಾರರು" ಎಂದು ಹೇಳಿದುದಾಗಿ ತಿಳಿಯುತ್ತದೆ.

ಒಲಿಂಪಿಕ್ ಪಂದ್ಯದ ಮುಕ್ತಾಯ

ಆರೆಹುಚ್ಚನಾದ ಫ್ರೆಂಚ್ ಈಜುಗಾರ ಅಲೆಕ್ಸ್ ಜೇನಿಯು ೫೮ ಸೆಕೆಂಡುಗಳಲ್ಲಿ ೧೦೦ ಮೀಟರ್ ಈಜಿ "ಗ್ರ್ಯಾಂಡ್ ಪ್ರೈಜ್ ದಿ ಪ್ಯಾರಿಸ್" ಎಂಬ ಪಾರಿತೋಷಕವನ್ನು ಪಡೆದನು. ೩೦೦ ಮೀಟರಿನ ಸ್ಪರ್ಧೆಯಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದ ಜೋ ವಾರ್ಡರನು ೪೩.೩ ಸೆಕೆಂಡುಗಳಲ್ಲಿ ಈಜಿ ಪ್ರಥಮ ಬಹುಮಾನವನ್ನು ಪಡೆದನು. ೧೦೦ ಮೀಟರಿನ ಸ್ತ್ರೀ ಸ್ಪರ್ಧೆಯಲ್ಲಿ ಅಮೇರಿಕದ ಸೂ ಜಮ್ಮರಮನ್ನಳು ಗೆದ್ದಳು; ೪೦೦ ಮೀಟರದಲ್ಲಿ ಅಲ್ಲಿಯ ಆನ್ ಕರ್ಟಿಸ್ಸಳು ಜಯಶೀಲಳಾಗಿ ಬಂದಳು.

ಕ್ರಿಕೆಟ್ ಪಂದ್ಯದಲ್ಲಿ ಹಿಂದೆ ಎಂದೂ ಉಂಟಾಗದಂಥ ಅಪಜಯ ಇಂಗ್ಲಂಡಿಗೆ ಸಂಭವಿಸಿತು. ಆಸ್ಟ್ರೇಲಿಯದ ಮೇಲಿನ ೧೫ ನೆಯ ನಿರ್ಣಾಯಕ ಸ್ಪರ್ಧೆಯಲ್ಲಿ ಕೇವಲ ೫೨ ಸ್ಕೋರ್ ಮಾಡಿ ಸೋತಿತು. ಕಡೆಯ ಕ್ರಿಕೆಟ್ ಪಂದ್ಯದಲ್ಲಿ ಬ್ರಾಡ್‌ಮನ್ನನನ್ನು ಕೊಂಡಾಡದವರೇ ವಿರಳ. ಇಡೀ ೩೫ ಸಹಸ್ರ ಜನಸ್ತೋಮ ಕುಣಿದೆದ್ದು ಅವನನ್ನು ಕಂಡು ಹರ್ಷೋದ್ಗಾರ ಮಾಡಿತು.

ತಾ. ೧೪ ಕ್ಕೆ ಜಗತ್ತಿನ ೧೪ ನೆಯ ಒಲಿಂಪಿಕ್ ಪಂದ್ಯದ ಸಮಾರಂಭ ಕೊನೆಗಂಡಿತು. ಈ ಪಂದ್ಯದಲ್ಲಿ ಜಗತ್ತಿನ ೫೮ ರಾಷ್ಟ್ರಗಳು ಭಾಗವಹಿಸಿದ್ದವು. ಮುಕ್ತಾಯದ ಭಾಷಣ ಮಾಡುತ್ತ ಶ್ರೀಮಾನ್ ಸೀಗ್ ಫ್ರೀಡ್ ಎಡ್ ಸ್ಟ್ರಾಮರನು, "ಮಾನವ ಕುಲ ಬಯಸುವ ಶಾಂತಿಯನ್ನು ಒಲಿಂಪಿಕ್ ಪಂದ್ಯ ಒತ್ತಾಯದಿಂದ ತರಲಾರದಾದರೂ ಭೂಮಿಯಲ್ಲಿರುವ ಎಲ್ಲ ಮಾನವರೂ ಸಹೋದರರು ಎಂಬುದನ್ನು ತೋರಿಸಿಕೊಡುತ್ತದೆ" ಎಂದನು.

ಮದ್ದು ಗುಂಡು ಬಿರುಸು, ಬಾಣ, ವಾದ್ಯ ಗೀತ, ಬಾವುಟ, ಬೆಂಕಿ ಇವುಗಳ ಪ್ರದರ್ಶನದೊಡನೆ ೮೦೦ ಶ್ವೇತ ವಸ್ತ್ರಧಾರಿಗಳಾದ ಆಟಗಾರರು ಮುಕ್ತಾಯದ ಗೀತವಾಡಿ, ನೆರೆದಿದ್ದ ಸಾಮಾನ್ಯ ಮತ್ತು ಮಾನ್ಯ ಜನರ ಆನಂದೋದ್ಗಾರದೊಂದಿಗೆ ಯಶಸ್ವಿಯಾಗಿ ಪಂದ್ಯವನ್ನು ಮುಗಿಸಿದರು.

ವಿಚಿತ್ರ ವಿಶ್ವ

ಒಕ್ಕಣ್ಣ ಚೆಲುವೆ!



ಫ್ರಾನ್ಸಿನ ಟೂರ್‌ಕೋಯಿಂಗ್ ಪಟ್ಟಣದಲ್ಲಿ ಈ ಹುಡುಗಿ ೧೮೯೩ ರಲ್ಲಿ ಹುಟ್ಟಿ ಬೆಳೆದು ದೊಡ್ಡವಳಾದಳು. ಆದರೆ ೧೫ ನೆಯ ವರ್ಷ ವಯಸ್ಸಿನಲ್ಲೇ ಸ್ವರ್ಗಾರೋಹಣ ಮಾಡಿದಳು.

ಜನ್ಮಾಂತರದ ವಾತ್ಸಲ್ಯ

ಬಳ್ಳಾರಿಯ ಹೀಜಪ್ಪನ ಹಳ್ಳಿಯಲ್ಲಿ ಒಂದು ನಾಯಿಯು ತನ್ನ ಮರಿಗೆ ಮೊಲೆ ಕುಡಿಸದೆ ಪ್ರತಿನಿತ್ಯ ಒಂದು ಪಶುವಿನ ಕರುವಿಗೆ ಹಾಲೂಡಿಸುತ್ತದೆ. ಕರುವು ನಾಯಿಯನ್ನು ಕಂಡ ಕೂಡಲೇ ತನ್ನ ತಾಯಿ ಹತ್ತಿರ ಹೋದಂತೆ ಉತ್ಸಾಹದಿಂದ ಕಿಲಿಯುತ್ತ ಹೋಗುತ್ತದೆ. ನಾಯಿಯ ಮರಿಗೆ ಹಾಲಿಲ್ಲವಾಗಿ ಅದರ ಪೋಷಣೆಗೆ ಅದರ ಒಡೆಯರು ಆಕಳೊಂದನ್ನು ತಂದು ಅದಕ್ಕೆ ಆಕಿನ ಹಾಲನ್ನು ಕುಡಿಸುತ್ತಾರೆ! ಪೂರ್ವ ಜನ್ಮದ ಬಾಂಧವ್ಯವೆಂದಲ್ಲದೆ ಇನ್ನೇನೆನ್ನಬೇಕು ಈ ವಿಚಿತ್ರ ಸಂಬಂಧಕ್ಕೆ?

ಬಯ್ಗುಳ ಮಾರುವವನು!

ರೇಡಿಯೋದಲ್ಲಿ ಸುದ್ದಿ ಮುಂತಾದುವನ್ನು ಬಿತ್ತರಿಸುವುದೊಂದು ವಿಶಿಷ್ಟ ಕಲೆ. ಅದಕ್ಕೆ ನಡೆಸುವಿಯ ಕೆಲವು ನಿಯಮಗಳಿವೆ. ಆದರೆ ಅಮೇರಿಕದಲ್ಲೊಬ್ಬ ವಿಚಿತ್ರ ಮನುಷ್ಯನಿದ್ದಾನೆ. ಅವನ ಹೆಸರು ಆರ್ಥರ್ ಗಾಡ್‌ಫ್ರೇ ಎಂದು. ಈತನು ಜನರನ್ನು ಬೈದು ಬೇಗಿಸಿ ಅದನ್ನು "ಬ್ರಾಡ್‌ಕ್ಯಾಸ್ಟ್" ಮಾಡಿ ಬೇಕಾದಷ್ಟು ಸಂಪಾದನೆ ಮಾಡಿ ಬಿಟ್ಟಿದ್ದಾನೆ!

ಗಾಡ್‌ಫ್ರೇಯನ್ನು ಗೆಳೆಯರಿಗೆ ಅವನನ್ನು ಯಾರಾದರೂ ಹೊಡೆದು ಬಿಟ್ಟರೇನು ಗತಿ? ಎಂಬ ಹೆದರಿಕೆ. ಆದರೆ ಅವನು ಅಷ್ಟು ಹೆದರುವನಲ್ಲ. ಕಾಸು ಕೊಟ್ಟು "ಕಾಂಟ್ರಾಕ್ಟ್" ಮಾಡಿಕೊಂಡು ಬೈಯಿಸಿಕೊಳ್ಳುವವರನ್ನು ಕರೆದುಕೊಂಡು ಬರುತ್ತಾನೆ. ಅವನೂ ಒಮ್ಮೊಮ್ಮೆ ಮಿತಿಮೀರಿದರೆ ಸ್ವಲ್ಪ ಭಯವೇ. ಜನರು ಮಾತ್ರ ಇವನ ಈ ಕಲಹಕಾಂಡವನ್ನು ಕೇಳಲು ದಿನದಿನಕ್ಕೂ ಹೆಚ್ಚು ಹೆಚ್ಚಾಗಿ ಆಶಿಸುತ್ತಿದ್ದಾರೆ; ಇವನ ಕೇಳುಗರ ಸಂಖ್ಯೆ ದಿನೇ ದಿನೇ ವೃದ್ಧಿಯಾಗುತ್ತಿದೆ.

ಗಾಡ್‌ಫ್ರೇ ಬಲು ದೊಡ್ಡ ಸೋಮಾರಿ. ಬೆಳಗ್ಗೆ ೬ ಗಂಟೆಗೆ ಇವನ ಕಾರ್ಯಕ್ರಮ ಪ್ರಾರಂಭ. ಆಗ ೧೫ ನಿಮಿಷಕ್ಕೆ ಮೊದಲು ಅವನ ಎಂಜನಿಯರರು ಬಂದು ಅವನ ಕಾರ್ಯಾಲಯದಲ್ಲಿ ತಾಂತ್ರಿಕ ವ್ಯವಸ್ಥೆ ಮಾಡಬೇಕು. ಕಾರ್ಯದರ್ಶಿ ಗಂಟೆ ಹೊಡೆದು ಅವನನ್ನು ಎಬ್ಬಿಸಬೇಕು. ಆಮೇಲೆ ಮೂರಿ ತೆಗೆಯುತ್ತ, ಆಕಳಿಸುತ್ತ ಎದ್ದು ಗಾಡ್‌ಫ್ರೇ ತನ್ನ ಗಿರಾಕಿಗಳನ್ನು ಬೈದು ಅವನ್ನು ರೇಡಿಯೋ ನಿಲ್ದಾಣಕ್ಕೆ ಕಳುಹಬೇಕು.

ಸಂಜೆಯ ಹೊತ್ತು ಗದ್ದೆಯ ಕಡೆಯಿಂದ ಅವನ ಮನೆಯ ಹತ್ತಿರ ಅವನು ... ತಿಂದಿಗೆ ಮರುಳಾಗಿ ಅನೇಕ ಸುಸ್ವರದ ಹಕ್ಕಿಗಳು ಬರುತ್ತವೆ. ಅವುಗಳ ಹಾಡನ್ನು ಅಲ್ಲೇ ಒಂದು ಮರದಲ್ಲಿಟ್ಟ ಧ್ವನಿಗ್ರಾಹಕದಿಂದ ಹಿಡಿದು ರೇಡಿಯೋ ಕೇಳುವವರಿಗೆ ಕಳುಹುತ್ತಾನೆ. ಇದು ಕೂಡ ಬಹಳ ಜನಪ್ರಿಯವಾಗಿದೆ. ಈತನಿಗೆ ರೇಡಿಯೋದವರು ವರ್ಷಕ್ಕೆ ೬ ಲಕ್ಷ ಡಾಲರ್ ವೇತನ ಕೊಡುತ್ತಾರೆ!

ಟೀನದಲ್ಲಿ ಒಬ್ಬ ರೈತನ ಮನೆಯಲ್ಲಿ ಅಪೂರ್ವ ಒಂದು ... ಕರು ಜನಿಸಿದ ಒಂದು ಕರು. ಅದಕ್ಕೆ ಕಾಲುಗಳಿಲ್ಲ, ಬಾಲವಿಲ್ಲ!

ಮನುಷ್ಯನಿಗೆ ಚಿಮ್ಮಿ ಹೇಳಿದರೆ ಅವನು ೩೦೦ ವರ್ಷ ಬದುಕಬಲ್ಲನಂತೆ. ಆ ಕಾಲವೂ ಬಂದೀತೆ? ಬರದೀತೇ?



ಮಂಗ—ಮನುಷ್ಯ ಸಂಬಂಧ

ಮಗು,

ಇಷ್ಟು ದಿನ ನಿಮಗೆ, ಮಕ್ಕಳಿಗಾಗಿ ನಾನು ಬರೆಯುತ್ತಿದ್ದುದರಲ್ಲಿ ಇದೀಗ ಮೊದಲನೆ ಬಾರಿ ನಿಮ್ಮಲ್ಲೊಬ್ಬನು ನನಗೊಂದು ಪ್ರಶ್ನೆ ಕೇಳಿ ಕಾಗದ ಬರೆದಿದ್ದಾನೆ. ಇದು ಒಳ್ಳೆಯ ಲಕ್ಷಣ. ಏಕೆಂದರೆ ತಿಳಿಯುವ ಕುತೂಹಲವೇ ಜ್ಞಾನದ ಮೊದಲ ಮೆಟ್ಟಲು. ಇಂಥ ಪ್ರಶ್ನೆಗಳನ್ನು ಯಾವ ವಿಷಯದ ಮೇಲೆ ನೀವು, ಮಕ್ಕಳು ಕೇಳಿದರೂ ನಾನು ನನಗೆ ತಿಳಿದ ಮಟ್ಟಿಗೆ ಉತ್ತರ ಬರೆಯಲು ಸಿದ್ಧನಾಗಿದ್ದೇನೆ. ಇರಲಿ. ನನಗೆ ಬಂದ ಪತ್ರ ಹೀಗಿದೆ:

ಮಂಚಿಕೇರಿ

ತಾ. ೮-೮-೪೮

ಪ್ರಿಯ ಮಾಮನಿಗೆ ನಮಸ್ಕಾರಗಳು.

ಈ ವಾರದ ನಮ್ಮ ಪುಟದಲ್ಲಿ ಮನುಷ್ಯನ (ಅಂದರೆ ನಮ್ಮ ನಿಮ್ಮ) ಅಜ್ಜ ಮುತ್ತಜ್ಜಂದಿರು ಮಂಗಗಳಾಗಿದ್ದರೆಂದು ನೀವು ಬರೆದಿದ್ದೀರಿ. ಆದರೆ ನಾನು ಇದಕ್ಕೆ ಒಪ್ಪುವದಿಲ್ಲ. ನನ್ನ ಅಜ್ಜನನ್ನು ನಾನು ನೋಡಿದ್ದೇನೆ. ಇದಕ್ಕೆ ನಿಮ್ಮ ಮತವೇನು?

ನಿಮ್ಮ ಪದ್ಮಾಕರ

ಮೇಲಿನ ಕನ್ನಡ ಶಾಲೆ, ಮಂಚಿಕೇರಿ

× × ×

ಈಗ ಈ ಪದ್ಮಾಕರ ತುಸು ಕಿಡಿಗೇಡಿಯಾಗಿದ್ದಾನೆಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ಅವನ ಅಜ್ಜನು ಮಂಗನೆಂದು ನಾನೆಲ್ಲಿಯೂ ಹೇಳಿಲ್ಲ. ಅವನಿಗಿಂತ ದೊಡ್ಡವನಾದ ನನ್ನ ಅಜ್ಜ ಕೂಡ ಮಂಗನಾಗಿರಲಿಲ್ಲ. ಆದರೆ ಈ ತುಂಟ ಪ್ರಶ್ನೆ ಕೇಳಿದ್ದಕ್ಕೆ ನಾವು ಅವನ ಮೇಲೆ ಸಿಟ್ಟು ಮಾಡುವದಿಲ್ಲ. ಏಕೆಂದರೆ ದಡ್ಡತನಕ್ಕಿಂತ ತುಂಟತನವೇ ಮೇಲು.

× × ×

ಮನುಷ್ಯನ ಅಜ್ಜ ಮಂಗನಾಗಿದ್ದನೆಂದು ಬಲ್ಲವರು ಹೇಳುತ್ತಾರೆ ಇದು ನಿಜ. ಇದನ್ನು ನಿಮಗೆ ತುಸು ವಿವರಿಸಿ ಹೇಳುತ್ತೇನೆ. ಮನುಷ್ಯನ ಅಜ್ಜನೆಂದಾಕ್ಷಣ ನಿನ್ನೆ-ನಿನ್ನೆ ಅಥವಾ ಈಗ ಜೀವಂತನಾಗಿರುವ ಮನುಷ್ಯನ ಅಜ್ಜನೆಂದು ತಿಳಿದುಕೊಳ್ಳಬಾರದು. ಮನುಷ್ಯ ಜಾತಿಯ ಅಜ್ಜನೆಂದು ನನ್ನ ಅಭಿಪ್ರಾಯ.

ಡಾರ್ವಿನ್ನನೆಂಬ ಬಹಳ ದೊಡ್ಡ ಪ್ರಾಣಿಶಾಸ್ತ್ರಜ್ಞನಿದ್ದನು. ಅವನು ಜಗತ್ತಿನಲ್ಲಿರುವ ಪ್ರಾಣಿಗಳ ಜೀವನವನ್ನು ಕಣ್ಣಿಟ್ಟು ನೋಡಿ ಮನುಷ್ಯನ ಅಜ್ಜನು ಮಂಗನಾಗಿದ್ದ—ಎಂದು ತೀರ್ಮಾನಕ್ಕೆ ಬಂದನು. ಅವನ ಹೇಳಿಕೆಯಂತೆ ದೇವರು ಈ ಭೂಮಿಯ ಮೇಲೆ ಮನುಷ್ಯ ಜಾತಿಯನ್ನು ಒಮ್ಮೆಲೆ ಸೃಷ್ಟಿಸಲಿಲ್ಲ. ನಿಜವಾಗಿ ಭೂಮಿ ಇನ್ನೂ ಉರಿಯುವ ಗೋಲವಾಗಿದ್ದಾಗ ಇಲ್ಲಿ ಯಾವ ಜಾತಿಯ ಜೀವಜಂತುವೂ ಇದ್ದಿಲ್ಲ. ಆ ಮೇಲೆ ಭೂಮಿ ಆರಿ ನೀರು ಬೇರೆ ನೆಲ ಬೇರೆ ಎಂದು ಆಯಿತು. ಆ ಮೇಲೆಯೆ ಇಲ್ಲಿ ಜೀವಜಂತುಗಳು ಹುಟ್ಟಿದವು.

ವಿಷ್ಣುವಿಗೆ ಹತ್ತು ಅವತಾರಗಳೆಂದು ನೀನು ಕೇಳಿರಬಹುದು. ಎಲ್ಲಕ್ಕಿಂತ ಮೊದಲನೆ ಅವತಾರ ಮತ್ಸ್ಯಾವತಾರ ಅಥವಾ ಮೀನಿನ ಅವತಾರವೆಂದೂ ನಿನಗೆ ಗೊತ್ತಿದೆ. ವಿಷ್ಣುವೆಂದರೆ ಇಡಿ ಭೂಮಿಯಲ್ಲಿರುವ ಎಲ್ಲ ಜೀವವುಳ್ಳ ಪ್ರಾಣಿಗಳೆಂದು ತಿಳಿದುಕೊ. ಆಗ ಮತ್ಸ್ಯಾವತಾರ ಮೊದಲನೆಯದು, ಎಂದು ಹೇಳುವರೆ, ಈ ಭೂಲೋಕದಲ್ಲಿ ಮೀನುಗಳ ಅವತಾರವೇ ಮೊದಲು ಎಂದು ಹೇಳಿದಂತಾಯಿತು. ಅದನ್ನೆ ಡಾರ್ವಿನ್ನನೂ ಹೇಳಿದ್ದಾನೆ. ನಮ್ಮ ಭೂಗೋಲದ ನೆಲದ ಮೇಲೆ ಯಾವ ಬಗೆಯ ಸ್ಥಿರ, ಚರ (ಅಂದರೆ ಮರ ಗಿಡ, ಮೃಗ ಪಕ್ಷಿ, ಕ್ರಿಮಿ ಕೀಟ) ಪ್ರಾಣಿಗಳೂ ಇಲ್ಲದೆ ಬರಿ ಬಟ್ಟಾಬಯಲಾಗಿದ್ದಾಗ, ಕೋಟ್ಯಂತರ ವರುಷಗಳ ಹಿಂದೆ, ಸಮುದ್ರದಲ್ಲಿ ಜೀವಜಂತುಗಳು ಹುಟ್ಟಿದವು.

ಆ ಜಂತುಗಳು ಈಗಿನ ಮೀನುಗಳೇ ಆಗಿರಲಿಲ್ಲ. ಮೀನುಗಳಷ್ಟು ದೊಡ್ಡವುಗಳೂ ಆಗಿರಲಿಲ್ಲ. ಅವು ಬಹಳ ಚಿಕ್ಕ ಜೀವಿಗಳಾಗಿದ್ದವು. ಆದರೆ ಒಳ್ಳೆ ಅವಕಾಶ ದೊರೆತಾಗ ಅವುಗಳು ಬೆಳೆದವು. ಆಯಾ ಸ್ಥಳದ ಗುಣಕ್ಕೆ ಸರಿಯಾಗಿ ಬೇರೆ ಬೇರೆ ಬಗೆಯ ಮೀನುಗಳು ಆದವು.

ಈ ಮೀನುಗಳು ಇಲ್ಲವೆ ಮೀನಿನಂಥ ಜಂತುಗಳಲ್ಲಿ ಕೆಲವು, ಕೆಲವು ಲಕ್ಷ ವರ್ಷಗಳ ನಂತರ ನೆಲದಲ್ಲಿಯೂ ಬಾಳಿ ಬದುಕಲು ಕಲಿತವು. ಆದರೆ ಆಗ ಅವುಗಳ ರೂಪ ಸ್ವಲ್ಪ ಬದಲಾಯಿತು. ಗುಡ್ಡದ ಕೆಂಪು ಮಣ್ಣಿನಲ್ಲಿ ಬೆಳೆದ ಬದನೆಕಾಯಿಯ ಬೀಜವನ್ನು ಬಯಲಿನ ಕರಿ ಮಣ್ಣಲ್ಲಿ ತಂದು ಬಿತ್ತಿದರೆ ಮಣ್ಣಿನ ಗುಣವನ್ನನುಸರಿಸಿ ಅವುಗಳ ರೂಪ, ಆಕಾರ, ಬಣ್ಣ ಇವೆಲ್ಲ ಮೂರು ನಾಲ್ಕು ಪೀಳಿಗೆಗಳಲ್ಲಿ ಬದಲಾಗಿ ಹೋಗುವದನ್ನು ನೀನು ನೋಡಿರಬಹುದು. ನೋಡಿರದಿದ್ದರೆ ಪರೀಕ್ಷಿಸಿ ಬೇಕಾದರೆ ನೋಡು. ಅದೇ ಪ್ರಕಾರ ನೀರಿನ ಮೀನು ನೆಲದಲ್ಲಿ ಬಾಳಲು ಕಲಿತಾಗ ಸ್ವಲ್ಪ ಬದಲಾಯಿಸಿತು. ನೆಲದ ಮೇಲೆ ಬಾಳಲು ಅನುಕೂಲವಾಗುವಂತೆ ಮೀನಿನ ಪಕ್ಕಗಳು ಕಾಲುಗಳಾದವು. ಮತ್ತು ಬೇರೆ ಬೇರೆ ಸ್ಥಳಗಳಲ್ಲಿರುವ ನೆಲದ ಮೇಲಿನ ಮೀನುಗಳು ಬೇರೆ ಬೇರೆ ರೂಪವಾಗಿರಬಹುದು. ಈ ನೆಲದ ಮೇಲಿನ ಮೀನೇ ಭೂಮಿಯ ಮೇಲಿರುವ ಎಲ್ಲ ಪ್ರಾಣಿಗಳ ಮೂಲಪುರುಷ.

ಈ ಪ್ರಕಾರ ಕೋಟ್ಯಂತರ ವರ್ಷಗಳವರೆಗೆ ನಡೆಯುತ್ತ ಹೋಯಿತು. ಇದು ಭೂಮಿಯ ಎಲ್ಲ ಕಡೆಗಳಲ್ಲಿಯೂ ಒಂದೇ ಸವನೆ ನಡೆಯುತಿದ್ದಾಗ, ಮೇಲೆ ಹೇಳಿದ ಬದನೆ ಬೀಜದ ಉದಾಹರಣೆಯಂತೆ, ಒಂದೊಂದು ಸ್ಥಳದಲ್ಲಿ, ಹವೆಯಲ್ಲಿ, ಅವವುಗಳಿಗೆ ಸಿಕ್ಕಿದ ಆಹಾರ, ಅದಕ್ಕೆ ಪಡಬೇಕಾದ ಶ್ರಮ ಇವುಗಳನ್ನನುಸರಿಸಿ ಅವವುಗಳ ರೂಪ ಬದಲಾಯಿತು. ನಾನಾ ಜಾತಿಯ ಪ್ರಾಣಿಗಳಾದವು. ಉದಾಹರಣೆಗೆ ಸಸ್ಯಾಹಾರ ಧಾರಾಳವಾಗಿದ್ದಲ್ಲಿ ಸಸ್ಯವನ್ನು ಜಗಿದು ತಿನ್ನಲು ಬೇಕಾಗುವ ಗಟ್ಟಿಮುಟ್ಟಾದ, ಉರುಟುರುಟಾದ ಹಲ್ಲುಗಳು ಪ್ರಾಣಿಗಳಿಗೆ ಆದರೆ ಸಸ್ಯವಿಲ್ಲದೆ ಪ್ರಾಣಿಗಳನ್ನೇ ಕೊಂದು ತಿನ್ನಬೇಕಾದಲ್ಲಿ ಉಗುರು, ಕೋರೆ ಹಲ್ಲುಗಳುಳ್ಳ ಪ್ರಾಣಿಗಳಾದವು. ಕೈಯಿಂದಲೇ ಶ್ರಮಪಟ್ಟು ಕೆಲಸ ಮಾಡುವವನ ಕೈಗಳು ಗಟ್ಟಿ ಮುಟ್ಟಾಗಿರುವದನ್ನೂ ಯಾವಾಗಲೂ ನಡೆಯುತಿರುವವನ ಕಾಲುಗಳು ಲಠ್ಠವಾಗಿರುವದನ್ನೂ ನೀನು ನೋಡಿದ್ದಿ. ಹಾಗೆಯೆ ತಲತಲಾಂತರದಿಂದ ಒಂದೊಂದು ಬಗೆಯ ಅಭ್ಯಾಸ ಮಾಡುತ್ತ ಹೋದ ಪ್ರಾಣಿಗಳಲ್ಲಿಯೂ ದೇಹದ ಒಂದೊಂದು ಅಂಗವೂ ಅದಕ್ಕೆ ಸರಿಯಾಗಿ ರೂಪಾಂತರ ಹೊಂದಿತು.

ಹೀಗೆ ಬದಲಾಗುತ್ತ ಆಗುತ್ತ ಮಂಗ ಜಾತಿಯೊಂದು ಉಂಟಾಯಿತು. ಇದೇ ಜಾತಿಯಲ್ಲಿ ಕರಡಿಯೂ ಬರುತ್ತದೆ. ಕೈಗಳನ್ನು ಎಂದರೆ ಮುಂದಿನ ಕಾಲುಗಳನ್ನು ದೃಢವಾದ ಕೆಲಸಗಳಿಗೆ ಉಪಯೋಗಿಸುವದೇ ಈ ಕೋತಿಗಳ ವೈಶಿಷ್ಟ್ಯ. ಬರಬರುತ್ತ ಮಂಗ ವಂಶದಲ್ಲಿ ಮೊದಲನೆ ಮನುಷ್ಯ ಹುಟ್ಟಿದ.

ಈ ಮನುಷ್ಯ ಮೊದಲು ಈಗಿದ್ದಂತಿರಲಿಲ್ಲ. ಆಗ ಅವನ ಮೈಮೇಲಿನ ರೋಮಗಳು ಧಾರಾಳ ಇದ್ದವು, ಮುಸುಡಿ ಇನ್ನೂ ಉದ್ದವಾಗಿತ್ತು, ಬುದ್ಧಿ ಮಂಗನಿಗಿಂತ ಬಹಳ ಹೆಚ್ಚು ಇರಲಿಲ್ಲ. ಈಗ, ಬದಲಾಗುತ್ತ ಹೀಗಾಗಿದ್ದಾನೆ. ಇನ್ನು ಮುಂದೆಯೂ ಬದಲಾಗುವನು. ಆಗ ಅವನಿಗೆ ತಲೆಯ ಮೇಲೆ ಕೂದಲುಗಳಿರಲಿಕ್ಕಿಲ್ಲ. ಅವನ ಕಾಲುಗಳಿಗೆ ನಾಲ್ಕು ನಾಲ್ಕೇ ಬೆರಳುಗಳಿರುವವು. ಅವನು ನಮಗಿಂತ ಎಷ್ಟೋ ಪಾಲು ಬುದ್ಧಿವಂತನಾಗಿರಬಹುದು. ಆಗ ಅವರಲ್ಲೊಬ್ಬ ಹುಡುಗನಿಗೆ ಅವನ ಮಾಮನು, ನೋಡಪ್ಪ ಇವನೇ ಮನುಷ್ಯನ ಮುತ್ತಜ್ಜ, ಎಂದು ಈಗಿನ ಮನುಷ್ಯನ ಚಿತ್ರ ತೋರಿಸಿದರೆ, ನಮ್ಮ ಪದ್ಮಾಕರನಂತೆ ಅವನೂ ಇಸ್ಸಸ್ಸ, ಇವನೆಲ್ಲಿಯ ಮುತ್ತಜ್ಜ! ಎನ್ನಬಹುದು.

—ಮಾಮಾ

ಹಿಂದುಸ್ತಾನದ ಹಿರಿಯೋಲಗದಲ್ಲಿ

ಹಿಂದುಸ್ತಾನದ ಹಿರಿಯೋಲಗದಲ್ಲಿ ತಾ. ೧೨ ರಂದು ತಿಳಿದು ಬಂದ ಅಂಶಗಳು ಹೀಗಿವೆ.

ಲಂಡನದಲ್ಲಿರುವ ಹಿಂದೀ ಹಾಯಕಮಿಶನರರ ಪೋರ್ತುಗಾಲದ ವಿದೇಶ ಮಂತ್ರಿಗಳನ್ನು ಕಂಡು ಹಿಂದುಸ್ತಾನದೊಡನೆ ವಾಯುಭಾರಿ ಸಂಬಂಧ ಬೆಳೆಸುವ ಬಗ್ಗೆ ಚರ್ಚೆ ನಡೆಸಿದ್ದಾರೆ.

ಗೋವೆಯ ಮುಖಾಂತರ ಹೈದರಾಬಾದಕ್ಕೆ ಶಸ್ತ್ರಾಸ್ತ್ರ ಹೋಗಿಲ್ಲವೆಂದು ಪೋರ್ತುಗೀಜ ಸರಕಾರವು ನಿಸ್ಸಂದಿಗ್ಧವಾಗಿ ಹೇಳಿದೆ. ಆದರೂ ಇಂಥ ಸಾಗಾಟವನ್ನು ತಡೆಯಲು ಹಿಂದುಸ್ತಾನ ಸರಕಾರವು ರಾಜಕೀಯ ಕ್ರಮ ಕೈಕೊಳ್ಳುವದು.

ಔದ್ಯೋಗಿಕ ಶಾಂತಿ ಒಡಂಬಡಿಕೆಯ ಧ್ಯೇಯವನ್ನು ಹೇಗೆ ಸಾಧಿಸಬೇಕೆಂಬ ಬಗ್ಗೆ ಸರಕಾರವು ಚರ್ಚೆ ನಡೆಸಿದ್ದು ಈ ಬಗ್ಗೆ ಇಷ್ಟರಲ್ಲಿ ಒಂದು ಕೇಂದ್ರ ಸಲಹಾ ಮಂಡಲ ನೇಮಿಸಲಾಗುವದು.

ಇಂಡೋ—ಪಾಕಿಸ್ತಾನ —ಇಸ್ಲಾಂ ಲೀಗ ಎಂಬ ಸಂಸ್ಥೆ ಲಾಹೋರದಲ್ಲಿ ತಲೆಎತ್ತಿದ್ದು ದಿಲ್ಲಿ, ಅಜಮೀರ, ಯುಕ್ತಪ್ರಾಂತ ಬಿಹಾರ, ಮತ್ತು ಮುಂಬಯಿ ನಗರ ಮೊದಲಾದವುಗಳನ್ನು ಆಕ್ರಮಿಸಬೇಕೆಂದು ಈ ಸಂಸ್ಥೆಯ ಉದ್ದೇಶವಿದೆಯೆಂದು ಭಾರತ ಸರಕಾರಕ್ಕೆ ತಿಳಿದಿದ್ದು ಈ ಬಗೆಯ ಆಕ್ರಾಮಕ ಪ್ರಚಾರವು ಭಾರತದಲ್ಲಿ ಆಗದಂತೆ ಅವಶ್ಯಕ ಕ್ರಮಗಳನ್ನು ಕೈಕೊಳ್ಳಲಾಗುವದು.

೧೯೪೮ ಜೂನ ೩೦ ರ ವರೆಗೆ ಸಿಂಧದಿಂದ ಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ ೧೧,೧೬,೦೦೦. ಪಶ್ಚಿಮ ಪಂಜಾಬದಲ್ಲಿದ್ದ ಕಂಪನಿಗಳ ಮುಸಲ್ಮಾನೇತರರ ಪಾಲುಗಳನ್ನು ನಿರಾಶ್ರಿತರ ಆಸ್ತಿಯೆಂದು ಗಣಿಸಲಾಗುವದೆಂದೂ ಅವಕ್ಕೆ ಲಾಭಾಂಶ ಕೊಡಲಾಗುವದಿಲ್ಲವೆಂದೂ ಪಶ್ಚಿಮ ಪಂಜಾಬ ಸರಕಾರವು ಪ್ರಕಟನೆ ಹೊರಡಿಸಿದೆ. ಈ ಬಗ್ಗೆ ಭಾರತ ಸರಕಾರವು ನಿಷೇಧಪರ ಪತ್ರ ಬರೆದು ಕಂಪನಿಯಲ್ಲಿದ್ದ ಮುಸಲ್ಮಾನೇತರರ ಹಣವನ್ನು ತಿರುಗಿ ಕೊಡಬೇಕೆಂದು ಕೇಳಿದೆ.

ಹಿಂದುಸ್ತಾನದಲ್ಲಿದ್ದ ಫ್ರೆಂಚ ವಸಾಹತುಗಳ ಭವಿತವ್ಯ ನಿರ್ಣಯವನ್ನು ಫ್ರೆಂಚ ಸರಕಾರವು ಅಲ್ಲಿಯ ಜನರಿಗೇ ಬಿಟ್ಟಿರುವದಾಗಿ ೧೯೪೮ ಜೂನ ೮ಕ್ಕೆ ಘೋಷಿಸಿದೆ. ಇದಕ್ಕನುಸರಿಸಿ ಅಲ್ಲಿ ಹೊಸ ಚುನಾವಣೆಯ ಸಿದ್ಧತೆ ನಡೆದಿದ್ದು ನಂತರ ಸಾರ್ವತ್ರಿಕ ಮತಗಣನೆಯೂ ನಡೆಯುವದು.

ಕಂಪನಿಗಳು ಗಾಂಧೀ ಸ್ಮಾರಕ ನಿಧಿಗೆ ದೇಣಿಗೆ ಕೊಡಬಹುದೆಂಬ ಮಸೂದೆಗೆ ಸಮ್ಮತಿ ದೊರಕಿತು. ವಿದ್ಯುಚ್ಛಕ್ತಿ ಮಸೂದೆಗೆ ಕೆಲ ತಿದ್ದುಪಡಿ ಸ್ವೀಕರಿಸಲಾಯ್ತು.

ತಾ. ೧೩ ರಂದು ದೀರ್ಘ ಚರ್ಚಾ ನಂತರ ಬ್ರಿಟನ ಹಿಂದುಸ್ತಾನಗಳ ಸ್ಟರ್ಲಿಂಗ ಒಡಂಬಡಿಕೆಗೆ ಮನ್ನಣೆ ಕೊಡಲಾಯ್ತು. ಅರ್ಥ ಸಚಿವ ಷಣ್ಮುಖಂ ಚಟ್ಟಿಯವರು ಮಂಡಿಸಿದ ೨೫೦ ಕೋಟಿ ರೂ. ಗಳ ಎರಡು ಬೇಡಿಕೆಗಳನ್ನು ಓಲಗವು ಮನ್ನಿಸಿತು. ಅರ್ಥ ಸಚಿವರು ಮಾತನಾಡುತ್ತ, ಬ್ರಿಟನ್ನು ಸ್ಟರ್ಲಿಂಗ ಹಣ ಮುಳುಗಿಸುವವೆಂಬ ಭೀತಿ ಬೇಡ. ಅಂಥ ಪ್ರಸಂಗವೇ ಬಂದರೆ ನಮ್ಮ ದೇಶದಲ್ಲಿರುವ ಅವರ ಆಸ್ತಿಪಾಸ್ತಿಯಿಂದಲೇ ನಮಗೆ ಸಾಕಷ್ಟು ಪರಿಹಾರ ದೊರಕುವದು ಎಂದು ಮೊದಲಾಗಿ ಹೇಳಿದರು.

ಈ ವರೆಗೆ ಜಮ್ಮೂ ಹಾಗೂ ಕಾಶ್ಮೀರ ಸಂಸ್ಥಾನಕ್ಕೆ ಸಮರಕಾಲನಕ್ಕೆ ತಗಲಿದ ವೆಚ್ಚವಲ್ಲದೆ ೧ ಕೋಟಿ ರೂಪಾಯಿಯ ಎರಡು ಸಾಲಗಳನ್ನು ಭಾರತ ಸರಕಾರವು ಕೊಟ್ಟಿದೆಯೆಂದೂ ಸಂಸ್ಥಾನಕ್ಕೆ ಪೂರೈಸಿದ ಸಾಮುಗ್ರಿ, ಸೈನ್ಯ ಮೊದಲಾದವುಗಳ ಬಗ್ಗೆ ಬಂದ ವೆಚ್ಚವನ್ನೂ ಪಠಾನಕೋಟ—ಜಮ್ಮು ರಸ್ತೆ, ಮೆಹರಾ ವಿಮಾನ ಗೃಹಗಳಿಗಾಗಿ ತಗಲಿದ ವೆಚ್ಚವನ್ನು ಸಾಲವೆಂದು ಹಿಡಿಯಲಾಗಿದೆಯೆಂದೂ ಸರದಾರ ಪಟೇಲರು ತಿಳಿಸಿದರು. ೨ ಕೋಟಿ ರೂ.ಗಳ ಸಾಲಕ್ಕೆ ೨।।। ಬಡ್ಡಿದರ ಹಿಡಿಯಲಾಗಿದೆ.

ಭಾರತದಲ್ಲಿ ಕಳೆದ ಯುದ್ಧದ ಕಾಲಕ್ಕೆ ೩೬ ಶಸ್ತ್ರಾಸ್ತ್ರ ಕಾರಖಾನೆಗಳಿದ್ದವು. ಅಲ್ಲಿ ತೋಫು ಮದ್ದು, ಅಗ್ನಿಬಾಣ, ಸುರಂಗ, ಕೈಬಾಂಬು, ಸಣ್ಣ ಶಸ್ತ್ರಾಸ್ತ್ರ ಸಿದ್ಧವಾಗುತ್ತಿದ್ದವು. ಈಗ ೧೫ ಮಾತ್ರ ಇದ್ದು ಉಳಿದವನ್ನು ಅನಾವಶ್ಯವೆಂದು ಮುಚ್ಚಲಾಗಿದೆ. ಕಾನಪುರದಲ್ಲಿ ಬ್ರೆನ್ ಗನ್ ಯಂತ್ರ ಹಾಕುವ ವ್ಯವಸ್ಥೆ ನಡೆದಿದೆ.

ತಾ. ೧೬ ರಂದು ಪಂಡಿತ ಜವಾಹರರಲಾಲರು ಮಂಡಿಸಿದ ಅಂತರ ರಾಷ್ಟ್ರೀಯ ಪಾರ್ಲಮೆಂಟರಿ ಯುನಿಯನ್ನಿಗೆ ಕಳಿಸಲು ಹಿಂದುಸ್ತಾನದ ಪಾರ್ಲಮೆಂಟಿನ ಸದಸ್ಯರನ್ನು ಆರಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಬೇಕೆಂಬ ಮಸೂದೆಯು ಸ್ವೀಕೃತವಾಯ್ತು. ಇದಲ್ಲದೆ ಸರದಾರ ವಲ್ಲಭಭಾಯಿ ಪಟೇಲರು ಮಂಡಿಸಿದ ದರ್ಗಾ ಖ್ವಾಜಾಸಾಹೇಬ ಕಾನೂನ ತಿದ್ದುಪಡಿ ಮಸೂದೆ ಮತ್ತೂ ಸರದಾರ ಬಲದೇವ ಸಿಂಗರು ಮಂಡಿಸಿದ ಹಿಂದುಸ್ತಾನ ಸೈನ್ಯ ಕಾನೂನ ತಿದ್ದುಪಡಿ ಮಸೂದೆ ಇವೂ ಅಂಗೀಕೃತವಾದವು.

ತಾ. ೧೭ ರ ಹಿರಿಯೋಲಗದ ಚಟುವಟಿಕೆಯಲ್ಲಿ ಈ ಅಂಶಗಳು ತಿಳಿದು ಬರುತ್ತವೆ.

ಅಪಹೃತ ಸ್ತ್ರೀಯರ ವಿಮೋಚನೆಗೆ ಪಾಕಿಸ್ತಾನ ಸರಕಾರದ ಸಹಕಾರ ಸಾಕಷ್ಟಿಲ್ಲ.

ಪಾಕಿಸ್ತಾನಕ್ಕಿಂತ ಹಿಂದುಸ್ತಾನದಲ್ಲಿ ಹೆಚ್ಚು ಅಪಹೃತ ಸ್ತ್ರೀಯರನ್ನು ಹುಡುಕಿಸಿ ವಿಮೋಚನೆಗೊಳಿಸಲಾಗಿದೆ.

ಕೇಂದ್ರ ರೇಶಿಮೆ ಮಂಡಲ ಸ್ಥಾಪಿಸುವ ಮಸೂದೆಯನ್ನು ಪರಿಶೀಲಕ ಸಮಿತಿಗೆ ಕಳಿಸತಕ್ಕದ್ದು.

ಮುಂಬಯಿ, ಕಲಕತ್ತಾ, ಮದ್ರಾಸ ಪೋರ್ಟ ಟ್ರಸ್ಟ ಘಟನೆಗಳ ತಿದ್ದುಪಡಿಯ ಮಸೂದೆಯು ಸ್ವೀಕೃತವಾಯ್ತು.

ಮಹಾತ್ಮರ ಕೊನೆಯ ವಾಸಸ್ಥಾನವಾದ ದಿಲ್ಲಿಯ ಬಿರ್ಲಾಭವನವನ್ನು ಸರಕಾರವು ವಶಪಡಿಸಿಕೊಳ್ಳುವದೇ ಎಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಗಾಡಗೀಳರು ಆ ವಿಚಾರವಿಲ್ಲ ಎಂದು ಹೇಳಿದರು. ಈ ಬಗ್ಗೆ ಪಂ. ನೆಹರೂ ಅವರು ವಿವರಣೆ ಕೊಡುತ್ತ ಹೀಗೆ ಹೇಳಿದರು.

ಈ ಬಗ್ಗೆ ಘನಶ್ಯಾಮ ಬಿರ್ಲಾ ಅವರಿಗೆ ಕೇಳಲಾಗಿ ಸರಕಾರ ನಿರ್ಧರಿಸಿದಂತೆ ನಡೆದುಕೊಳ್ಳುವದಾಗಿ ಹೇಳಿದರು. ಆದರೆ ಬಲಪ್ರಯೋಗ ಮಾಡಿ ಅವರ ಮನೆ ಸ್ವಾಧೀನಪಡಿಸಿಕೊಳ್ಳುವ ಇಚ್ಛೆ ಸರಕಾರಕ್ಕಿಲ್ಲ. ಮಹಾತ್ಮರು ಇದ್ದ ಸ್ಥಳ, ಪ್ರಾರ್ಥನಾ ಸ್ಥಳ ನೋಡ ಬಂದ ಜನರಿಗೆ ಅವಕಾಶ ಕೊಡುವ ಉದ್ದೇಶದಿಂದ ಮನೆಯ ಒಡೆಯರು ಆ ಭಾಗವನ್ನು ಪ್ರತ್ಯೇಕಿಸಿ ಸ್ವತಂತ್ರ ಕಂಪಾವುಂಡ ಕಟ್ಟಿಸಿ ಬೇರೆ ಬಾಗಿಲು ಹಚ್ಚಿಸಲು ಒಪ್ಪಿದ್ದಾರೆ. ಅದರೆ ಮಹಾತ್ಮರ ಪ್ರಕರಣದ ವಿಚಾರಣೆ ನಡೆದಿದ್ದು ಕೋರ್ಟಿನವರು ಅಲ್ಲಿದ್ದ ಕಟ್ಟಡದಲ್ಲಿ ಏನೂ ಬದಲಾವಣೆ ಈಗ ಮಾಡಕೂಡದೆಂದು ಸೂಚನೆ ಕಳಿಸಿದ್ದಾರೆ.

ಜ. ಮೋಹನಸಿಂಗರ ದೇಶಸೇವಕ ಸೈನ್ಯ ಸಂಘಟನೆಯ ಬಗ್ಗೆ ಪಂ. ಜವಾಹರಲಾಲರು ಹೀಗೆ ಹೇಳಿದರು.

ಕೇಂದ್ರ ಸರಕಾರವು ಖಾಸಗೀ ಸೈನ್ಯಕ್ಕೆ ಆಕ್ಷೇಪಿಸಿ ಹಾಗೆ ಎಲ್ಲ ಪ್ರಾಂತಗಳಿಗೂ ತಿಳಿಸಿತ್ತು. ಆದರೆ ಮೊಟ್ಟ ಮೊದಲು ಜ. ಮೋಹನಸಿಂಗರ ಯೋಜನೆಗೆ ಪೂರ್ವ ಪಂಜಾಬ ಸರಕಾರದ ಅಧಿಕಾರಿಗಳು ಒಪ್ಪಿಗೆ ಕೊಟ್ಟಿದ್ದರು. ಹೀಗೆ ಒಪ್ಪಿಗೆ ಕೊಡುವ ಮುನ್ನ ಕೇಂದ್ರಕ್ಕೆ ಪೂ. ಪಂಜಾಬ ಸರಕಾರವು ಈ ವಿಷಯ ತಿಳಿಸಿರಲಿಲ್ಲ ಇತ್ಯಾದಿ.

ಇದೇ ದಿನ ಭಾರತದ ಅರ್ಥಸಚಿವರಾದ ಶ್ರೀ ಷಣ್ಮುಖಂ ಚಟ್ಟಿಯಾರರು ಕೊಟ್ಟ ರಾಜೀನಾಮೆಯ ವಿಷಯವೂ ಚರ್ಚಿಸಲ್ಪಟ್ಟಿತು. (ಈ ಬಗ್ಗೆ ಬೇರೆಡೆ ನೋಡುವದು)

ಪ್ರೊ. ಎಸ್. ಕೆ. ಗೋಣಿ

ಪ್ರೊ. ಎಸ್. ಕೆ. ಗೋಣಿ ಬಿ. ಎಸ್. ಸಿ (ಅಗ್ರಿಕಲ್ಚರ) ಇವರು ಧಾರವಾಡ ಒಕ್ಕಲತನ ಕಾಲೇಜದ ಅಧ್ಯಾಪಕರು ಇವರು ಹಿಂದುಸ್ತಾನ ಸರಕಾರದ ಶಿಷ್ಯವೃತ್ತಿ ಪಡೆದು ಹೆಚ್ಚಿನ ಅಭ್ಯಾಸಕ್ಕಾಗಿ ಅಮೇರಿಕೆಗೆ ತೆರಳಿದರು. ಇವರು ಹುಬ್ಬಳ್ಳಿಯವರಿರುವರು.



ಅಮೇರಿಕನ್ನರ ರಶಿಯನ್ನರಕ್ಕೆ ಬಿಡಿಸಲು ಬರ್ಲಿನ್ನಿನಲ್ಲಿ ಶೇಖರಿಸಿದ ಟ್ಯಾಂಕುಗಳು

ಬ್ರಿಟಿಶರು, ಅಮೇರಿಕನ್ನರು

ಬರ್ಲಿನ್ನಿನಲ್ಲಿ ನಮಗೆ [illegible] ಅಮೇರಿಕನ್ನರು [illegible] ಜರ್ಮನಿಯ [illegible] ದೊಡ್ಡ [illegible] ಅಧಿಕಾರಿಗಳನ್ನು ಕಾಣುವುದರಲ್ಲಿ [illegible]. ಬ್ರಿಟಿಶ ವಿಭಾಗದ [illegible] ಗವರ್ನರರೂ [illegible] ಗಳೂ [illegible] ಸರ್ [illegible] ರಾಬರ್ಟ್ಸನ್ನರು. ಹಿಂದುಸ್ಥಾನದಲ್ಲಿಯೂ ನೌಕರಿಯಲ್ಲಿದ್ದವರು. ಅವರು ನನ್ನನ್ನು [illegible] ಸರಳವಾಗಿ ಮಾತಾಡಿದರು. ಅವರ ಸಹಾಯಕರಾದ ಮೇಜರ್ [illegible] [illegible]-ಜಾನರು [illegible] ಇದ್ದರು.

[illegible]

ಇಂದಿನ ಜರ್ಮನಿಯ ಮುಖ, ಮನಸ್ಸು

ಏಕಾದಶೀ ನಿವಾರಣೆಯೆ ಎಲ್ಲಕ್ಕೂ ಘನ ಸಮಸ್ಯೆ

ಶ್ರೀ ದೇವದಾಸ ಗಾಂಧಿಯವರು ಮಹಾತ್ಮರ ಕನಿಷ್ಠ ಪುತ್ರ, ದಿಲ್ಲಿಯ "ಹಿಂದುಸ್ತಾನ ಟೈಮ್ಸ್" ಪತ್ರಿಕೆಯ ಸಂಪಾದಕರು, ಅ. ಭಾ. ಸಂಪಾದಕರ ಪರಿಷತ್ತಿನ ಅಧ್ಯಕ್ಷರು. ರೈಟರ ಸುದ್ದಿ ಸಂಸ್ಥೆಯ ಹಿಂದೀ ವಿಭಾಗವನ್ನು ಭಾರತೀಯರಿಗೆ ಕೊಳ್ಳುವ ಸಲುವಾಗಿ ಇಂಗ್ಲಂಡಿಗೆ ಹೋದ ಶಿಷ್ಟಮಂಡಲದಲ್ಲಿ ಇವರು ಒಬ್ಬರಾಗಿದ್ದರು. ಆ ಸಂದರ್ಭದಲ್ಲಿ ಅವರು ಜರ್ಮನಿಗೊಂದು ಸಂಕ್ಷಿಪ್ತ ಭೆಟ್ಟಿ ಕೊಟ್ಟಿದ್ದರು. ಅಲ್ಲಿ ತಮಗಾದ ಅನುಭವಗಳನ್ನು ಅವರು ಇಲ್ಲಿ ನಿವೇದಿಸಿದ್ದಾರೆ.

ಜರ್ಮನ್ ಜನರು ಸೋತು ಸಣ್ಣವಾಗಿ ಹೋಗಿದ್ದಾರೆ, ಇದರಲ್ಲಿ ಸಂದೇಹವಿಲ್ಲ. ಹಲವು ಒಡೆಯರ ಕೈಕೆಳಗೆ ತೊತ್ತುಗಳಂತೆ ಬಾಳುವ ಅವಸ್ಥೆ ಅವರದು. ಅವರ ಮೇಲೆ ಎಲ್ಲೆಲ್ಲಿಯೂ ಹಿಡಿತ ಪರಿಪೂರ್ಣವಾಗಿದೆ.

"ಒಂದೇ ಒಬ್ಬರ ಗಂಟಲು ಹಿಸುಕುತಿರಬೇಕು, ಇಲ್ಲವೆ ಅವರ ಪಾದದ ಬಳಿ ಹೊರಳುತಿರಬೇಕು— ಇದು ಜರ್ಮನ್ ಜನರ ಹಣೆಬರಹ," ಎಂದು ಚರ್ಚಿಲ್ಲರು ಯುದ್ಧಕಾಲದಲ್ಲಿ ನುಡಿದುದಕ್ಕೆ ನಿದರ್ಶನವಿದೆಂದು ಹೊರಗಿಂದ ಹೊರಗೆ ನೋಡುವವರಿಗೆ ತೋರಬಹುದು. ಆದರೆ ಚರ್ಚಿಲ್ಲರ ಮನೋವೃತ್ತಿ ಅಷ್ಟೇನೂ ಏಕಪ್ರಕಾರವಾಗಿಲ್ಲ. ಇಂದು ಅವರೇ ಜರ್ಮನ್ನರ ವಿಷಯದಲ್ಲಿ ಎಷ್ಟೋ ಪ್ರಿಯ ವಚನಗಳನ್ನು ಹೇಳಬಯಸಬಹುದು.

ನನ್ನ ಅಲ್ಪಕಾಲದ ಅನುಭವದಿಂದ ಇಂಥದೇ ಪ್ರಸಂಗದಲ್ಲಿ ಸಿಲುಕಿರುವ ಬೇರಾವ ಸ್ವಾಭಿಮಾನಿ ರಾಷ್ಟ್ರದಂತೆಯೆ ಜರ್ಮನರು ವರ್ತಿಸುತಿರುವಂತೆ ತೋರಿತು. ಸಂಪೂರ್ಣವಾದ ಸ್ವಾತಂತ್ರ್ಯ ದೊರೆತ ಮೇಲೆ ಕೂಡ ಅವರು ಜಗತ್ತಿನೊಡನೆ ಇನ್ನೊಂದು ಹೋರಾಟಕ್ಕೆ ಸಹಸಾ ಇಳಿಯಲಪೇಕ್ಷಿಸಲಾರರೆಂದು ನಾನು ನಂಬುವೆ. ಆದರೆ ಸದ್ಯಕ್ಕೆ ಅವರ ಮುಂದೆ ನಿಂತ ಸಮಸ್ಯೆ ಪ್ರಾಣಶಕ್ತಿಗಳನ್ನು ದೇಹ ಪಂಜರದಲ್ಲಿ ಉಳಿಸಿಕೊಳ್ಳುವ ಸಮಸ್ಯೆ. ಇಡಿ ಜರ್ಮನ್ ರಾಷ್ಟ್ರವೇ ಏಕಾದಶೀ-ಸೀದಾ ಪ್ರಮಾಣದ ಮೇಲೆ ಬಾಳಬೇಕಾಗಿದೆ. ತಿಂದುಂಡು ಕೊಬ್ಬಿದ ಒಬ್ಬ ಜರ್ಮನನನ್ನು ಕಾಣುವದೂ ದುರ್ಲಭವೆ. ಎಳೆ ಮಕ್ಕಳ ಪೀಳಿಗೆ ಹಾಲಿಲ್ಲದೆಯೆ ಬೆಳೆಯಬೇಕಾಗಿದೆ— ಇದು ಹಿಂದುಸ್ಥಾನವೊಂದರಲ್ಲೆ ಸಾಧ್ಯವಿದ್ದ ಮಾತೆಂದು ನನ್ನ ಭಾವನೆಯಾಗಿತ್ತು.

ಬರ್ಲಿನ್ನಿನ ನಗರ ಜೀರ್ಣವಾಗಿದ್ದರೆ, ಅದರೊಳಗೆ ವಾಸಿಸುವ ಜನರು ಇನ್ನಷ್ಟು ಜೀರ್ಣರಾಗಿ ತೋರುತಿದ್ದರು. ಜರ್ಮನ್ ಯುವಕರ ಪೀಳಿಗೆಯೇ ನಾಶವಾಗಿತ್ತೆಂದು ಕಿವಿಯಿಂದ ಕೇಳಿದ್ದರೂ ಅದು ಕಣ್ಣಾರೆ ಕಾಣಬರಬಹುದೆಂದು ನಾನು ನಂಬಿರಲಿಲ್ಲ. ಅದನ್ನು ನಾನು ಬರ್ಲಿನ್ನಿನಲ್ಲಿ ಕಂಡೆ. ಮುದುಕ-ಮುದುಕಿಯರು ಚಿಕ್ಕ ಮಕ್ಕಳೊಡನೆ ಇರುವದು ಬರ್ಲಿನ್ನಿನ ಬೀದಿಗಳಲ್ಲಿ ಎಲ್ಲೆಲ್ಲೂ ಕಾಣಬಹುದಾದ ದೃಶ್ಯ. ಮಕ್ಕಳಿಗೆ "ಅಜ್ಜಯ್ಯ," "ಅಜ್ಜಿ" ಇರುವದೇ ಹೊರತು ತಂದೆಯರು ಮತ್ತು ಎಷ್ಟೋ ವೇಳೆ ತಾಯಂದಿರುಕೂಡ ಇರುವದ್ದು ಅಪರೂಪ. ಅಜ್ಜ—ಅಜ್ಜಿಯರು ಕೂಡ ಇಲ್ಲದ ತಬ್ಬಲಿಗಳೂ ಬಹಳ ಇರಬೇಕು. ಗೆದ್ದವರ ಕೈಲಿ ಯುದ್ಧ ಕೈದಿಗಳಾಗಿರುವವರ ಬಿಡುಗಡೆಯನ್ನೆದುರು ನೋಡುತ್ತ ಇರುವ ಮನೆಗಳೆಷ್ಟೋ.

ಜರ್ಮನರೊಡನೆ ಸಂಪರ್ಕ

ನನ್ನ ಹೆಂಡತಿಗಾಗಲಿ ನನಗಾಗಲಿ ಜರ್ಮನ್ ಭಾಷೆ ಬಾರದು. ಬಂದಿದ್ದರೂ ಗುರುತು ಪರಿಚಯವಿಲ್ಲದವರನ್ನು ಸಂಪಾದಕ್ಕೆ ಹಚ್ಚಿ ಅವರ ನೋವನ್ನು ಕೆದರುವ ಗೊಡವೆಗೆ ನಾವು ಹೋಗುತಿರಲಿಲ್ಲ. ನಮಗೆ ದೊರೆತ ಸಂಪರ್ಕಗಳು ಸುಖಕರವೂ ಬೋಧಪ್ರದವೂ ಆಗಿದ್ದವು. ನನ್ನ ಪತ್ರಿಕಾ ಪರಿಷತ್ತಿಗೆ ಜರ್ಮನ್ ಸಂಪಾದಕರೂ ಸುದ್ದಿಗಾರರೂ ಬಂದಿದ್ದರು. ಅದೇ ಮೊದಲ ಸಂಪರ್ಕ. ಅವರೆಲ್ಲರೂ ಇಂಗ್ಲೀಷ ಬಲ್ಲವರು. ರಾಯ್ಟರ್ ಮತ್ತು ಬ್ರಿಟಿಶ ಮಿಲಿಟರಿ ಸರಕಾರದ ಪತ್ರಿಕಾವಿಭಾಗದ ಪ್ರತಿನಿಧಿಯೂ ಬಂದಿದ್ದರೂ ಅವರು ಪರಿಷತ್ತಿನಲ್ಲಿ ಅಡ್ಡಗಾಲು ಹಾಕಲಿಲ್ಲ.

ಆ ಜರ್ಮನರು ಮನಬಿಚ್ಚಿ ಪ್ರಶ್ನೆಗಳನ್ನು ಕೇಳಿದರು; ನನಗೂ ಸಹಜವಾಗಿ ಮುಚ್ಚಿಟ್ಟುಕೊಳ್ಳುವದೇನೂ ಇರಲಿಲ್ಲ. ಆದರೆ "ಜರ್ಮನ್ ಪತ್ರಿಕೋದ್ಯೋಗಿಗಳನ್ನು ಕುರಿತು ನಿಮಗೇನೆನಿಸುವದು?" ಎಂಬೊಂದು ಪ್ರಶ್ನೆ ಮಾತ್ರ ನನ್ನನ್ನು ಪೇಚಿನಲ್ಲಿ ಕೆಡಹಿತು. ಸಾಮಾನ್ಯವಾಗಿ ಇಂಥ ಪ್ರಸಂಗಗಳಲ್ಲಿ ನಾವು ಶಿಷ್ಟಾಚಾರಕ್ಕೆ ತಕ್ಕಂತೆ ಉತ್ತರ ಕೊಡುತ್ತೇವೆ. ಆದರೆ ಜರ್ಮನರೊಡನೆ ಬರಿ ಶಿಷ್ಟಾಚಾರ ತೋರಿಸಿದರೆ ಅದು ಔಪಚಾರಿಕ ಮಾತಿಗಿಂತಲೂ ಕೀಳಾದೀತು. ಕೈದಿಗಳಲ್ಲಿನಷ್ಟು ವಸ್ತು ಜರ್ಮನ ಪತ್ರಿಕೋದ್ಯೋಗಿಗಳನ್ನು ಸಂದರ್ಭವಶಾತ್ ಭೆಟ್ಟಿಯಾದ ನಾನು ಹೇಗೆ ತೀರ್ಮಾನಕ್ಕೆ ಬರಬೇಕು? ಬಂದರೂ ಇಂದಿನ ಸ್ಥಿತಿಗತಿಗಳಲ್ಲಿ ಆ ತೀರ್ಮಾನಕ್ಕೆ ಎಳ್ಳಷ್ಟಾದರೂ ಬೆಲೆಯುಂಟೆ? ಈ ಪ್ರಶ್ನೆಯನ್ನು ನನಗೆ ಇನ್ನಿಷ್ಟು ವರ್ಷಗಳ ಮೇಲೆ ಹಾಕಿದರೆ ಒಳಿತೆಂದು ನಾನು ಉತ್ತರ ಕೊಟ್ಟೆ. ನಿಜವಾಗಿ ಅವರಲ್ಲಿ ಕೆಲ ಬುದ್ಧಿಶಾಲಿ ಯುವಕ ಯುವತಿಯರಿದ್ದರು. ಅವರೊಡನೆ ಇಬ್ಬರಿಗೂ ಅರ್ಥವಾಗುವ ಭಾಷೆಯಲ್ಲಿ ನಡೆಸಿದ ಸಂಭಾಷಣೆ ರಸವತ್ತಾಗಿತ್ತು. ಉಳಿದಂತೆ, ಬೇರೆ ಜರ್ಮನರೊಡನೆ, ಅವರ ಜರ್ಮನ್ ನಮಗೆ ತಿಳಿಯದ್ದೂ ನಮ್ಮ ಇಂಗ್ಲೀಷು ಅವರಿಗೆ ಗೊತ್ತಾಗದ್ದೂ ತೀರ ಅಸಮಾಧಾನಕರವಾಗಿತ್ತು.

ಪತ್ರಿಕಾಸ್ವಾತಂತ್ರ್ಯ

ಜರ್ಮನಿಯಲ್ಲಿರುವ ಎಲ್ಲ ಪತ್ರಿಕೆಗಳೂ ಬ್ರಿಟಿಶ, ಅಮೇರಿಕನ್, ರಶಿಯನ್ ಅಥವಾ ಫ್ರೆಂಚ ಆಕ್ರಮಣಾಧಿಕಾರಿಗಳಿಂದ ಲೈಸನ್ಸ ಪಡೆಯಲೇಬೇಕು. ಆದರೆ ಪಶ್ಚಿಮ ಜರ್ಮನಿಯಲ್ಲಂತೂ— ಪೂರ್ವಭಾಗಕ್ಕಿಂತ ಪಶ್ಚಿಮ ಭಾಗದ ಪರಿಚಯವೇ ನಮಗೆ ಹೆಚ್ಚು ಆಗಿತ್ತು— ಈ ಲೈಸನ್ಸುಗಳನ್ನು ಅನಿರ್ಬಂಧವಾಗಿ ಕೊಡಲಾಗುತ್ತಿದೆ. ಪತ್ರಿಕೆಗಳಿಗೂ ಬೇಕಾದ್ದನ್ನು ಪ್ರಕಟಿಸಲು ಅಧಿಕಾರ ಕೊಡಲಾಗಿದೆ. ಆದರೆ ಅಧಿಕಾರಿಗಳಿಗೆ ಮೆಚ್ಚದ್ದನ್ನು ಪ್ರಕಟಿಸಿದರೆ ಪತ್ರಿಕೆಯನ್ನು ಹತ್ತಿಕ್ಕಲು ಇಲ್ಲವೆ ಬೇರೆ ಬಗೆಯ ಪ್ರಾಯಶ್ಚಿತ್ತ ಕೊಡಲು ಅವಶ್ಯವಾದ ವ್ಯವಸ್ಥೆ ಇದ್ದೇ ಇದೆ. ರಶಿಯನ್ನರು ತಮ್ಮ ವಿಭಾಗದಲ್ಲೇ ಹೆಚ್ಚು ಪತ್ರಿಕಾ. ಸ್ವಾತಂತ್ರ್ಯವುಂಟೆಂದು ಸಾಧಿಸುತ್ತಾರೆ. ಆದರೆ ಒಮ್ಮೆ ಪತ್ರಿಕೆಗಳಿಗೆ ಕೊಡಬೇಕಾದ ಮಿತವಾದ ಸ್ವಾತಂತ್ರ್ಯದ ವಿಷಯದಲ್ಲಿ ಒಂದು ಪರಿಷತ್ತಿನಲ್ಲಿ ಪಾಶ್ಚಿಮಾತ್ಯ ಮಿತ್ರರು ಆಕ್ರಮಣಾಧಿಕಾರಿಗಳನ್ನು "ಅಸೂಯಾಪೂರ್ವಕವಾಗಿ ಟೀಕಿಸುವದು" ನಿಷಿದ್ಧವೆಂದು ಸೂಚಿಸಿದಾಗ ರಶಿಯನ್ನರು "ಅಸೂಯಾಪೂರ್ವಕ" ಶಬ್ದವನ್ನು ತೆಗೆದುಹಾಕಬೇಕೆಂದೂ "ಟೀಕಿಸುವದು" ಯಾವಾಗಲೂ "ಅಸೂಯಾಪೂರ್ವಕವೇ" ಇರುವದೆಂದೂ ವಾದಿಸಿದರಂತೆ! ಅದೇನೇ ಇದ್ದರೂ ಸದ್ಯಕ್ಕಂತೂ ಎರಡೂ ಕಡೆ ವಿರುದ್ಧ ವಿಭಾಗದಲ್ಲಿರುವ ಅಧಿಕಾರಿಗಳನ್ನು ಬೇಕಾದಂತೆ ಟೀಕಿಸಲು ಎಲ್ಲ ಪತ್ರಿಕೆಗಳಿಗೂ ಸ್ವಾತಂತ್ರ್ಯವಿದೆ!

ಬರ್ಲಿನ್ನಿನ "ಟೆಲಿಗ್ರಾಫ್" ಪತ್ರಿಕೆಯ ಕಚೇರಿಯನ್ನು ಸಂದರ್ಶಿಸಲು ನನಗೆ ಅವಕಾಶ ದೊರಕಿತು. ಅದು ಬರ್ಲಿನ್ನಿನ ಅತಿ ದೊಡ್ಡ ಪತ್ರಿಕೆಯೆಂದು ತೋರುತ್ತದೆ. ಅದರ ಯಂತ್ರಗಳು ಯುದ್ಧಪೂರ್ವದವು. ಯುದ್ಧದ ಮತ್ತು ತದನಂತರದ ಘಟನೆಗಳ ಗುರುತುಗಳು ಅದರ ಮೇಲೆ ಸ್ಪಷ್ಟವಾಗಿ ಮೂಡಿದ್ದವು.

ಅವರೂ ಸೌಜನ್ಯದಿಂದಲೂ ಬಿಚ್ಚುಮನಸಿನಿಂದಲೂ ನಡೆದುಕೊಂಡರು. ಆರ್ಥಿಕ ಉಪಸಮಿತಿಯ ಅಧ್ಯಕ್ಷರಾದ ಸರ್ ಸೆಸಿಲ್ ವೇರರು ಒಳ್ಳೇ ಪ್ರಾಮಾಣಿಕ್ಯವುಳ್ಳ ಹಾಗು ಕೌತುಕದ ಜನ. ಅವರು ನಮ್ಮನ್ನು ಊಟಕ್ಕೆ ಕರೆದು ಹಲವರ ಪರಿಚಯವಾಗುವಂತೆ ಮಾಡಿದರು. ಭಾರತದ ಮೊದಲನೆ ಭಾರತೀಯ ಗವರ್ನರ ಜನರಲ್ಲರಿಗೆ ಶುಭವಾಗಲೆಂದು ಕೋರಿ ಎಲ್ಲರನ್ನೂ ಅವರು ಆಶ್ಚರ್ಯಗೊಳಿಸಿದರು. ಈ ಸುದ್ದಿ ಆಗ ತಾನೇ ಆಕಾಶವಾಣಿಯಲ್ಲಿ ಬಂದಿತ್ತು.

ಅಮೇರಿಕನ್ ವಿಭಾಗದಲ್ಲಿ ಜನರಲ್ ಲುಸಿಯಸ್ ಕ್ಲೇಯವರೂ ನನಗೆ ಅಷ್ಟೇ ಸೌಜನ್ಯ ತೋರಿದರು. ಬರ್ಲಿನ್ನಿನ ವಿಷಯದಲ್ಲುಂಟಾಗಿದ್ದ ಬಿಕ್ಕಟ್ಟನ್ನು ನೆನೆದರೆ ಅವರು ಈ ಪರಿಸ್ಥಿತಿಯು ಹಾಳಾಗುತಿದೆಯೆಂಬ ಭಾವವನ್ನು ತೋರಿಸದೆ ನನ್ನೊಡನೆ ಚರ್ಚಿಸಲು ಸಿದ್ಧರಾದುದನ್ನು ನಾನು ಪ್ರಶಂಸಿಸದಿರಲಿಲ್ಲ. ಅಮೇರಿಕನ್ ಪ್ರದೇಶದಲ್ಲಿ ಸಂಚರಿಸಬೇಕೆಂದು ನನ್ನನ್ನು ಒತ್ತಾಯಗೊಳಿಸಲಾಯಿತು. ಫ್ರೆಂಚ ಮತ್ತು ಬ್ರಿಟಿಶ ಪ್ರದೇಶಗಳಲ್ಲಿಯೂ ನಾನು ಸಂಚರಿಸಲು ಯಾವ ಅಡ್ಡಿಯೂ ಇದ್ದಿಲ್ಲ. ಆದರೂ ಸಮಯವಿಲ್ಲದ್ದರಿಂದ ಅದು ಸಾಧ್ಯವಾಗಲಿಲ್ಲ.

ಸಾಕಪ್ಪಾ, ಆಕ್ರಮಣ!

ಪಶ್ಚಿಮ ವಿಭಾಗದಲ್ಲಿ ನನ್ನಲ್ಲಿ ಅಚ್ಚೊತ್ತಿದ ಅಭಿಪ್ರಾಯವೆಂದರೆ, ಆ ಭಾಗದ ಯಾವ ಅಧಿಕಾರಿಗೂ ಅವಶ್ಯಕತೆಗಿಂತ ಒಂದು ದಿನ ಹೆಚ್ಚು ಜರ್ಮನಿಯನ್ನು ಆಕ್ರಮಣದಲ್ಲಿಟ್ಟುಕೊಳ್ಳುವ ಮನಸಿಲ್ಲ. ಒಬ್ಬ ಪ್ರಮುಖ ಹೇಳಿದ್ದು: "ಜರ್ಮನಿಯನ್ನು ೫೦ ವರ್ಷ ಕಾಲ ಆಕ್ರಮಿಸುವೆವೆಂದು ನಾವು ಹೇಳಿದ್ದೆವು. ಆದರೆ ಇನ್ನೈದು ವರ್ಷಗಳಲ್ಲಿ ಈ ಕೆಲಸ ಸಾಕೋಸಾಕೆನಿಸಿ ನಾವು ಜರ್ಮನಿಯನ್ನು ಅದರ ಪಾಡಿಗೆ ಸಂತೋಷದಿಂದ ಬಿಟ್ಟುಹೋಗಬಹುದು. ಈ ಜನರೊಡನೆ ಎಷ್ಟು ಕಾಲ ಕೈಕುಲುಕಿಸದೆ ಇರೋಣ?"

ಜರ್ಮನರೊಡನೆ ಕೈಕುಲುಕಿಸುವ ಪರಿಪಾಠ ಈಗಾಗಲೆ ಪ್ರಾರಂಭವಾಗಿದೆ. ಅಷ್ಟೆ, ಶುಭವಾಗಿ ಮತ್ತೆ ಯುದ್ಧದ ದಾರಿ ಹಿಡಿಯಲು ಅವಕಾಶ ದೊರೆಯುವಷ್ಟರಿಗೆ ಅವನ್ನು ಕಡಿವರೆಂದು [illegible]. [illegible] ಈ ವಿಷಯದಲ್ಲಿ [illegible] [illegible] ಅಧಿಕಾರವಿದೆ. [illegible] [illegible] [illegible] [illegible] [illegible] [illegible] [illegible] [illegible] [illegible]

ಆಳ ಮಣಿ [illegible] [illegible] ಮಣಿಯಬೇಕು, [illegible]

ರಶಿಯನ್ ಅಧಿಕಾರಿಗಳು

ಸೋವಿಯಟ್ ವಿಭಾಗದ ವಿಚಾರ ಮಾತಾಡಲು ನನಗೆ ಅಷ್ಟೇನೂ ಅಧಿಕಾರ ಸಾಲದು. ಎರಡೂ ಕಡೆಯ ದೊಡ್ಡ [illegible] ರನ್ನು ಕಾಣಬೇಕೆಂದು ನನ್ನ ಇಚ್ಛೆಯಾಗಿತ್ತು. ಸೋವಿಯಟ್ ಮಿಲಿಟರಿ ಗವರ್ನರರಾದ ಮಾರ್ಶಲ್ ಸೊಕೊಲೊವಸ್ಕಿಯವರನ್ನು ಕಾಣುವ ಆಶೆಯನ್ನಿಟ್ಟುಕೊಂಡಿದ್ದೆ. ಆದರೆ ಚಳಾವಳಿಯ ಬಿಕ್ಕಟ್ಟು ಅದ್ದ ಬಂತು, ಅವರು ಅದರಲ್ಲಿ ಸಿಕ್ಕಿಕೊಂಡಿದ್ದರು. ಆದರೆ ಬದಲಿಗೆ ಅವರ ಸಹಾಯಕರಾದ ಜನರಲ್ ಯಾಕಂಕೋ ಅವರನ್ನು ಕಾಣಲು ಅವಕಾಶ ಸಿಕ್ಕಿತು. ಸ್ವತಃ ಬರ್ಲಿನ್ ನಗರ ರಶಿಯನ್ ವಿಭಾಗದನಡುವೆ ಇದ್ದರೂ ಅದು ವಿಶಾಧಿಕಾರ ಕೊಳ್ಳಲಪಟ್ಟಿಲ್ಲ. ಅದರಲ್ಲಿಯೂ ಬ್ರಿಟಿಶ, ಅಮೇರಿಕನ್, ಫ್ರೆಂಚ್, ರಶಿಯನ್ ಎಂದು ನಾಲ್ಕು ವಿಭಾಗಗಳಿವೆ. ಒಂದು ವಿಭಾಗದಿಂದ ಇನ್ನೊಂದಕ್ಕೆ ಹೋಗಿಬರಲು ಮುಕ್ತದ್ವಾರವಿದ್ದರೂ ಗಡಿಯಲ್ಲಿ ಅವೆ ತರೆಗಳು ಬರುವದು ನಿಶ್ಚಿತ ಮಾತು. "ನೀವೀಗ ವಿರುದ್ಧ ವಿಭಾಗವನ್ನು ಪ್ರವೇಶಿಸುತಿರುವಿರಿ, ಎಚ್ಚರಿಕೆ!" ಎಂಬ ದೊಡ್ಡ ಅಕ್ಷರದ ಹಲಗೆಗಳು ಗಡಿಯಲ್ಲಿ ನಿಮ್ಮನ್ನು ಎದುರಿಸುತ್ತವೆ. ಅದನ್ನು ನೋಡಿದೊಡನೆ ನಿಮ್ಮ ಸರಕು ಸಾಮಗ್ರಿಗಳನ್ನೆಲ್ಲ ಹತ್ತಿರ ಎಳೆದುಕೊಂಡು, ಜೇಬಿನ ಹಣದ ಪಾಕೀಟನ್ನು ಮುಟ್ಟಿಕೊಂಡು ಏನು ಬರುವದೋ ಎಂದು ಎದುರುನೋಡುತ್ತ ಕೂಡ್ರಬೇಕಾಗುವದು. ಆದರೆ ನಮ್ಮ ಮೋಟಾರಿಗೆ ಯಾವ ಅವಗಢವೂ ಒದಗಲಿಲ್ಲ. ರಶಿಯನ್ ಕಚೇರಿಯಾದ ಕಾರ್ಲ್‌ಹಾರ್ಸ್ಟದಲ್ಲಿ ನಾವು ಜನರಲ್ ಯಾಕಂಕೋ ಅವರನ್ನು ಕಂಡೆವು. ಇಲ್ಲಿಯೂ ವಾತಾವರಣ ಸೌಜನ್ಯಪೂರ್ಣವಾಗಿತ್ತು. ಜನರಲ್ ಸಾಹೇಬರು ಸಮಯಕ್ಕೆ ಸರಿಯಾಗಿ ನಮ್ಮ ನೀಟವಾಗಿಯೂ ಗಂಭೀರವಾಗಿಯೂ ಕಾಣಿಸುತಿದ್ದರು. ಅವರೊಡನೆಯೂ ಸಂಭಾಷಣೆ ಗಡಿಬಿಡಿಯಿಲ್ಲದೆ ಅಬಾಧಿತವಾಗಿ ಸಾಗಿತು. ರಶಿಯನ್ ಭಾಷೆ ನನ್ನ ಕಿವಿಗೆ ಮಧುರವಾಗಿಯೂ ಸುಸಂಸ್ಕೃತವಾಗಿಯೂ ಕೇಳಿಸಿತು.

ಸೋವಿಯಟ್ ಸುದ್ದಿ ಖಾತೆಯ ಮುಖ್ಯಸ್ಥರಾದ ಜನರಲ್ ಕೋಲ್ಪಕಿನ್ನರು ನನಗೆ ಭೆಟ್ಟಿಯಾದವರಲ್ಲಿ ಇನ್ನೊಬ್ಬರು. ಅವರು ನಮಗೆ ರಶಿಯನ್ ಪತ್ರಿಕಾ ಸಮಾಜದಲ್ಲಿ [illegible] ಸತ್ಕಾರವನ್ನಿತ್ತರು. ಹಿಂದೀ ಕೈನ್ಯ ಶಿಷ್ಟಮಂಡಲದ ರಾಯ ಅಲ್ಲ್ [illegible] ಸಹ [illegible] ಇದ್ದರು. [illegible] ರಶಿಯನ್ ಅಧಿಕಾರಿಗಳ [illegible] [illegible] [illegible] [illegible]

[illegible]

ಭಾರತೀಯನ ದೃಷ್ಟಿ

[illegible]

(ಇನ್ನೂ ಇದೆ)

ವಿವಿಧ ಪ್ರಪಂಚ

ಅಂಜಿಕೆಯನ್ನು ಗೆಲ್ಲುವ ಬಗೆ

ಚಿಕ್ಕಂದಿನಲ್ಲಿ ಸುತ್ತುಮುತ್ತಲಿನ ಭಯಂಕರ ಸಂಗತಿಗಳನ್ನು ಕೇಳಿ ಇಲ್ಲವೆ ನೋಡಿ ತಲೆಯಲ್ಲಿ ಹೊಕ್ಕ ಭಯವೆಂಬ ಭಾವವಿಕಾರವು ದೊಡ್ಡವನಾ(ಳಾ)ದ ಮೇಲೆ ನಿನ್ನ ಬಿಡುಳನ್ನೇ ತಿನ್ನ ತೊಡಗುತ್ತದೆ. ಈ ಶತ್ರುವನ್ನು ಗೆದ್ದರೆ ಉಳಿದ ಶತ್ರುಗಳನ್ನು ಗೆಲ್ಲುವುದು ಅತಿ ಸುಲಭವಾಗುವುದು.

(೧) ಮೊದಲು ಭಯ ಹುಟ್ಟಿದ್ದು ಯಾವಾಗ ಎಂಬುದನ್ನು ಧ್ಯಾನಿಸಿ ನೆನಪಿಗೆ ತಂದುಕೊಳ್ಳಬೇಕು. ಆಗ ಅದರ ಕಾರಣ ಅಸತ್ಯವೆಂದು ಅರಿತರೆ ಭಯಭಾವ ಹೊರಟು ಹೋಗುವುದು.

(೨) ಭಯಕ್ಕೆ ಪ್ರತಿಭಯ: ಶಸ್ತ್ರಚಿಕಿತ್ಸೆಯ ಬಗ್ಗೆ ಭಯವುಳ್ಳವರು ಆ ಭಯಕ್ಕಿಂತ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಕಾಹಿಲೆ ಹೆಚ್ಚಾಗಿ ಮರಣಕ್ಕೆ ಕಾರಣವಾಗಬಹುದುವೆಂಬ ಇಲ್ಲವೆ ಅಮಾನುಷ ಹಿಂಸೆಯನ್ನು ದೀರ್ಘಕಾಲ ಅನುಭವಿಸಬೇಕಾಗಿ ಬರಬಹುದೆಂಬ ಭಯ ಹೆಚ್ಚಿನದೆಂದು ತಿಳಿದರೆ ಮೊದಲ ಭಯ ಪಲಾಯನ ಮಾಡುತ್ತದೆ. ಹೀಗೆ ಒಂದು ಹೆದರಿಕೆಯನ್ನು ಓಡಿಸಬೇಕಾದರೆ ಅದಕ್ಕಿಂತ ಬಲವಾದ ಮತ್ತೊಂದು ಹೆದರಿಕೆಯನ್ನು ತಂದುಕೊಳ್ಳಬೇಕು.

(೩) ಗೆಳೆಯರೊಡನೆ ಇಲ್ಲವೆ ತಜ್ಞರಲ್ಲಿ ನಿವೇದಿಸಿ ವಿಷಯವನ್ನು ತಿಳಿದುಕೊಂಡು ಭಯನಿವಾರಣ ಮಾಡಿಕೊಳ್ಳಬಹುದು. ನಿನ್ನ ಭಯದ ಕಾರಣಗಳು ಆಭಾಸಿಕವೆಂಬುದು ಆಗ ತಿಳಿದು ಅದು ಪರಿಹಾರವಾಗಬಹುದು.

(೪) ಕಡೆಯದಾಗಿ, ಯಾವುದರ ಬಗ್ಗೆ ಭಯವಿದೆಯೋ ಅದರಿಂದ ದೂರ ಹೋಗಿ ಅದಕ್ಕೆ ಪ್ರತಿಯಾಗಿ ಆ ಭಯಕ್ಕೆ ಕಾರಣವಿಲ್ಲದೆ ಆದರೆ ಆ ವಸ್ತುವಿನ ಪ್ರಯೋಜನವನ್ನು ಕೊಡುವ ಮತ್ತೊಂದನ್ನು ಪರಿಗ್ರಹಿಸಬೇಕು. ಭೂತವಿದ್ದ ಮನೆಯಲ್ಲಿ ಹೆದರಿಕೆಯಾದರೆ ಅದನ್ನು ಬಿಟ್ಟು ಮತ್ತೊಂದಕ್ಕೆ ಹೋಗುವುದು ಇದಕ್ಕೊಂದು ಉದಾಹರಣೆ.

'ಮನೋವಿಜ್ಞಾನಿ' ಎಂಬವರು 'ಸಂಜೀವನ'ದಲ್ಲಿ ಮೇಲಿನಂತೆ ಬರೆದುದು ಮನನೀಯವಾಗಿದೆ; ದುರ್ಬಲರಿಗೆ ಭಯ ಜಾಸ್ತಿ. ಅಂಥವರಿಗಾದರೂ ಇಂಥ ಪ್ರಯೋಗ ಅತ್ಯವಶ್ಯಕ. ಕೆಲ ನಾಗರಿಕಂಮನ್ಯ ಸ್ತ್ರೀಯರು ತಾವೇ ತಂದ್ಕೊಂಬ ಭಯ ಮತ್ತಷ್ಟು ಮೋಜಿನದು. ಸುಂದರೀಂಮನ್ಯತೆ, ಮಾತ್ಸರ್ಯ, ಸ್ತುತಿಪ್ರಿಯತೆ, ಭೋಗಪಾತ್ರಭಾವ, ಅದರಿಂದ ತಾವೊಂದು ಬೆಲೆಬಾಳುವ ವಸ್ತು ಎಂಬ ತಿಳಿವಳಿಕೆ ಇತ್ಯಾದಿಗಳಿಂದ ನಾಟಕೆಯ ನಾಟಕವಾಡಿ ಅಂತ್ಯದಲ್ಲಿ ನಿರಾಶೆಯ ಗರಗಸದಲ್ಲಿ ಸಿಕ್ಕ ವಿಶ್ವಾಸ್ಯತೆಯನ್ನು ಕಳೆದುಕೊಂಡಾಗ ಉಂಟಾಗುವ ಬುದ್ಧಿವಿಕಾರಜನ್ಯ ಭಯ ಅವರ್ಣನೀಯವೂ ಅಪರಿಹಾರ್ಯವೂ ಆಗುವುದರಿಂದ ಅಂಥವರು ಮೊದಲೇ ಮುಂಜಾಗ್ರತೆ ವಹಿಸಬೇಕು. ಅಂಥವರ ಉದಾಹರಣೆಯನ್ನು ಅದೇ ಪತ್ರಿಕೆಯಲ್ಲಿಯ 'ಮುಂಬಯಿಯ ನೀತಿ' ಎಂಬ ಲೇಖನದಲ್ಲಿ ನೋಡಬಹುದು.

ಸುಖ

ಅಮೇರಿಕದ ಅಧ್ಯಕ್ಷನಾಗುವದೆಂದರೆ ಬಹಳ ಭಾಗ್ಯದ ಸಂಗತಿ ಎಂದು ಬಹಳ ಜನ ತಿಳಿದಿದ್ದರೆ ಅದು ತಪ್ಪೆಂದು ಥಾಮಸ್ ಜಫರ್ಸನ್ನರು ಹೇಳುತ್ತಾರೆ.

ಅಧ್ಯಕ್ಷನಿಗೆ ದಿನದ ೨೪ ತಾಸುಗಳನ್ನು ವೇಳಾಪತ್ರಿಕೆಯಲ್ಲಿ ಕಾರ್ಯವಿಶೇಷಗಳಿಗಾಗಿ ವಿಭಜಿಸಿ ಇಡಬೇಕಾಗುತ್ತದೆ. ಅವನ ವಿರಾಮವಿನೋದಗಳು ಕೂಡ ಶಿಸ್ತಿನಿಂದ ಕ್ರಮಬದ್ಧವಾಗಿ ಸಿಗಬೇಕಲ್ಲದೆ ಬಿಡುಗಡೆಯ ಹಗುರಿದೆಯಿಂದ ಅವನು ಅವನ್ನು ಅನುಭವಿಸಲಾರನು. ಒಂದು ನೃತ್ಯಸಮಾರಂಭ ಇಲ್ಲವೆ ಭೋಜನ ನಡೆಯುತೆಂದರೆ ಅಲ್ಲಿ ಅವನು, ಅವನ ಹೆಂಡತಿ ಮತ್ತು ಕುಟುಂಬದವರು ಪ್ರದರ್ಶನಕ್ಕೆ ಇಟ್ಟ ವಸ್ತುಗಳಂತೆ ಇರಬೇಕಾಗುತ್ತದೆ. ಅದರಲ್ಲಿ ಅವರು ಬಹಳ ಬಗುವಿನಿಂದ ನಾಗರಿಕತೆಯನ್ನು ಪ್ರದರ್ಶಿಸಬೇಕಾಗುತ್ತದೆ. ಎಲ್ಲಾದರೂ ಅವರು ವಿಹಾರಯಾತ್ರೆಗೆ ಹೋದರೆ ಅವರ ಪ್ರತಿ ನಿಮಿಷದ ಪಯಣವನ್ನೂ ಶ್ವೇತಭವನದ ದಫ್ತರದಲ್ಲಿ ಬರೆದಿಡಲಾಗುತ್ತದೆ; ಮತ್ತು ದಾರಿಯಲ್ಲಿ ನೂರಾರು ತೀವ್ರ ಪ್ರಶ್ನೆಗಳಿಗೆ ಸಂಬಂಧಿಸಿದ ಪತ್ರವ್ಯವಹಾರಗಳನ್ನು ಅಧ್ಯಕ್ಷನು ಸ್ವೀಕರಿಸುತ್ತಲೂ ಅವುಗಳನ್ನು ಬಿಡಿಸಲು ಯೋಚಿಸುತ್ತಲೂ ಹೋಗಬೇಕಾಗುತ್ತದೆ. ಇದಕ್ಕೆ ಸುಖವೆನ್ನಬಹುದೇ? ಅದಕ್ಕೇ ಶೇಕ್ಸ್‌ಪಿಯರ್ ಹೇಳಿದ- ಕಿರೀಟ ಹೊತ್ತ ತಲೆಗೆ ಯಾವಾಗಲೂ- ಚಿಂತೆ ತಪ್ಪದು ಎಂದು.

ಬ್ರಿಟನ್ನಿನ ಮೋಟಾರು ಉದ್ಯಮದ ಯೋಜನೆ

ಮೋಟಾರಿನ ಉದ್ಯಮವು ಬ್ರಿಟನ್ನಿನ ಪ್ರಧಾನ ಉದ್ಯಮಗಳಲ್ಲಿ ಒಂದು. ಅದಿಂದು ಬ್ರಿಟನ್ನಿನ ನಿರ್ಯಾತ ಉದ್ಯಮಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ೧೯೪೭ ರ ಅಕ್ಟೋಬರ ನಲ್ಲಿ ೮೭, ೨೨೦೦೦ ಪೌಂಡು ಬೆಲೆಬಾಳುವ ಸಾಮುಗ್ರಿಗಳನ್ನು ಪರದೇಶಗಳಿಗೆ ಈ ಉದ್ಯಮ ನಿರ್ಯಾತಮಾಡಿದೆ. ಉಳಿದ ತಿಂಗಳಿಗಿಂತ ಆ ತಿಂಗಳಲ್ಲಿ ಸರಾಸರಿ ೬ ಪಟ್ಟು ಹೆಚ್ಚು ಉತ್ಪಾದನೆಯಾಯಿತು.

೧೯೩೮ ರಲ್ಲಿ ಮೋಟಾರು ಕಾರುಗಳ ತಯಾರಿಕೆ ತಿಂಗಳಿಗೆ ಸರಾಸರಿ ೫೬೮೪ ಇದ್ದರೆ ಕಳೆದ ವರ್ಷ ಸರಾಸರಿ ೧೫೨೧೬ ಕ್ಕೇರಿತು. ಬೆಲ್ಜಿಯಂ ಸ್ವಿಜರ್‌ಲೆಂಡ್ ಮತ್ತು ಇತರ ರಾಜ್ಯಗಳು ೯ ರಿಂದ ೧೨ ಅಶ್ವಶಕ್ತಿಯ ವರೆಗಿನ ಕಾರುಗಳನ್ನು ಬಹಳವಾಗಿ ಕೊಂಡವು. ಸರಾಸರಿ ೬೫೦೦ ಕಾರುಗಳನ್ನು ೧೯೪೭ ರಲ್ಲಿ ಒಂದು ವಾರದಲ್ಲಿ ತಯಾರಿಸಲಾಗುತ್ತಿತ್ತು. ಇತರ ವಾಹನಗಳಲ್ಲಿ ೧೪೮೯೨ ವಿಶ್ರ ಜಾತಿಯವನ್ನೂ ೧೯, ೫೭೮ ಉಳುವ ಯಂತ್ರಗಳನ್ನೂ ತಯಾರಿಸಲಾಯಿತು. ಈ ಆಧಾರದ ಮೇಲೆ ಈ ವರ್ಷ ಉತ್ಪಾದನೆಯನ್ನು ಇನ್ನೂ ಹೆಚ್ಚಿಸುವ ಯೋಜನೆ ನಡೆದಿದೆ. ಇವರೆನ್ನಯ ರಾಶಿರಾಶಿಯಾಗಿ ತಯಾರುಮಾಡಲು ಸಾಧ್ಯವಾಗುವಂತೆ ವಾಹನಗಳ ವಿವಿಧಭಾಗಗಳ ಆಕಾರ ಮತ್ತು ಗಾತ್ರಗಳ ಸಾಮ್ಯವನ್ನು ಕಾದುಕೊಳ್ಳಲಾಗುವುದು.

೧೯೪೯ ರಿಂದ ಇಲ್ಲಿಯ ವರೆಗೆ ೧೩೬ ಇದ್ದ ಮಾದರಿಗಳನ್ನು ೬೨ ಕ್ಕೆ ಇಳಿಸಲಾಗಿದೆ. ಇನ್ನು ೧೨—೧೮ ತಿಂಗಳುಗಳಲ್ಲಿ ಆ ಮಾದರಿಗಳನ್ನು ೪೨ ಕ್ಕೆ ಇಳಿಸಲಾಗುತ್ತದೆ. ಮೋಟಾರಿನ ಮೈಯ ಮಾದರಿ ೫೯೯ ರಿಂದ ೪೦ ಕ್ಕಿಳಿಸಲಾಗುವುದು. ಈ ಯೋಜನೆ ಮುಖ್ಯವಾದ ೬ ಉದ್ಯಮಸಂಸ್ಥೆಗಳಿಗೆ ಮಾತ್ರ ಅನ್ವಯಿಸುತ್ತದೆ. ಈ ಯೋಜನೆಯ ಪ್ರಕಾರ ಬ್ರಿಟಿಶ ಮೋಟಾರು ಉದ್ಯಮಿಗಳು ೩.೧೦,೦೦೦ ದಿಂದ ೩,೧೫,೦೦೦ ದ ವರೆಗೆ ಈ ವರ್ಷ ನಿರ್ಯಾತಕ್ಕಾಗಿಯೂ ೯೦,೦೦೦ ದಿಂದ ೧ ಲಕ್ಷದ ವರೆಗೆ ಒಳನಾಡಿಗಾಗಿಯೂ ಮೋಟಾರು ಕಾರುಗಳನ್ನು ತಯಾರಿಸಬೇಕೆಂದು ವ್ಯವಸ್ಥೆ ಮಾಡಲಾಗಿದೆ.

ಮಾಯಾಬಜಾರ!

ನ್ಯೂಯಾರ್ಕಿನಲ್ಲಿ "ಹೋಲ್ಡನ್ಸ್ ಮ್ಯಾಜಿಕ್ ಶಾಪ್" ಎಂಬ ಒಂದು "ಕಣ್ಕಟ್ಟು ವಿದ್ಯೆ"ಯ ಅಂಗಡಿಯಿದೆ. ಅಲ್ಲಿ ಮಾಯಾವಿದ್ಯೆಯನ್ನು ಕಲಿಸಲಾಗುವುದು. ಅಲ್ಲಿಗೆ ದಿನವೂ ನೂರಾರು ದರ್ಶನಾರ್ಥಿಗಳು ಹೋಗಿ ಬರುತ್ತಾರೆ; ಆ ಬಗ್ಗೆ ದುಡ್ಡು ಖರ್ಚು ಮಾಡದವರೇ ವಿರಳ.

ಜಾನ್‌ಸ್ಕೇರ್, ಎಂಬವನು ಆ ಅಂಗಡಿಯಲ್ಲಿ ಪ್ರಸಿದ್ಧ ಜಾದುಗಾರ. ಇವನು ದುಡ್ಡು ಕೇಳದೆ ಇಂದ್ರಜಾಲ ಮಾಡಿತೋರಿಸುತ್ತಾನೆ. ಅಲ್ಲಿ ಹೆಂಗಸರನ್ನು ಗರಗಸದಿಂದ ಸೀಳುವಂಥ ದೊಡ್ಡ ದೊಡ್ಡ ಭಯಂಕರ ಆಟಗಳನ್ನು ತೋರಿಸುತ್ತಾರೆ. ಜನಪ್ರಿಯವಾದ ಆಟಗಳು ಚೀನೀ ಅಕ್ಕಿ ಬಟ್ಟಲಿನದು; ಒಂದು ಬಟ್ಟಲ ತುಂಬ ಅಕ್ಕಿ ತುಂಬಿ ಮತ್ತೊಂದನ್ನು ಮುಚ್ಚಿದಾಗ ಅಕ್ಕಿಯ ಪರಿಮಾಣ ದ್ವಿಗುಣವಾಗಿರುವುದು. ಅದನ್ನು ಅತ್ತಿತ್ತ ಸುರಿಯದಂತೆ ಸರಿಪಡಿಸಿ ಮತ್ತೆ ಮುಚ್ಚಿದರೆ ಒಂದು ಕಾಳೂ ಇಲ್ಲದೆ ಅದರ ಬದಲು ಬಟ್ಟಲ ತುಂಬ ನೀರು ತುಂಬಿಕೊಂಡಿರುವುದು!



ಆಕ್ಸ್‌ಫರ್ಡಿನ ಭಾರತ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿ ಅನುಪಮವಾದ ಬೌದ್ಧ ದೇವಾಲಯದ ಕೆಲವು ಸಾಮಗ್ರಿಗಳನ್ನು ನೇಪಾಳದಿಂದಲೂ ಲಾಸಾದಿಂದಲೂ ತಂದು ಇಡಲಾಗಿದೆ. ನೇಪಾಳದಲ್ಲಿ ಸಿಕ್ಕ ಅತ್ಯಪೂರ್ವ ಬೌದ್ಧ ಶಿಲ್ಪವಿಶೇಷಗಳು ಇಲ್ಲಿವೆ.

ಕಳೆದ ವರ್ಷ ಅಂತರ್ರಾಷ್ಟ್ರೀಯ ಇಂದ್ರಜಾಲಿಕರ ಪರಿಷತ್ತಿನಲ್ಲಿ ಪ್ರಸಿದ್ಧ ಜಾದುಗಾರ ಕೋಲ್ಬನಿಗೆ ಗೌರವ ಸಲ್ಲಿಸಲಾಯಿತು. ಕೋಲ್ಬನ ವಿಶೇಷ ಆಟವೊಂದಿದೆ. ಅವನು ಎದುರಿಗೆ ಒಂದು ಮೇಜಿನ ಮೇಲೆ ೮ ಅಂಗುಲದ ಒಂದು ಘನಾಕೃತಿಯ ಬುಟ್ಟಿಯನ್ನು ಕವಚಿ ಮಂತ್ರ ಹಾಕಿ ಅದು ೩ ಅಡಿ ಎತ್ತರ ಬೆಳೆವಂತೆ ಮಾಡುತ್ತಾನೆ. ಅನಂತರ ಅದನ್ನು ಎತ್ತಿದಾಗ ಅದರಡಿ ಅವನ ಹೆಂಡತಿ ಕುಳಿತದ್ದು ಕಾಣಿಸುತ್ತದೆ!

ಮೇಲಿನ ಸಂಗತಿ ಸಂಡೇ ಸ್ಟ್ಯಾಂಡರ್ಡಿನಲ್ಲಿ ಕೊಟ್ಟಿದೆ. ಹಿಂದೀಯರ ಅಂಧಶ್ರದ್ಧೆಗಳನ್ನು ಹೆಸರಿಸಿ ಮೂಗುಮುರಿವ ಪಾಶ್ಚಾತ್ಯರಲ್ಲಿ ಇಂಥ ಇಂದ್ರಜಾಲ ನೋಡುವ ಹುಚ್ಚಿರುವುದು ವಿಚಿತ್ರವಲ್ಲವೆ? ಕುಬೇರರು ಕೊಳಕು ಬಟ್ಟೆಯುಟ್ಟರೆ ನಗುವ ಧೈರ್ಯ ಯಾರಿಗಿದೆ? 'ಯಸ್ಯಾಸ್ತಿ ವಿತ್ತಂ.... ಸ ಪಂಡಿತಃ' ಅಲ್ಲವೆ?

ನೆಲಗಡಲೆಯಿಂದ ಉಣ್ಣೆ

ಸ್ಕಾಟ್ಲೆಂಡಿನ ಅರ್ಡಿಯರ್ ವರ್ಕ್ಸ್ ಎಂಬಲ್ಲಿಯ ವಿಜ್ಞಾನಿಗಳು ನೆಲಗಡಲೆಯಲ್ಲಿಯ ಪ್ರೋಟೀನಿನಿಂದ ಅರ್ಡಿಲ್ ಎಂಬ ಕೃತಕ ಉಣ್ಣೆಯನ್ನು ತಯಾರಿಸುವ ವಿಧಾನವನ್ನು ಶೋಧಿಸಿದ್ದಾರೆ. ಅದನ್ನು ನಿಜವಾದ ಉಣ್ಣೆಯ ಜೊತೆಗೆ ಸೇರಿಸಿದರೆ ಗುರುತವೇ ಸಿಕ್ಕುವುದಿಲ್ಲ. ಅದನ್ನು ಹುಳು ತಿನ್ನುವದಿಲ್ಲ; ಅದರಲ್ಲಿ ಮಡಿಕೆಯ ಗುರುತು ಬೀಳುವುದಿಲ್ಲ. ಅದು ತಾಜಾ ಉಣ್ಣೆಗಿಂತ ಸುಲಭ ಬೆಲೆಗೆ ಸಿಗುತ್ತದೆ.

ಜನಮತ

ಗೋವಿನಜೋಳ

ಮಾನ್ಯ ಸಂಪಾದಕರೆ:

. . . ಆಖಂಡ ೨೩ ದಿನಗಳ ವರೆಗೆ ಗೋವಿನಜೋಳವನ್ನೇ ಬೇರೆ ಬೇರೆ ರೀತಿಯಿಂದ ಉಪಯೋಗಿಸಿ (ನಾನು) ಯಶಸ್ವಿಯಾಗಿದ್ದೇನೆ. ಅಕ್ಕಿ, ಗೋದಿ, ಜೋಳ ಇತ್ಯಾದಿ ಯಾವದೇ ಧಾನ್ಯಗಳನ್ನು ಉಪಯೋಗಿಸಿಲ್ಲ. ಅದನ್ನು ಉಪಯೋಗಿಸಬಹುದಾದ ರೀತಿಗಳನ್ನು ಕೆಳಗೆ ಕೊಡಲಾಗಿದೆ.

(೧) ಗೋವಿನಜೋಳವನ್ನು ೨೪ ತಾಸು ಬಿನೆಯಿಸಿ ಒಂದು-ಎಂಟಂಶ ಉದ್ದು ಸೇರಿಸಿ ರುಬ್ಬಿ ಹೊಯ್ದರೆ ದೋಸೆಯಾಗುತ್ತದೆ.

(೨) ಸಣ್ಣ ರವೆ ಮಾಡಿ, ಚನ್ನಾಗಿ ತೊಳೆದು ಹೊಟ್ಟು ಸಿಪ್ಪೆಗಳನ್ನು ಬೇರ್ಪಡಿಸಿ ಒಂದು-ಆರಂಶ ಉದ್ದು ರುಬ್ಬಿ ಕೂಡಿಸಿ ಥಾಲಿಗಳಲ್ಲಿ ಹಾಕಿ ಬೇಯಿಸಿದರೆ ಇಡ್ಲಿಗಳಾಗುತ್ತವೆ.

(೩) ಶಿರಾ ಮಾಡುವ ವಿಧಾನವನ್ನು ಶ್ರೀ. ಬಿಂದುಮಾಧವರು ಮೊದಲೇ ತಿಳಿಸಿದ್ದಾರೆ.

(೪) ದೊಡ್ಡ ರವೆ ಮಾಡಿ ಸೌತೆಕಾಯಿ ಹೆರೆದು ಹಾಕಿ, ಒಂದು (ಪಕ್ಕಾ) ಅಳತೆ ಸೇರಿನಷ್ಟು ರವೆಗೆ ಒಂದು ತೆಂಗಿನಕಾಯಿ ಹೆರೆದು ದಪ್ಪನಾನ (ಭಕರಿ) ಹಂಚಿನಲ್ಲಿ ಹೊಯ್ದು "ದೊಡ್ಡಣ"ಗಳನ್ನು ಮಾಡಬಹುದು.

(೫) ದೊಡ್ಡ ರವೆ ಅಳತೆಯ ಸೇರಿಗೆ ಒಂದು ತೆಂಗಿನ ಕಾಯಿಯ ಹಾಲನ್ನು (ತೆಂಗಿನಕಾಯಿ ತುರಿದು ರುಬ್ಬಿ ಹಿಂಡಿದರೆ ಹಾಲು ಬರುವದು) ಹಾಕಿ ಸ್ವಲ್ಪ ತೆಳ್ಳನಾಗಿ (ಬೆಲ್ಲ ಹಾಕಿ) ಬೇಯಿಸಿ ಯಾಲಕ್ಕಿಪುಡಿ ಹಾಕಿದರೆ ಪಾಯಸವಾಗುತ್ತದೆ.

(೬) ದೊಡ್ಡ ರವೆಯಿಂದ ಉಪ್ಪಿಟ್ಟು ಮಾಡಬರುತ್ತದೆ.

(೭) ಗೋವಿನಜೋಳದ ಹಿಟ್ಟು ಅಂಟಾಗಿರುವದರಿಂದ ಅದನ್ನು ಹದವಾಗಿ ನಾದಿದರೆ ಉತ್ತಮ ರೊಟ್ಟಿಗಳಾಗುತ್ತವೆ.

(೮) ಅದರ ನುಚ್ಚು ಮಾಡಿಹುರಿದು ಬೆಲ್ಲ ಹಾಕಿ ಕಸಿದರೆ ಉತ್ತಮ ಹುರಿ ಹಿಟ್ಟಾಗುವದು.

(೯) ಅದರ ರವೆ ಕರಚೀಕಾಯಿಯ ಹೂರಣಕ್ಕೆ ಬರುತ್ತದೆ.

(೧೦) ಗೋದಿಯ ರವೆಯಂತೆ ಗೋವಿನಜೋಳದ ರವೆಯೂ ಹುಗ್ಗಿಗೆ ಬರುತ್ತದೆ.

(೧೧) ಗೋವಿನ ಜೋಳವನ್ನು ೨೪ ತಾಸು ನೆನೆ ಹಾಕಿ ನಯವಾಗಿ ರುಬ್ಬಿ ಮುಂಬುರಿಗೆ ಹದವಾಗಿ ಬೇಯಿಸಿ ಶಾವಿಗೆಯ ಅಚ್ಚಿನಿಂದ ಒತ್ತಿದರೆ ಶಾವಿಗೆಯಾಗುತ್ತದೆ. ಅದನ್ನು ಒಣಗಿಸಿಟ್ಟರೆ ತಿಂಗಳುಗಟ್ಟಲೆ ಕೆಡುವದಿಲ್ಲ. ಒಗ್ಗರಣೆ ಕೊಟ್ಟರೆ ಶಾವಿಗೆ ಉಸಳಿಯಾಗುತ್ತದೆ.

(೧೨) ಮೇಲಿನಂತೆ ರುಬ್ಬಿದ ಹಿಟ್ಟಿಗೆ ಉಪ್ಪು, ಉಳ್ಳಾಗಡ್ಡೆ, ಹಸಿ ಮೆಣಸು ಹೆಚ್ಚಿ ಹಾಕಿ ಸಂಡಿಗೆಗಳನ್ನು ಮಾಡಬಹುದು.

(೧೩) ಗೋವಿನ ಜೋಳದ ನುಚ್ಚಿನ ಗಂಜಿ ಮಾಡಬಹುದು. (ಮುಗುಳು ಬೆಂದ ಕೂಡಲೆ ಮೇಲಿನ ಗಂಜಿ ಬಸಿದು ತಿರುಗಿ ಬೇಯಿಸಬೇಕು.)

(೧೪) ನುಚ್ಚಿಗೆ ಸಮ ಪ್ರಮಾಣ ಹೆಸರುಬೇಳೆ ಸೇರಿಸಿ, ರುಚಿಗಾಗಿ ಬದಾಮಿ, ದ್ರಾಕ್ಷಿಗಳನ್ನು ಹಾಕಿ ಸಾಕಷ್ಟು ತೆಂಗಿನಕಾಯಿ ರುಬ್ಬಿ ಬೆರಸಿ ಒಂದು-ನಾಲ್ಕಂಶ ಬೆಲ್ಲ ಹಾಕಿ ಬೇಯಿಸಿದರೆ ಕಿಚಡಿಯಾಗುವದು.

(೧೫) ರವೆಯ ಲಾಡು ಮಾಡಬಹುದು.

(೧೬) ನುಚ್ಚಿನಿಂದ ಅನ್ನಮಾಡಿ ಉಂಡು ಇಲ್ಲಿಯ ಶಿಕ್ಷಕಿಯೊಬ್ಬರು ಯಶಸ್ವಿಯಾಗಿದ್ದಾರೆ.

ಆದರೆ ವಿಷಯವಿಷ್ಟೆ; ಹೊಟ್ಟು, ಸಿಪ್ಪೆ, ಕಣ್ಣುಗಳನ್ನು ತೆಗೆಯುವದರಲ್ಲಿ ವಿಶೇಷ ಸೂಕ್ಷ್ಮತೆ, ಜಾಗರೂಕತೆ ಬೇಕು. ಹೊಟ್ಟು ಹೊಟ್ಟೆಗೆ ಹೋದರೆ ಭೇದಿ ಆಗುತ್ತದೆ. ವಾತಪ್ರಕೃತಿಯವರಿಗೆ ಇದರಿಂದ ಹಾನಿಯಿದೆ. ಶ್ರಮಜೀವಿಗಳು ಮತ್ತು ಪಚನ ಕ್ರಿಯೆ ಸರಿಯಾಗಿರುವವರು ಇದನ್ನುಪಯೋಗಿಸಿದರೆ ಏನೂ ಆಗುವದಿಲ್ಲ. ಹಾಲು ಹೈನ ಇದ್ದವರಿಗೆ ಇದರಿಂದ ಹಾನಿಯಾಗದು. ಆದುದರಿಂದ ಗೋವಿನಜೋಳವನ್ನು ಎಲ್ಲರೂ ಉಪಯೋಗಿಸಿ ರಾಷ್ಟ್ರದ ಕ್ಷಾಮನಿವಾರಣೆಗೆ ಸಹಕಾರಿಗಳಾಗಬೇಕು.

ಶಿರ್ಸಿ — ಕೆ. ಎನ್. ರಾವ್

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟಿ

ತಾ. ೧೮

ಮುಂಬಯಿ ಶೇರ ಪೇಟೆಯಲ್ಲಿ ಬೆಲೆಗಳು ಹೆಚ್ಚು ಕಡಿಮೆ ಯಥಾಸ್ಥಿತಿಯಲ್ಲಿ ಇದ್ದವು. ಸ್ವಾತಂತ್ರ್ಯದಿನ, ಹಬ್ಬಹುಣ್ಣಿವೆಗಳೇ ಮೊದಲಾದ ಕಾರಣಗಳಿಂದ ಪೇಟೆ ಮುಚ್ಚಿದ್ದ ದಿನಗಳೇ ಹೆಚ್ಚು. ಕೆಲವು ಜನರ ಪಾಲುಗಳು ಅಲ್ಪಸ್ವಲ್ಪ ಸುಧಾರಣೆಯನ್ನು ತೋರಿಸಿದರೂ ಉಳಿದ ಪಾಲುಗಳು ಇದ್ದಕ್ಕಿದ್ದಂತೆ ಇಲ್ಲವೆ ಅಲ್ಪಸ್ವಲ್ಪ ಇಳಿತವನ್ನೆ ತೋರಿಸಿದವು. ಇಂದಿನ ಕೊನೆಯ ದರಗಳು ಹೀಗಿದ್ದವು.

ಜವಳಿ

ಅಹಮದಾಬಾದ ಅಡ್ವಾನ್ಸ	೨೭೫—೦—೦
ಬಾಂಬೆ ಡಾಯಿಂಗ್	೧೦೫೫—೦—೦
ಸೆಂಟ್ರಲ ಇಂಡಿಯಾ	೨೮೪—೦—೦
ಸೆಂಚುರಿ	೫೩೬—೦—೦
ಗೋಕಾಕ	೪೦೯—೮—೦
ಕೋಹಿನೂರು	೪೧೪—೦—೦
ಫಿನಿಕ್ಸ	೪೪೬—೪—೦
ಸ್ವದೇಶಿ	೪೧೦—೦—೦

ಇತರ

ಬೇಲಾಪುರ ಸಕ್ಕರೆ	೨೭೫—೮—೦
ಬಾಂಬೇ ಬರ್ಮಾ	೪೨೧—೪—೦
ಸಿಂಧ್ಯಾ ಸ್ಟೀಮ	೨೬—೪—೦
ಟಾಟಾ ಸ್ಟೀಲ ಡೆಫರ್ಡ	೧೬೨೧—೪—೦
ಇಂಡಿಯನ್ ಆಯರ್ನ	೨೬—೩—೦
ಅಸೊ. ಸಿಮೆಂಟ್ಸ	೧೬೫—೪—೦
ಸೆಂಟ್ರಲ ಬ್ಯಾಂಕ್	೮೯—೦—೦
ಇಂಪೀರಿಯಲ್ ಬ್ಯಾಂಕ ಪೂರ್ಣ	೨೦೪೫-೦-೦
ಇಂಡಿಯನ್ ಬ್ಯಾಂಕ	೨೦೪-೦-೦
ರಿಝರ್ವ ,,	೧೧೪—೧೨—೦

ಚಿನ್ನ--ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಚಿನ್ನದ ಬೆಲೆ ಏರಿದ್ದರೂ ಬೆಳ್ಳಿಯದು ಯಥಾಸ್ಥಿತಿ ಇದೆ.

ತಯಾರಿ ಚಿನ್ನ	೧೧೬—೯—೦
ವಾಯದಾ ಚಿನ್ನ	೧೧೪—೯—೦
ಸಾವರೀನ	೭೬—೮—೦
ತಯಾರಿ ಬೆಳ್ಳಿ	೧೭೫—೧೪—೦
ವಾಯದಾ ,,	೧೭೫—೮—೦
ಚೇಂಬರ	೧೭೫-೧೪-೦

ಅರಳೆ

ಅರಳೀ ಪೇಟೆಯಲ್ಲಿಯೂ ಬೆಲೆಗಳು ಬಹಳೇನೂ ಹೆಚ್ಚುಕಡಿಮೆಯಾಗಿಲ್ಲ. ಸೆಪ್ಟೆಂಬರ ವಾಯದೆ ೫೫೮—೦—೦ ರ ವರೆಗೇರಿದು ತಿರುಗಿ ೫೬೮—೮—೦ ರಲ್ಲಿ ಕೊನೆಗಂಡಿತು.

ಎಣ್ಣೆ ಕಾಳು

ಶೇಂಗಾ ಹೊಸ ಮತ್ತು ಹಳೆ	೧೫೬-೪-೦
ಅಗಸಿ	೨೬—೦-೦
,, (ಹೊಸ)	೨೭—೯—೦
,, ಎಳ್ಳು	೧೬—೬—೦

ಶಿವಮೊಗ್ಗೆ ಅಡಿಕೆ

ತಾ. ೧೮

ದೇಶಾವರ ನಂ. ೧ ಮಣ ೧ ಕ್ಕೆ	೪೨-೪೪
,, ,, ೨	೪೦-೪೨
ರಾಜಾ ಅಲವು	೪೦-೪೪
ಕೊರೆಸಾಲು	೩೫-೪೦
ಬೆಟ್ಟೆ ವಂತಿ	೧೭-೨೦
ಬೆಟ್ಟೆ	೧೫-೧೭

ಬೇಡಿಕೆ ಇಲ್ಲ.

ಹುಬ್ಬಳ್ಳಿ

ಜಯವಂತ ಹತ್ತಿ	೧	೪೬೦-೧೪೦
ಅಪಲಂಡ ಹತ್ತಿ	೧	೪೭೫-೪೯೦
ಜಿನ		೩೮೦-೩೯೦
ಅ. ಡಬಲರೋಲ		೨೬೫-೨೮೦
ಸಾಜಿನ		೨೫೦.೨೬೦
ಜ. ಹತ್ತಿಕಾಳು		೭॥ ಪೌಂ.
ಅ. ಹತ್ತೀಕಾಳು		೭॥ ,,

ಮುಧೋಳದ ನಾಗರಿಕರು ತಾ.೬ಕ್ಕೆ ಮುಂಬಯಿಯ ಒಕ್ಕಲತನ ಮಂತ್ರಿ ಮಲ್ಲನಗೌಡರಿಗೆ ಮಾನಪತ್ರಕೊಡುತ್ತ, ವಿಲೀನೀಕರಣದ ನಂತರ ಮುಧೋಳದ ಆಡಳಿತವು ಅಸ್ತವ್ಯಸ್ತವಾಗಿದೆಯೆಂದೂ ತುಡುಗು ದರೋಡೆ ಹೆಚ್ಚುತ್ತಿವೆಯೆಂದೂ ಮುಧೋಳದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಬಗ್ಗೆ ಮುಂಬಯಿ ಸರಕಾರವು ನಿಶ್ಚಿತ ಧೋರಣ ತಳೆದಂತೆ ಕಾಣಲಿಲ್ಲವೆಂದೂ ದೂರಿ ಈ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಂಡರು.

ನಾಲ್ಕು ಮಾತು — ರಂಗನಾಥ ದಿವಾಕರ

೧ ಸ್ವಾತಂತ್ರ್ಯದ ಒಂದು ವರುಷ

ಮೂವತ್ತುಮೂರು ಕೋಟಿಯ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆತು ಒಂದು ವರುಷವಾಗಿ ಹೋಯಿತು. ಆದರೆ ಇನ್ನೂ ನಾವು ಸ್ವತಂತ್ರ ಹಿಂದುಸ್ಥಾನದ ಹೊಣೆಯನ್ನು ಅರಿತಂತೆ ಕಾಣುವದಿಲ್ಲ! ದೊರೆತ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಹೊಣೆ ಮೊದಲನೆಯದು. ಅದನ್ನು ಕೇವಲ ಶಸ್ತ್ರಾಸ್ತ್ರಗಳಿಂದ ದಕ್ಕಿಸಿಕೊಳ್ಳಬಹುದು, ರಕ್ಷಿಸಬಹುದು ಎಂದು ನಾವು ತಿಳಿದುಕೊಂಡಿದ್ದರೆ ಅದು ತಪ್ಪು. ಶಸ್ತ್ರಾಸ್ತ್ರಗಳೂ ಬೇಕಾಗಬಹುದು. ಆದರೆ ಶಸ್ತ್ರಾಸ್ತ್ರಗಳು ಸರ್ವಸ್ವವಲ್ಲ. ತಮ್ಮತಮ್ಮೊಳಗೆ ಹೊಡೆದಾಡಿ ಸತ್ತ ಯಾದವರ ಕೈಯಲ್ಲಿ ಶಸ್ತ್ರಾಸ್ತ್ರಗಳು ಕಡಿಮೆ ಇರಲಿಲ್ಲ. ಬ್ರಿಟಿಶರು ಬರುವ ಪೂರ್ವದಲ್ಲಿ ಇಲ್ಲಿ ಶಸ್ತ್ರಾಸ್ತ್ರಗಳು ಕಡಿಮೆ ಇದ್ದವೆಂತಲ್ಲ. ೧೮೫೭ ರ ಬಂಡಾಯದ ಕಾಲದಲ್ಲಿ ನಮ್ಮಲ್ಲಿ ಸಾಕಷ್ಟು ಶಸ್ತ್ರಾಸ್ತ್ರಗಳೂ ಇದ್ದವು. ಅವುಗಳನ್ನು ಉತ್ತಮ ರೀತಿಯಿಂದ ಉಪಯೋಗಿಸುವವರೂ ಇದ್ದರು. ಪಾಣೀಪತ್ತಿನ ಯುದ್ಧದಲ್ಲಿಯೂ ಶಸ್ತ್ರಾಸ್ತ್ರಗಳು ಕಡಿಮೆ ಇರಲಿಲ್ಲ ತಾಳೀಕೋಟೆಯ ಕಾಳಗದಕಾಲಕ್ಕೂ ನಮಗೆ ಶಸ್ತ್ರಾಸ್ತ್ರಗಳು ಕಡಿಮೆ ಬೀಳಲಿಲ್ಲ.

× × ×

ಶಸ್ತ್ರಾಸ್ತ್ರಗಳಲ್ಲದೆ ಹಲವೊಂದು ಮಾತುಗಳ ಅವಶ್ಯಕತೆ ಇದೆ ಎಂಬುದು ಸಿದ್ಧ. ಗಾಂಧೀಜಿಯವರ ನೇತೃತ್ವದಲ್ಲಿ ಬ್ರಿಟಿಶರೊಡನೆ ಹೊಡೆದಾಡುವಾಗ ನಮ್ಮಲ್ಲಿ ಶಸ್ತ್ರಾಸ್ತ್ರಗಳಿರಲಿಲ್ಲ. ಆದರೂ ನಾವು ಚನ್ನಾಗಿ ಹೊಡೆದಾಡಿದೆವು. ಯಶಸ್ವಿ ರೀತಿಯಿಂದ ಹೋರಾಡಿದೆವು. ರಾಷ್ಟ್ರಧರ್ಮದ ಪಾಲನವು ಎಲ್ಲಕ್ಕೂ ಮುಖ್ಯ ಹಾಗೂ ಅತ್ಯಂತ ಮಹತ್ವದ ಶಸ್ತ್ರವು. ಈ ಶಸ್ತ್ರವು ನಮ್ಮ ಬಳಿ ಇಲ್ಲದಿದ್ದರೆ ಉಳಿದ ಶಸ್ತ್ರಾಸ್ತ್ರಗಳು ನಿರರ್ಥಕ ಎಂದು ಹೇಳಬಹುದು. ಈ ಧರ್ಮದ ಅರಿವು, ಇದರಂತೆ ನಡೆಯುವ ಸಂಕಲ್ಪ, ಇದರಂತೆ ನಡೆಯುವಷ್ಟು ರಾಷ್ಟ್ರನಿಷ್ಠೆ ಈ ಮೂರು ಮಾತುಗಳು ನಮ್ಮಲ್ಲಿದ್ದರೆ ಉಳಿದ ಎಲ್ಲ ಸಾಧನ ಸಂಪತ್ತು ನಮ್ಮ ಬಳಿಗೆ ನಡೆದು ಬರಬಲ್ಲದು. ಇವೇ ಇಲ್ಲದಿದ್ದರೆ, ಇದ್ದ ಸಂಪತ್ತು ಹೊರಟುಹೋಗಿಬಿಡುವದು. ಇದೇ ರಾಷ್ಟ್ರದ ಸ್ವಾತಂತ್ರ್ಯದ ತಳಹದಿ.

× × ×

ಇವು ನಮ್ಮ ಅಂತರ್ಯದಲ್ಲಿ ಇರತಕ್ಕ ಮಾತುಗಳು. ಅಲ್ಲಿಯೆ ಇವುಗಳ ಬೆಳವಣಿಗೆ. ಹೊರಗಿನ ಆಧಾರಗಳ ಅವಶ್ಯಕತೆ ಇವುಗಳಿಗಿಲ್ಲ. ಈ ಧರ್ಮವನ್ನು ಹಿಂದುಸ್ಥಾನದಲ್ಲಿ ಹಲವರಾದರೂ ಆಚರಿಸಿದರು. ಹಾಗೂ ಈಗಲೂ ಆಚರಿಸುತ್ತಿರುವರು. ಆದುದರಿಂದ ಹಿಂದುಸ್ಥಾನವು ಸ್ವತಂತ್ರವಾಯಿತು, ಈ ಸ್ವತಂತ್ರವಿದೆ. ಆದರೆ ಅದು ಸ್ವತಂತ್ರ ಉಳಿಯಬೇಕಾದರೆ ಇನ್ನೂ ಬಹುಜನರು ರಾಷ್ಟ್ರಧರ್ಮದಿಂದ ಪ್ರೇರಿತರಾಗಲಿಕ್ಕೆ ಬೇಕು. ರಾಷ್ಟ್ರಧರ್ಮಿಗಳ ಸಂಖ್ಯೆ ಬೆಳೆಯುತ್ತ ಹೋಗಲಿಕ್ಕೆಬೇಕು. ನಮ್ಮನಮ್ಮ ಇತರ ಧರ್ಮಗಳು, ನಿಷ್ಠೆಗಳು, ಇದ್ದೇ ಇರುವವು. ಆದರೆ ಅವೆಲ್ಲವುಗಳ ಬಾಳು ಸಹ ರಾಷ್ಟ್ರಧರ್ಮದ ಆಚರಣೆಯ ಮೂಲಕ ಆಗಬಲ್ಲ ರಾಷ್ಟ್ರದ ಸಂರಕ್ಷಣೆಯ ಮೇಲೆಯೆ ಅವಲಂಬಿಸಿದೆ. ರಾಷ್ಟ್ರಧರ್ಮವನ್ನು ಬಿಟ್ಟು ತಮ್ಮ ಧರ್ಮವನ್ನು ಸಂರಕ್ಷಿಸಲು ಯತ್ನಿಸುವುದೆಂದರೆ ಮರ ಕಡಿದು ಟೊಂಗೆಯೊಂದನ್ನು ಸಂರಕ್ಷಿಸಲು ಯತ್ನಿಸಿದಂತೆ. ನಮ್ಮ ಎಲ್ಲ ವ್ಯವಹಾರಾದಿಗಳಲ್ಲಿಯೂ ರಾಷ್ಟ್ರದ ಸಂರಕ್ಷಣ, ರಾಷ್ಟ್ರಧರ್ಮದ ಪಾಲನ ಇವುಗಳನ್ನೆ ಮುಖ್ಯವಾಗಿಟ್ಟು ನಡೆಯುವದು ನಮ್ಮ ಆದ್ಯ ಕರ್ತವ್ಯವಾಗಿರುವದು.

೨ ನಾನು ಹೊರಟಿದ್ದೆಲ್ಲಿ?

೪. ೯. ೪೮ನೇ ದಿನ ನಾನು ನನ್ನ ಮಿತ್ರರಾದ ಡಾ. ಕೇಸಕರರೊಡನೆ ರೋಮಕ್ಕೆ ಹೋಗಬೇಕೆಂದು ಆಕಸ್ಮಾತ್ತಾಗಿ ಗೊತ್ತಾಗಿಬಿಟ್ಟಿತು. ಪರದೇಶಗಳಿಗೆ ಹೋಗಿಬರಬೇಕೆಂಬ ಸಂಕಲ್ಪವನ್ನು ಮಾಡಿ ಬಹಳ ದಿನಗಳಾಗಿದ್ದರೂ ಇನ್ನೂ ಒಂದು ವರುಷವಾದರೂ ಹೋಗುವದು ಸಾಧ್ಯವಿಲ್ಲ ಎಂದು ಮನಸಿನಲ್ಲಿ ಮಾಡಿಕೊಂಡಿದ್ದೆನು. ಆದರೆ ಈಗ ಹೋಗುವ ಪ್ರಸಂಗವು ಬಂದೇಬಿಟ್ಟಿತು. ಮೂರೇ ವಾರ ಹೋಗಿ ಬರತಕ್ಕದ್ದಿದೆ ಎಂಬುದೇ ಒಂದು ಸಮಾಧಾನ. ೪ ನೇ ತಾರೀಖಿಗೆ ಇಲ್ಲಿಂದ ಹೊರಟು ೨೭ ಕ್ಕೆ ಅಲ್ಲಿಂದ ಹೊರಡುವದು ನಿಶ್ಚಯಕ್ಕೆ ಗೊತ್ತಾಗಿದೆ. ಇನ್ನು ಮುಂದೆ ನೋಡಬೇಕು.

× × ×

ರೋಮದಿಂದ ಮುಂದೆ ಇಟಾಲಿಯ ಹಲವು ಔದ್ಯೋಗಿಕ ಕೇಂದ್ರಗಳನ್ನು ನೋಡತಕ್ಕದ್ದಿದೆ. ಅಲ್ಲಿಂದ ಜಿನೋವಾ (ಇಟಾಲಿ) ಎಂಬಲ್ಲಿ ಎರಡು ದಿನ (೧೬-೧೭ ತಾರೀಖು) ಇಟಲಿಯ ಔದ್ಯೋಗಿಕ ಪರಿಷತ್ತಿಗೆ ಹೋಗುವದಿದೆ. ಅಲ್ಲಿಂದ ಪ್ಯಾರಿಸಿಗೆ (೧೮ ಕ್ಕೆ) ನಾಲ್ಕು ದಿನ ಹೋಗಿ ಜಿನೀವಾ (ಸ್ವಿಝರ್ಲಂಡ)ಕ್ಕೆ ಸುಮಾರು ೨೪ ಕ್ಕೆ ಬರಬಹುದು. ಅಲ್ಲಿ ವಿಕೇಂದ್ರೀಕೃತ ಉದ್ಯೋಗಗಳ ಅಭ್ಯಾಸಮಾಡುವದು ನಿಶ್ಚಯವಾಗಿದೆ. ಅಲ್ಲಿಂದ ೨೭ಕ್ಕೆ ಹೊರಟು ಮರಳಿ ಹಿಂದುಸ್ಥಾನಕ್ಕೆ ಬರುವದಿದೆ.

× × ×

ಆದರೆ ಅಲ್ಲಿಯ ಮುಖ್ಯ ಕೆಲಸವೆಂದರೆ ರೋಮದಲ್ಲಿ ನಡೆಯುವ ಅಂತರರಾಷ್ಟ್ರೀಯ ಪಾರ್ಲಮೆಂಟರಿ ಯೂನಿಯನ್ನಿನ ಸಮ್ಮೇಲನದಲ್ಲಿ ಹಿಂದುಸ್ಥಾನದ ಪರವಾಗಿ ಭಾಗವಹಿಸುವದು. ಈ ಸಂಸ್ಥೆ ಅರವತ್ತು ವರುಷದಷ್ಟು ಹಳೆಯದು. ಈಗ ಈ ಸಮ್ಮೇಲನದಲ್ಲಿ ೪೦ ರಾಷ್ಟ್ರಗಳು ಭಾಗವಹಿಸಬಹುದು ಎಂದು ಊಹಿಸಲಾಗಿದೆ. ಪಾರ್ಲಮೆಂಟ ಅಂದರೆ ಪ್ರಜಾಪ್ರಭುತ್ವದ ತತ್ವದ ಮೇಲೆ ರಚಿಸಲಾದ ಶಾಸನ ಸಭೆಗಳಿದ್ದ ರಾಷ್ಟ್ರಗಳಲ್ಲಿ ಬಹುಶಃ ಎಲ್ಲವುಗಳೂ ಇವರಲ್ಲಿ ಭಾಗವಹಿಸುವವು. ಪಾರ್ಲಮೆಂಟುಗಳ ಮುಖಾಂತರ ಸಾಧಿಸಬಹುದಾದ ಅನೇಕಾನೇಕ ಜಾಗತಿಕ ಪ್ರಶ್ನೆಗಳ ಬಗ್ಗೆ ಹಾಗೂ ಪಾರ್ಲಿಮೆಂಟುಗಳ ಪದ್ಧತಿಯ ಸುಧಾರಣೆಯ ಯೋಜನೆಗಳ ಬಗ್ಗೆ ಈ ಪರಿಷತ್ತಿನಲ್ಲಿ ಚರ್ಚೆ ನಡೆಯುವದು. ಈ ಸಾರೆ ಅಲ್ಲಿ ಚರ್ಚೆಗೆ ಬರತಕ್ಕ ಎಲ್ಲಕ್ಕೂ ಮಹತ್ವದ ಪ್ರಶ್ನೆ ಯಾವುದೆಂದರೆ ಅಂತರ ರಾಷ್ಟ್ರೀಯ ನೀತಿ (ಇಂಟರನ್ಯಾಶನಲ್ ಮೊರಾಲಿಟಿ) ಸ್ವತಂತ್ರ ಶಾಸನಸಭೆ ಇದ್ದ ರಾಷ್ಟ್ರ ಎಂಬ ದೃಷ್ಟಿಯಿಂದ ನಾವು ಹಿಂದುಸ್ಥಾನದವರು ತೀರ ಹೊಸಬರು. ಆದರೆ ಆ ಯೂನಿಯನ್ನಿನವರಿಂದ ಕರೆ ಬಂದುದರಿಂದ ನಮ್ಮ ಪಾರ್ಲಮೆಂಟಿನವರು ನಮ್ಮಿಬ್ಬರನ್ನು ಕಳಿಸುತ್ತಿರುವರು. ಈ ಸಾರೆ ನಾವು 'ನಿರೀಕ್ಷಕರು' ಎಂದು ಹೋಗುತ್ತಿದ್ದರೂ ಅಲ್ಲಿ ಪರಿಷತ್ತಿನಲ್ಲಿ ಎಲ್ಲ ಪ್ರತಿನಿಧಿಗಳಂತೆ ಭಾಗವಹಿಸಲು ಆಸ್ಪದವಿರುವದು. ನಮ್ಮಲ್ಲಿಯೂ ಒಂದು "ಪಾರ್ಲಿಮೆಂಟರಿ ಗ್ರುಪ್" ಎಂಬುದನ್ನು ಸ್ಥಾಪಿಸಿದರೆ ಮುಂದಿನ ವರುಷದಿಂದ ಪ್ರತಿನಿಧಿಗಳೆಂದು ಇಲ್ಲಿಯ ಪಾರ್ಲಮೆಂಟಿನವರು ಕಳಿಸಲು ಆಸ್ಪದವಾಗುವದು.

೩ ಮಾತೃಭಾಷೆ, ಪ್ರಾಂತ ಭಾಷೆ, ರಾಷ್ಟ್ರಭಾಷೆ

ಶಿಕ್ಷಣದ ಮಾಧ್ಯಮವು ಯಾವುದಿರಬೇಕು ಎಂಬ ಬಗ್ಗೆ ವಿಚಾರಿಸಲು ಕೇಂದ್ರ ಶಿಕ್ಷಣ ಮಂತ್ರಿಗಳು ಒಂದು ಮಂಡಲವನ್ನು ಏರ್ಪಡಿಸಿದ್ದರು. ಆ ಮಂಡಲವು ಪ್ರಾಥಮಿಕ ಶಿಕ್ಷಣದ ಮಟ್ಟಿಗೆ ಮಾಧ್ಯಮವು ಮಾತೃಭಾಷೆಯಿರಬೇಕು ಎಂದು ವರದಿ ಮಾಡಿದೆ. ಅದು ಸರಕಾರದ ಪರವಾಗಿ ಪ್ರಕಟವಾಗಿದೆ. ಈ ಮಾಧ್ಯಮದ ಪ್ರಶ್ನೆ ಹಾಗು ಭಾಷೆಯ ಪ್ರಶ್ನೆ ಬಹಳ ಸುಲಭವಿದೆ ಎಂದು ಹಲವರು ತಿಳಿಯುವರು. ಆದರೆ ಅದು ತಪ್ಪು. ನಮ್ಮ ದೇಶದಲ್ಲಿ ಅನೇಕ ವಿವಿಧ ಭಾಷೆಗಳು ಪ್ರಚಲಿತವಿರುವದರಿಂದ ಈ ಪ್ರಶ್ನೆ ಬಹಳ ಮಹತ್ವದ್ದಿರುವದಲ್ಲದೆ ಸ್ವಲ್ಪ ತೊಡಕಿನದೂ ಆಗಿದೆ. ಆದರೆ ಅದನ್ನು ಅತ್ಯಂತ ಸಮಾಧಾನಕಾರಕ ರೀತಿಯಿಂದ ಬಿಡಿಸುವದು ಸಾಧ್ಯವೂ ಇದೆ, ಆವಶ್ಯಕವೂ ಇದೆ. ಇದ್ದ ಪರಿಸ್ಥಿತಿ, ವ್ಯಾವಹಾರಿಕ ದೃಷ್ಟಿ ಹಾಗೂ ನಮ್ಮ ರಾಷ್ಟ್ರವು ಏಕವೂ ಬಲಿಷ್ಠವೂ ಇರಬೇಕು ಹಾಗೂ ಆಗಬೇಕು ಎಂಬ ದೃಢ ಸಂಕಲ್ಪ ಇವುಗಳನ್ನು ಅನುಲಕ್ಷಿಸಿ ನಾವು ನಮ್ಮ ಧೋರಣೆಯನ್ನು ನಿಶ್ಚಯಿಸಬೇಕು.

× × ×

ಮಾತೃಭಾಷೆಯೆಂದರೆ ತಾಯಿಯ ಮೊಲೆಹಾಲಿನೊಡನೆ ಮಗುವು ಕಲಿತ ಭಾಷೆ. ಅಂಥ ಭಾಷೆಗಳು ಹಿಂದುಸ್ಥಾನದಲ್ಲಿ ೨೫೦ ಇವೆಯಂತೆ. ಆದರೆ ಈ ಎಲ್ಲ ಭಾಷೆಗಳಿಗೂ ಲಿಪಿ ಇಲ್ಲ. ಲಿಪಿ ಇದ್ದ ಭಾಷೆಗಳು ೧೨ ಮಾತ್ರ. ಅವು ಪ್ರಾಂತ ಭಾಷೆಗಳು ಇಲ್ಲವೆ ಪ್ರಾದೇಶಿಕ ಭಾಷೆಗಳು ಎನಿಸಬಲ್ಲವು. ಆ ಮೇಲೆ ಇವೀ ಹಿಂದುಸ್ಥಾನಕ್ಕೆ ... ಭಾಷೆ ಅದು ಒಂದೇ ... ಬಗೆಯ ಭಾಷೆಗಳ ... ಇರಬೇಕು, ಶಿಕ್ಷಣ ದೃಷ್ಟಿಯಿಂದ ... ಉಪಯೋಗಿಸಬೇಕು ... ತೀರಬೇಕಾಗುವದು.

× × ×

ಭಾಷೆಗಳ ... ಇಷ್ಟು ... ಅವುಗಳಲ್ಲಿ ೧೨ ... ವಿರುವದೆಂಬುದು ... ಮೇಲಾಗಿ ಇವಾವೂ ... ಭಾಷೆಗಳಲ್ಲ. ಎಲ್ಲವೂ ಹಿಂದುಸ್ಥಾನದಲ್ಲಿಯೇ ಹುಟ್ಟಿ ಬೆಳೆದವುಗಳು. ಆದುದರಿಂದ ಅವುಗಳ ಮೂಲವು ಒಂದೇ ಇದ್ದರೂ ಅವುಗಳ ... ಅಥವಾ ... ಭಾಷೆಯು ಸಂಸ್ಕೃತವೇ ಆಗಿದೆ. ಈ ಮೂಲದ ಇವೆಲ್ಲವುಗಳ ... ಎಷ್ಟೇ ಅದರೂ ಅವು ... ರಚಿತವೆನಿಸಲಾರವು.

× × ×

ಲಿಪಿಯ ದೃಷ್ಟಿಯಿಂದ ಕೂಡ ಇಡೀ ಹಿಂದುಸ್ಥಾನದಲ್ಲಿ ಒಂದೇ ಲಿಪಿಯನ್ನು ಪ್ರಚಾರಕ್ಕೆ ತರುವದು ಅಸಾಧ್ಯವಾಗಲಾರದು. ಪ್ರತಿಯೊಂದು ಭಾಷೆಯು ಶಬ್ದಕೋಶವನ್ನು ಅದಷ್ಟು ಸಂಸ್ಕೃತಕ್ಕೆ ಹೊಂದಿಸಲು ಯತ್ನಿಸಿ, ಒಂದೇ ಲಿಪಿಯನ್ನು ಪ್ರಚಾರಕ್ಕೆ ತಂದರೆ ಹಾಗೂ ಒಂದೇ ರಾಷ್ಟ್ರಭಾಷೆಯ ಪ್ರಚಾರ ಮಾಡಿದರೆ ಭಾಷೆಗಳ ಸಮಸ್ಯೆಯನ್ನು ನಾವು ಬಹುಮಟ್ಟಿಗೆ ಬಿಡಿಸಲು ಯತ್ನಿಸಿದಂತೆ ಆಗಬಲ್ಲದು. ಆದರೆ ಇವೆಲ್ಲ ಮಾತುಗಳು ಸಹಜವಾಗಿ ಒಮ್ಮೆಲೆ ಆಗಲಾರವು. ಆಯಾ ಭಾಷೆಯನ್ನಾಡುವವರು ಈ ಮಾತುಗಳ ಮಹತ್ವವನ್ನರಿತು ಇಡೀ ರಾಷ್ಟ್ರದ ದೃಷ್ಟಿಯಿಂದ ಯಾವುದನ್ನು ಮಾಡುವದು ಅವಶ್ಯ ಎಂದೆಣಿಸುವರೋ ಅದನ್ನು ಮಾಡಲು ಒಪ್ಪಿದರೆ ಮಾತ್ರ ಇದೆಲ್ಲ ಸುಲಭಸಾಧ್ಯ. ಇಲ್ಲದೆ ಹೋದರೆ ಇದಕ್ಕೆ ಬಹಳ ಕಾಲಾವಧಿಯಾಗುವದು. ತಮಿಳುನಾಡಿನಲ್ಲಿ ನಡೆದಂತೆ ಹಿಂದಿಗೆ ವಿರೋಧ ನಡೆದರೆ ನಮ್ಮ ಹೆಜ್ಜೆ ಮುಂದೆ ಬೀಳಲು ತೊಂದರೆಯಾಗುವದು. ಈ ವಿಷಯದಲ್ಲಿ ಕೆಲಸ ಮಾಡುವವರೆಲ್ಲರೂ ಬಹಳ ಜಾಗರೂಕತೆಯಿಂದಲೂ ಸಮಾಧಾನದಿಂದಲೂ ಸಮಂಜಸತನದಿಂದಲೂ ನಡೆಯುವದು, ಅವಶ್ಯವಿರುವದು. ಆದರೆ ರಾಷ್ಟ್ರೀಯ ದೃಷ್ಟಿಯಿಂದ ಅವಶ್ಯವಿದ್ದುದನ್ನು ನಿಶ್ಚಯದಿಂದ ಮಾಡಲು ಹಿಂಜರಿದರೆ ಬಹಳ ದೊಡ್ಡ ತಪ್ಪು ಮಾಡಿದಂತಾಗುವದು.

ದೇಶಭಾಷೆಗಳಲ್ಲಿ ತಂತಿ ಕಳಿಸುವ ಏರ್ಪಾಡು

ಕಲಕತ್ತೆಯ ಪ್ರಾಧ್ಯಾಪಕರ ಶೋಧ

ಕಲಕತ್ತೆಯ ಕಾಲೇಜಿನ ಓರ್ವ ಪ್ರಾಧ್ಯಾಪಕರು ಆರ್ಯ-ದ್ರವಿಡ ಭಾಷೆಗಳಲ್ಲಿ ಅಂಗ್ಲ ಭಾಷೆಯಂತೆಯೇ ತಂತಿಗಳನ್ನು ಕಳಿಸಲು ಬರುವಂತೆ ಹೊಸ ಪದ್ಧತಿಯನ್ನು ಕಂಡು ಹಿಡಿದಿದ್ದಾರೆಂದು ತಿಳಿದುಬರುತ್ತದೆ. ಈ ಹೊಸ ಪದ್ಧತಿಯು ಮೂರು ಸಂಕೇತಗಳನ್ನೊಳಗೊಂಡಿದ್ದು ಕಲಿಯಲು ಸುಲಭವಿದೆಂದು ಹೇಳಲಾಗುತ್ತಿದೆ.

ಪ್ರಾಧ್ಯಾಪಕರು ಈ ಸಂಬಂಧವಾಗಿ ... ಸದ್ಯದ ತಂತಿಕಳಿಸುವ ಪದ್ಧತಿಯಲ್ಲಿ ಯಾವದೇ ತೊಡಕಾಗದಂತೆ ದೇಶ ಭಾಷೆಗಳ ವರ್ಣಗಳಲ್ಲಿ ದೀರ್ಘಸ್ವರ ಸಹಿತ ತಂತಿಗಳನ್ನು ಕಳಿಸಲು ಬರುವಂತಿರುವದೇ ಈ ಪದ್ಧತಿಯ ಮಹತ್ವದ ಅಂಶವಾಗಿದೆ. ಸುದ್ದಿ ಸಂಸ್ಥೆಗಳು ದೇಶ ಭಾಷೆಗಳ ಮೂಲಕ ಟೆಲಿ ಪ್ರಿಂಟರುಗಳಲ್ಲಿ ಸುದ್ದಿಗಳನ್ನು ಕಳಿಸಬಹುದು. ಅದರಿಂದ ಸದ್ಯ ... ಪದ್ಧತಿಗೆ ಅಡೆತಡೆಯಾಗುವದಿಲ್ಲವೆಂದೂ ಹೇಳಿದರು.

ಸರ್ಪದ ದೆಸೆಯಿಂದ ೩೪ ಮರಣ!

ಕಳೆದ ವಾರ ತ್ರಿಚಿನಾಪಳ್ಳಿಯ ಬಳಿ ಕಾವೇರಿ ನದಿಗೆ ... ಒಂದು ದೋಣಿಯಲ್ಲಿ ... ೬೦ ಜನರಲ್ಲಿ ೩೪ ಜನರು ಜಲಸಮಾಧಿಯನ್ನು ಹೊಂದಿದರು. ಪ್ರವಾಹದಲ್ಲಿ ... ಹೋಗುತ್ತಿದ್ದ ಸರ್ಪವೊಂದು ದೋಣಿಯನ್ನು ಕಂಡು ... ಜನರ ಮೇಲೆ ... ದೋಣಿಯು ... ಭಾಗ ... ಮುಗುಚಿ ... ಬಂದಿದೆ ...

ಮುಂಬಯಿಯಲ್ಲಿ ಸ್ವಾತಂತ್ರ್ಯೋತ್ಸವ



ವಾರದ ಸಿಂಹಾವಲೋಕನ

ಕಾಶ್ಮೀರ ಸಮಿತಿಯ ಸೂಚನೆ

ಜಾತೀಯ ಸಂಸ್ಥೆ

ಜಾತೀಯ ಪ್ರಾತಿನಿಧ್ಯಕ್ಕೆ ಪ್ರತಿಯಾಗಿ

"...ಹಳ್ಳಿ ಜನಗಳಲ್ಲಿದ್ದ ಸೌಲಭ್ಯಮೂಲಕವಾಗಿ ಹಳ್ಳಿ ಜನರು, ಹಳ್ಳಿಗರನ್ನು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದೆ ಹಾಕುತ್ತಾರೆ. ಇದರಂತೆ ಬ್ರಾಹ್ಮಣರು ಬ್ರಾಹ್ಮಣೇತರರನ್ನು ಹಿಂದೆ ಹಾಕುವರು. ಯಾಕಂದರೆ, ಸಹಸ್ರಾರು ವರ್ಷಗಳಿಂದ ನಡೆದು ಬಂದ ಧಾರ್ಮಿಕ ವರ್ಗೀಕರಣವು ಜ್ಞಾನಬಲವನ್ನೂ ರಾಜ್ಯಭಾರದ ರಹಸ್ಯವನ್ನೂ ಈ ಅಲ್ಪಸಂಖ್ಯಾಕರಿಗೇ ಕೊಡುತ್ತ ಬಂದಿತು. ಬ್ರಾಹ್ಮಣರಿಗೆ ವಂಶಪರಂಪರಾಗತವಾಗಿಯೇ ಇಮು ಇಳಿದು ಬಂದು ಈ ಆನುವಂಶಿಕ ಗುಣವನ್ನು ಅವರು ಬೆಳೆಸಿಕೊಳ್ಳುತ್ತಲೇ ಹೋದರು. ಆದರೆ ಬ್ರಾಹ್ಮಣೇತರರು ಇದರಿಂದ ವಂಚಿತರಾದರು. ಶಿಕ್ಷಣ ರಂಗದಲ್ಲಿಯೂ ರಾಜ್ಯನಿರ್ವಹಣದಲ್ಲಿಯೂ ಪ್ರತ್ಯೇಕ ಸೌಕರ್ಯ ಕೊಟ್ಟಿಲ್ಲದೆ ಹಿಂದುಳಿದವರು ಉಚ್ಚವರ್ಣದವರ ಸರಿಸಮಾನ ಪದಕ್ಕೆ ಬರಲಾರರು. ಸ್ಪರ್ಧಾ ಮೂಲಕ ಆಯ್ಕೆಮಾಡಿದರೆ ಹಿಂದುಳಿದ ವರ್ಗಕ್ಕೆ ಅಸ್ಪದವೇ ದೊರಕದಾಗುವದು. ಜಾತೀಯತೆಯನ್ನು ವಿರೋಧಿಸುವ, ಪ್ರಮಾಣಬದ್ಧ ಪ್ರಾತಿನಿಧ್ಯದ, ಪ್ರಾಂತೀಯತೆಯ ಮತ್ತು ಯೋಗ್ಯತಾನುಗುಣ ಅಧಿಕಾರದಾನದ ವಾದಗಳೆಲ್ಲ ಸ್ವಹಿತ ಸಾಧಕ ವರ್ಗದ ಅರ್ಥಾತ್ ಬ್ರಾಹ್ಮಣರ ಕೂಗೇ ಸರಿ.

"ಬ್ರಾಹ್ಮಣರಿಗೆ ಅನ್ವಯಿಸಿದ್ದೇ ಸವರ್ಣ ಹಿಂದುಗಳಿಗೆ, ಹರಿಜನರಿಗೆ, ಬಂಗಾಲಿಗಳಿಗೆ ಬಿಹಾರಿಗಳಿಗೆ, ಆಸಾಮಿಗಳಿಗೆ, ಎಲ್ಲರಿಗೂ ಅನ್ವಯಿಸುವದು. ಜಾತ್ಯತೀತವಾದ ಮತ್ತು ವರ್ಗರಹಿತವಾದ ಸಮಾಜವನ್ನು ನಿರ್ಮಿಸಲೆಂದೇ ಕೆಲಕಾಲದವರೆಗಾದರೂ ಒಂದು ವಿಧವಾದ ಜಾತೀಯ ಹಾಗೂ ಪ್ರಾಂತೀಯ ಸಂಕುಚಿತ ತತ್ವಗಳನ್ನು ಅವಲಂಬಿಸುವದು ಅವಶ್ಯವೆಂದು ತೋರುತ್ತದೆ. ಹಿಂದುಳಿದವರ ಪ್ರೋತ್ಸಾಹಕ್ಕಾಗಿ ನೀವು ಜಾತೀಯ ಪ್ರಾತಿನಿಧ್ಯಕ್ಕೆ ಪ್ರತ್ಯುಪಾಯವೇನನ್ನಾದರೂ ಸೂಚಿಸಬಹುದೆ?"

ಮೇಲಿನದು ಒಬ್ಬರ ಪತ್ರದ ಸಾರಾಂಶವಾಗಿದೆ. ಅವರು ಕೇಳಿದ ಪ್ರಶ್ನೆಯಲ್ಲಿ ಹುರುಳುಂಟು. ಶಿಕ್ಷಣ, ನೌಕರಿ ಮೊದಲಾದ ಎಲ್ಲ ಸಂದರ್ಭಗಳಿಗೂ ನನ್ನ ಸೂಚನೆಗಳು ಹೀಗಿವೆ–

(೧) ಹರಿಜನರು, ಆ್ಯಂಗ್ಲೋ ಇಂಡಿಯನ್ನರು ಮೊದಲಾದವರಿಗೆ ಬರುವ ಕೆಲವರ್ಷಗಳವರೆಗಾದರೂ ಶಾಸನಬದ್ಧವಾಗಿ ಕಾಯ್ದಿರಿಸಿದ ಸ್ಥಳ ಪ್ರಮಾಣಗಳನ್ನುಳಿದು ಇನ್ನೆಲ್ಲ ಸಂದರ್ಭಗಳಲ್ಲಿಯೂ ಉಮೇದವಾರರ ವರ್ಣ, ಜಾತಿ, ಧರ್ಮ, ಪ್ರಾಂತ ಇವಾವಕ್ಕೂ ಬೆಲೆಕೊಡತಕ್ಕದ್ದಲ್ಲ.

(೨) ಹಿಂದುಳಿದವರನ್ನು ಮುಂದರಿದವರ ಸರಿಸಮಾನತೆಗೆ ತರಲು ಆರ್ಥಿಕ ತಳಹದಿಯ ಮೇಲೆ ಜನರನ್ನು ಹೀಗೆ ಕೆಳಗೆ ಕಾಣಿಸಿದಂತೆ ವರ್ಗೀಕರಿಸಬಹುದುದು–

ಕ– ವರ್ಷಕ್ಕೆ ೩೦೦ ರೂ. ಅಥವಾ ಕಡಿಮೆ ಉತ್ಪನ್ನವಿರುವವರು.

ಖ– ವರ್ಷಕ್ಕೆ ೩೦೦. ರೂ ೧೦೦೦ ರೂ. ಗಳ ನಡುವೆ ಉತ್ಪನ್ನವಿರುವವರು.

ಗ– ವರ್ಷಕ್ಕೆ ೧೦೦೦ ರೂ. ೫೦೦೦ ರೂ. ಗಳ ನಡುವೆ ಉತ್ಪನ್ನವಿರುವವರು.

ಘ– ವರ್ಷಕ್ಕೆ ೫೦೦೦ ರೂ. ಮಿಕ್ಕಿ ಉತ್ಪನ್ನವಿರುವವರು. ಕ, ಖ, ವರ್ಗದವರಿಗೆ ಮತ್ತು ಅವಶ್ಯವೆನಿಸಿದರೆ ಗ ವರ್ಗದವರಿಗೂ ಯೋಗ್ಯವಾದ ಮತ್ತು ಸಾಕಷ್ಟು ಸ್ಥಳಗಳನ್ನು ಪ್ರತ್ಯೇಕವಾಗಿ ಕಾಯ್ದಿರಿಸಬಹುದಲ್ಲದೆ ಉಚಿತಶಿಕ್ಷಣ, ಅರ್ಧಉಚಿತ ಶಿಕ್ಷಣ, ಶಿಷ್ಯವೃತ್ತಿ ಮೊದಲಾದವನ್ನು ಒದಗಿಸಬಹುದು. ಈ ವರ್ಗಗಳಲ್ಲಿ ಈಗಿನ ಹಿಂದುಳಿದವರ ಬಹು ಭಾಗವೇ ಬಂದು ಹೋಗುವದು. ಈ ಪ್ರತ್ಯೇಕ ಸ್ಥಳಗಳ ಮತ್ತು ಧನಸಹಾಯದ ಜೊತೆಗೆ ಶಿಷ್ಯವೃತ್ತಿಗಳೂ ಪಾರಿತೋಷಕಗಳೂ ಸರ್ವರಿಗೂ ದೊರೆವಂತಿರಬೇಕು.

(೪) ನೌಕರಿಮೊದಲಾದವುಗಳಬಗ್ಗೆ ಶ್ರೀ ರಂ. ರಾ. ದಿವಾಕರರು ಒಂದು ವಿಧಾನವನ್ನು ಸೂಚಿಸಿದ್ದು ಅದು ಗಮನಾರ್ಹವಾಗಿದೆ. ನೂರಕ್ಕೆ ೫೦ ರಿಂದ ೬೦ ರಷ್ಟು ನೌಕರಿಯ ಸ್ಥಳಗಳನ್ನು ಯೋಗ್ಯತಾನುಸಾರವಾಗಿ ಮೇಲ್ಪಟ್ಟವ ಜನಕ್ಕೆ ಕೊಡಬೇಕೆಂದೂ ಉಳಿದವುಗಳನ್ನು ಕೆಳಮಟ್ಟದವರಿಂದ ಅಂದರೆ ೨ನೇ ವರ್ಗ ಮತ್ತು ಉತ್ತೀರ್ಣವರ್ಗದವರಿಂದ ತುಂಬಬೇಕಲ್ಲದೆ ಅವನ್ನೂ ಕೆಳಗಿನಿಂದ ಮೊದಲು ಮಾಡಿ ಮೇಲ್ತರಗತಿಯತ್ತ ಸಾಗಬೇಕೆಂದೂ ಶ್ರೀಯುತರು ಸೂಚಿಸುತ್ತಾರೆ. ಪರೀಕ್ಷೆಗಳಲ್ಲಿ ಉಚ್ಚವರ್ಗದಲ್ಲಿ ಉತ್ತೀರ್ಣವಾದಾಕ್ಷಣಕ್ಕೆ ಕಾರ್ಯಕ್ಷಮತೆಯಾಗಲಿ ಪ್ರತಿಭೆಯಾಗಲಿ ಇದ್ದೇ ತೀರುವದೆಂದೇನು ಹೇಳಲುಬಾರದು; ಮತ್ತೂ ಇದರಿಂದ ವ್ಯಕ್ತಿಯ ಶೀಲಚರಿತ್ರಗಳೊಂದೂ ತಿಳಿದು ಬಾರವು. ತದ್ವಿರುದ್ಧವಾಗಿ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆಯದವರು, ಅಸಮರ್ಥರೂ ಅಪ್ರತಿಭರೂ ಅಲ್ಪಮತಿಗಳೂ ಆಗಿರಬೇಕಾಗಿಲ್ಲ. ಪರೀಕ್ಷೆಗಳಲ್ಲಿ ಹಾಗೂ ಹೀಗೂ ಪಾರಾದವರಲ್ಲಿ ಅನೇಕರು ಪಂಡಿತರಾದದ್ದುಂಟು, ಮುತ್ಸದ್ದಿಗಳಾದ್ದುಂಟು. ರಾಜ್ಯಭಾರ ಧುರಂಧರರೂ ಆದದ್ದುಂಟು.

ಅಸಮಾನ ಧನವಿತರಣೆ ಸಮಾಜದಲ್ಲಿ ಇರುವ ವರೆಗೆ, ವಿಶಿಷ್ಟ ಗುಣಗಳೂ ವಿಶಿಷ್ಟ ವಿಧದ ಕಾರ್ಯಕ್ಷಮತೆಯೂ ವಿಶಿಷ್ಟ ವರ್ಗದವರನ್ನೆ ಆಶ್ರಯಿಸಿಕೊಂಡಿರುವ ವರೆಗೆ ಮೇಲ್ಕಾಣಿಸಿದ ತಾರತಮ್ಯವಿದ್ದೇ ತೀರುವದು. ಪ್ರತಿಯೊಬ್ಬನಿಗೂ ಸಮಾನವಾಗಿ ಅನ್ವಯಿಸತಕ್ಕ ಒಂದೇಒಂದು ನಿಕಷವೆಂದರೆ ಅವನವನ ಶೀಲ ಮತ್ತು ಚಾರಿತ್ರ್ಯ. ಇಷ್ಟೆ; ಈ ಶೀಲ ಚಾರಿತ್ರ್ಯಗಳನ್ನು ಸರಿಯಾಗಿ ಅಳೆದು ನೋಡುವ ಉಪಾಯವನ್ನು ಮಾತ್ರ ಕಂಡು ಹಿಡಿಯಬೇಕು.

ಇಷ್ಟೆಲ್ಲ ಹೇಳಿಯಾದ ಮೇಲೆಯೂ ಒಂದು ಮಾತನ್ನು ಮಾತ್ರ ನಾವು ಮರೆಯಕೂಡದು. ಅದೆಂದರೆ ಈ ಎಲ್ಲ ಹಂಚಿಕೆಗಳು ಅಸಂಖ್ಯಾತ ಜನರ ಒಂದು ಅಲ್ಪಾಂಶಕ್ಕೆ ಮಾತ್ರ ಅನ್ವಯಿಸುವವು. ಹೀಗಿದ್ದರೂ, ಜನರಿಗೆ ಈ ಸ್ಥಳಗಳ ಬಗ್ಗೆ ವ್ಯಾಮೋಹವುಂಟಾಗುವ ಕಾರಣವೆಂದರೆ ತೀರ ಹೆಚ್ಚಿನ ಮತ್ತು ತೀರ ಕಡಮೆಯ ಧನಾರ್ಜನೆಯಲ್ಲಿ ಕಂಡು ಬರುವ ಅಸೀಮ ಅಂತರ. ಅದರಂತೆ ಈ ನೌಕರಿಗಳ ಜೊತೆಗೆ ಅಂಟಿ ಬರುವ ಅಧಿಕಾರ, ದರ್ಪ, ಮಾನ, ಹಾಗೂ ಹಳ್ಳಿಗಳನ್ನು ಉದಾಸೀನಮಾಡಿ ಅವುಗಳ ವರ್ಧನಕ್ಕೆ ಅಡ್ಡಿಯುಂಟಾಗಿ ಅಲ್ಲಿಯ ಒಕ್ಕಲತನ ಉದ್ಯೋಗಾದಿಗಳು ಅಭಿವೃದ್ಧಿಯಾಗದಿದ್ದದ್ದೂ ಪ್ರಬಲ ಕಾರಣಗಳೇ. ಆದ್ದರಿಂದ ಈ ಸಮಸ್ಯೆಯು ಸಮರ್ಪಕವಾಗಿ ಪರಿಹಾರವಾಗಬೇಕಾದರೆ, ಮೊಟ್ಟಮೊದಲು ತೀರ ಹೆಚ್ಚಿನ ಮತ್ತು ತೀರ ಕಡಮೆಯ ಆದಾಯಗಾರರಲ್ಲಿದ್ದ ಅಸೀಮ ಅಂತರವನ್ನು ಹೋಗಲಾಡಿಸಬೇಕು, ಒಕ್ಕಲತನ ಬೆಳೆಯಬೇಕು, ಗ್ರಾಮೋದ್ಯೋಗಗಳ ಅಭಿವೃದ್ಧಿಯಾಗಿ ಧನದ ಬಲದ, ಅಧಿಕಾರದ, ವಿಕೇಂದ್ರೀಕರಣವಾಗಬೇಕು.

ಹೊಸದಿಲ್ಲಿ
೧೦–೮–೪೮ —ಕಿಶೋರಲಾಲ ಮಶ್ರುವಾಲಾ

ಹೈದರಾಬಾದವು ಸಂ. ರಾ. ಸಂಘಕ್ಕೆ

ಹೈದರಾಬಾದ ಸಮಸ್ಯೆಯನ್ನು ಸಂ. ರಾಷ್ಟ್ರ ಸಂಘಕ್ಕೆ ಒಯ್ಯಬೇಕೆಂದು ನಿಜಾಮ ಸರಕಾರವು ನಿರ್ಧರಿಸಿದೆ. ಈ ಸಂಗತಿಯನ್ನು ಲಾಯಕ ಅಲಿಯವರು ಹಿಂದುಸ್ತಾನದ ಮುಖ್ಯಮಂತ್ರಿ ಪಂ. ನೆಹರೂರಿಗೆ ತಿಳಿಸಿದ್ದಾರೆಂದು ನಿಜಾಮ ಸರಕಾರದ ಪ್ರಕಟನೆ ಹೊರಟಿದೆ. ಆದರೆ ಈ ಪ್ರಯತ್ನದ ಪುರಸ್ಕರ್ತರಾರೆಂಬುದನ್ನು ಈ ಪ್ರಕಟನೆಯಲ್ಲಿ ಕಾಣಿಸಲಾಗಿಲ್ಲ.

ಹಿಂದುಸ್ತಾನ—ಹೈದರಾಬಾದಗಳ ಪರಿಸ್ಥಿತಿಯು ತೀರ ಗಂಭೀರವಾಗಿದ್ದು ಶಾಂತತೆಗೆ ಗಂಡಾಂತರವನ್ನು ಒಡ್ಡಿದೆ. ಆದ್ದರಿಂದ ಹಿಂದುಸ್ತಾನ--ಹೈದರಾಬಾದಗಳಲ್ಲಿ ಶಾಶ್ವತವಾದ ಸೌಹಾರ್ದದ ಒಪ್ಪಂದ ಮಾಡಿಕೊಳ್ಳಲು ಯುಕ್ತ ರಾಷ್ಟ್ರ ಸಂಘದ ಸಹಾಯ ಪಡೆದುಕೊಳ್ಳಲೆಂದು ನಮ್ಮ ಪ್ರಶ್ನೆಯನ್ನು ಅಲ್ಲಿಗೆ ಒಯ್ಯಬೇಕೆಂದು ನಿರ್ಧರಿಸಿದ್ದೇವೆಂದು ಲಾಯಕ ಅಲಿಯವರು ಪಂ. ನೆಹರೂರಿಗೆ ತಿಳಿಸಿದ್ದಾರೆ.

ಭದ್ರತಾ ಮಂಡಲದ ಸದಸ್ಯ ರಾಷ್ಟ್ರವಾದ ಸಿರಿಯಾ ಈ ಪ್ರಶ್ನೆಯನ್ನು ಸಂಘದಲ್ಲಿ ಮಂಡಿಸಲೊಪ್ಪಿದೆಯಂತೆ.

ಹೈದರಾಬಾದ ಸ್ವತಂತ್ರವಲ್ಲದ್ದರಿಂದ ಅದಕ್ಕೆ ಸಂ. ರಾ. ಸಂಘಕ್ಕೆ ಮೊರೆಯಿಡುವ ಅಧಿಕಾರವೇ ಇಲ್ಲೆಂದು ದಿಲ್ಲಿಯ ಅಧಿಕಾರಿವರ್ಗಗಳು ಅಭಿಪ್ರಾಯಪಟ್ಟಿವೆ.

ರಾಜಘಾಟದಲ್ಲಿ ಶ್ರೀ ವಿನೋಬಾ

(೯ ನೇ ಪುಟದಿಂದ)

ಕೊಳ್ಳುತ್ತಿದ್ದವು. ಕೆಲವೊಮ್ಮೆ ಅದು ಸಿಗುತ್ತಲೂ ಇರಲಿಲ್ಲ. ಇದರ ಮೇಲೆ ಸಾರಿಗೆಯ ತೊಂದರೆ ಬೇರೆ ಇರುತ್ತಿತ್ತು. ಅಲ್ಲದೆ, ಆ ಬಗ್ಗೆ ಅಧಿಕಾರಿ, ಉಪಾಧಿಕಾರಿ ಎಂದು ಅನಂತಸಂಖ್ಯಕ ಮಧ್ಯಸ್ಥರನ್ನು ನಿಯಮಿಸಬೇಕಾಗುತ್ತಿತ್ತು. ಖಾದಿಗೆ ಈ ಒಂದು ತೊಂದರೆಯೂ ಇಲ್ಲ. ಅದಕ್ಕೆ ಚಿಕ್ಕ ಹತ್ತಿಯನ್ನು ಬಳಸಬಹುದು; ಬಹಳ ಜನ ಮಧ್ಯಸ್ಥರು ಬೇಡ, ಸಾರಿಗೆಯ ಸೌಕರ್ಯವೂ ವಿಶೇಷವಾಗಿ ಬೇಡ. ಖಾದಿ ತತ್ವವನ್ನು ಸರಕಾರವು ಸ್ವೀಕರಿಸಿ ಅದರ ಉತ್ಪಾದನೆಗೆ ಹೃತ್ಪೂರ್ವಕ ಪ್ರೋತ್ಸಾಹ ಕೊಟ್ಟರೆ, ತಮ್ಮ ನಿತ್ಯದ ಸ್ವಕಾರ್ಯದ ಒಂದು ಭಾಗವೆಂದು ಜನರೂ ಚರಕವನ್ನು ಸ್ವೀಕರಿಸಿದರೆ ಬಟ್ಟೆಯ ಪ್ರಶ್ನೆಯನ್ನು ತೃಪ್ತಿಕರವಾಗಿ ಬಿಡಿಸಬಹುದು.

ಗಿರಣಿಯ ಉದ್ಯಮವನ್ನು ಅವಶ್ಯವಿದ್ದಷ್ಟು ಇಟ್ಟುಕೊಂಡು ಅದನ್ನು ಆದಷ್ಟು ಬೇಗ ರಾಷ್ಟ್ರೀಕರಿಸಬೇಕು. ಅದು ಬಡವನ ಪ್ರಶ್ನೆಯನ್ನು ಬಿಡಿಸುವುದೆಂದಲ್ಲ. ಅದಕ್ಕೆ ಚರಕವೊಂದೇ ಮದ್ದು.

ಆದರೆ ಆ ದಿನ ವಿನೋಬಾ ಮಾತಾಡಬೇಕೆಂದಿದ್ದುದರಲ್ಲಿ ಬಟ್ಟೆಯು ಅಷ್ಟು ಮುಖ್ಯವಾದ ವಿಷಯವಾಗಿರಲಿಲ್ಲ. ಆಹಾರದ ಬಿಕ್ಕಟ್ಟನ್ನು ವಿವೇಚಿಸಬೇಕೆಂದು ಅವರೆಣಿಸಿದ್ದರು. ನಿಯಂತ್ರಣವು ಕಳ್ಳಪೇಟೆಯತ್ತ ಜನತೆಯನ್ನು ಒಯ್ದಿತು; ವಿನಿಯಂತ್ರಣವು ಗಗನಚುಂಬಿಯಾದ ಏರು–ಬೆಲೆಗೊಯ್ದು ಮುಟ್ಟಿಸಿತು. ಹೀಗೆ ಬಡವನು ಇತ್ತದರಿ, ಅತ್ತಪುಲಿ ಎಂಬ ಸ್ಥಿತಿಗೊಳಗಾದನು. ಅವನ ಕಷ್ಟ ಪರಿಹಾರವಾಗಲೇ ಇಲ್ಲ. ಅವರ ಪ್ರಕಾರ, ಇದಕ್ಕೆ ನಿವಾರಣೋಪಾಯವೆಂದರೆ ಸರಕಾರವು ಭೂಮಿಯ ಕಂದಾಯವನ್ನು ಧಾನ್ಯರೂಪದಿಂದ್ಯವಸೂಲು ಮಾಡುವುದುದೊಂದೇ. ಹಾಗೆ ಮಾಡಿದರೆ ಅದರ ಹತ್ತಿರ ಯಾವಾಗಲೂ ತನ್ನದೇ ಆದ ಆಹಾರಸಂಗ್ರಹವಿರುವುದು ಮತ್ತು ಅದರಿಂದ ಆಹಾರದ ಬೆಲೆಯನ್ನು ಪರಿಣಾಮಕರವಾಗಿ ನಿಯಂತ್ರಿಸಬಲ್ಲುದು. ಒಕ್ಕಲಿಗನಿಗೂ ಅದೊಂದು ಅನುಕೂಲವಾಗಿ ಕಂದಾಯ ಕೊಡುವ ಮಾರ್ಗವಾತ್ತದೆ. ಮತ್ತು ಸರಕಾರಕ್ಕೂ ಲಾಭಕರವಾಗುತ್ತದೆ. ಇಂದಿನ ಪದ್ಧತಿಯ ಪ್ರಕಾರ ಬಹಳ ವರ್ಷದ ಹಿಂದೆ ಮಾಡಿಕೊಂಡ ಕರಾರಿನಂತೆ ಸರಕಾರವು ಕಂದಾಯ ವಸೂಲು ಮಾಡುತ್ತದೆ. ಆಗ ಹಣದ ಬೆಲೆ ಇಂದಿಗಿಂತ ಹೆಚ್ಚಾಗಿತ್ತು. ೧೦ ಅಥವಾ ೧೫ ವರ್ಷಗಳ ಹಿಂದಿನ ಕರಾರಿನಂತೆ ಸರಕಾರವು ಒಂದು ಗದ್ದೆಯ ಕಂದಾಯವನ್ನು ಸ್ವೀಕರಿಸಿದರೆ, ಅದರ ಕೊಳ್ಳುವ ಬೆಲೆ ಇಳಿದಿರುವ ಈ ಕಾಲದಲ್ಲಿ, ಹಣದ ರೂಪದಲ್ಲಿ ಕಂದಾಯ ವಸೂಲು ಮಾಡಿದರೆ ಸರಕಾರ ಬಡವಾಗುವುದು.

ನಿಜವಾಗಿ ನೋಡಿದರೆ ಹಣದ ರೂಪದಲ್ಲಿ ಕಂದಾಯ ವಸೂಲು ಮಾಡುವುದು ಒಳ್ಳೆಯದೇ ಎಂಬುದು ಚೆನ್ನಾಗಿ ವಿವೇಚಿಸತಕ್ಕ ವಿಷಯವಾಗಿದೆ. ಕರಾರು ಸುದೀರ್ಘ ಕಾಲಕ್ಕಾಗಿ ಮಾಡುವ ಒಂದು ಗಟ್ಟಿಯಾದ ಖಾತ್ರಿಯನ್ನು ಅವಲಂಬಿಸಿದೆ. ಅದನ್ನು ಹಣದ ಮೂಲಕ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಹಣವೆಂದರೆ ಒಂದು ಮಾದರಿಯ ಮೋಸಗಾರ. ಅದು ಪದೇಪದೇ ವೇಷಾಂತರ ಮಾಡಿಕೊಳ್ಳುತ್ತದೆ. ಅದರ ಬೆಲೆ ಯಾವಾಗಲೂ ಬದಲಾಗುತ್ತಿರುತ್ತದೆ. ಮೋಸಗಾರನೊಡನೆ ಯಾವನೂ ಎಂದೂ ನ್ಯಾಯವಾದ ಕರಾರನ್ನು ಮಾಡಿಕೊಳ್ಳುವುದು ಸಾಧ್ಯವಿಲ್ಲ. ಆದರೂ ಜಗತ್ತು ತನ್ನ ವ್ಯವಹಾರದಲ್ಲಿ ಹಣವನ್ನು ಮಧ್ಯಸ್ಥನನ್ನಾಗಿ ತೆಗೆದುಕೊಂಡಿರುವುದು ಆಶ್ಚರ್ಯಕರವಾಗಿದೆ. ಈ ಮೋಸಗಾರನಾದ ಮಧ್ಯಸ್ಥನೇ ಜನರನ್ನೂ ಸರಕಾರವನ್ನೂ ಇಂದಿನ ಅವ್ಯವಸ್ಥೆಯಲ್ಲಿ ತಂದು ಹಾಕಿದ್ದು. ಹಣವು ಅದರಷ್ಟಕ್ಕದು ಬೆಲೆಯಿಲ್ಲದ್ದು; ಅದನ್ನೇ ತೆಗೆದು ಕೊಂಡರೆ ಅದು ಯಾವ ಕೆಲಸಕ್ಕೂ ಬರುವಂಥದಲ್ಲ. ಅದಕ್ಕೆ ಕೊಟ್ಟ ಕಾಲ್ಪನಿಕ ಮೂಲ್ಯವು ಕಾಲಕಾಲಕ್ಕೆ ಬದಲಾಯಿಸುತ್ತದೆ. ಆದರೆ ಅವಶ್ಯಕ ವಸ್ತುವೆನಿಸಿ ಒಂದು ಸೇರು ಅಕ್ಕಿಗೆ ಇದ್ದ ಬೆಲೆ ನಿರಂತರವಾಗಿ ಇದ್ದೇ ಇರುತ್ತದೆ. ಸಾಧಾರಣವಾಗಿ ಚೆನ್ನಾಗಿರುವ ಅದರ ಪೋಷಕ ಶಕ್ತಿಯಲ್ಲಿ ಎಲ್ಲಿಯಾದರೂ ಒಮ್ಮೆ ಕೊರತೆ ಉಂಟಾದರೆ ಅದೀತು ಅಷ್ಟೆ; ಅದೊಂದೇ ಅಪವಾದ.

ಧಾನ್ಯರೂಪದಲ್ಲಿ ಸರಕಾರವು ಕಂದಾಯವನ್ನು ವಸೂಲು ಮಾಡಬೇಕಾದರೆ ತನ್ನದೇ ಆದ ಧಾನ್ಯಸಂಗ್ರಹಾಲಯ, ಅಂಗಡಿ ಇತ್ಯಾದಿಗಳಿರಬೇಕು. ಆದರೆ ಹೇಗಿದ್ದರೂ ಸರಕಾರವು ಅಂಥ ಅಡಳಿತದ ಕರ್ತವ್ಯವನ್ನು ನಿರ್ವಹಿಸಲೇಬೇಕು; ಅದುದರಿಂದ ಅದನ್ನದು ಮಾಡಬಲ್ಲುದು. ಜನರು ಸರಕಾರವನ್ನು ಅನುಸರಿಸುತ್ತಾರೆ– ಅದರಲ್ಲಿ ವಿಶೇಷತಃ ಹಳ್ಳಿಗರು. ಅವರು ಕೂಲಿಯನ್ನು ಧಾನ್ಯರೂಪದಲ್ಲಿ ಕೊಡುವರು. ಆದರಿಂದ ಆಹಾರ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಿನ ಸಮಸ್ಥಿತಿ ಉಳಿಯುವಂತಾಗುವುದು.

(ಮೂಲ ಹಿಂದುಸ್ತಾನಿಯಿಂದ ಭಾಷಾಂತರಿಸಿದ್ದು)
—ದಿ. ಎಂ.

ಹಿಂದೂ ಮಹಾಸಭೆಯ ಪುನರ್ಘಟನೆ

ಅ. ಭಾ. ಹಿಂದು ಮಹಾಸಭೆಯ ಪ್ರಧಾನಕಾರ್ಯದರ್ಶಿಗಳಾದ ಶ್ರೀ. ಅಶುತೋಷ ಲಾಹಿರಿಯವರು ಹಿಂದು ಮಹಾಸಭೆಯ ಪುನರ್ಘಟನೆಯನ್ನು ಕುರಿತು ಒಂದು ಹೇಳಿಕೆ ಹೊರಡಿಸಿದ್ದು ಅದರಲ್ಲಿ ರಾಷ್ಟ್ರೀಯ ಪುನರ್ರಚನೆಯ ನಿಶ್ಚಿತ ತಳಹದಿಯ ಮೇಲೆ ಹಿಂದು ಮಹಾಸಭೆಯು ಪುನರ್ಘಟಿಸಲ್ಪಡುವದು. ಅದರಲ್ಲಿ ಎಲ್ಲ ವರ್ಗಗಳ ಜನರಿಗೆ ಅವಕಾಶವಿರುವದಲ್ಲದೆ, ಅದು ಹರಿದು ಹಂಚಿ ಹೋದ ರಾಜಕೀಯ ಪಕ್ಷಪಂಗಡಗಳನ್ನು ಒಳಗೊಳ್ಳುವದು ಎಂದು ಸಾರಿದ್ದಾರೆ.

ಹಿಂದೂ ಮಹಾಸಭೆಯ, ರಾಜಕೀಯ ಚಟುವಟಿಕೆಗಳನ್ನು ಬಿಟ್ಟುಕೊಟ್ಟರೂ ನಿರೀಕ್ಷಿತ ಫಲ ಸಿಗಲಿಲ್ಲ. ಜಾತೀಯ ಸೌಹಾರ್ದದ ವಾತಾವರಣವು ನಿರ್ಮಾಣವಾಗುವ ಬದಲು ದೇಶದ ಅಖಂಡತ್ವ ಹಾಗೂ ಸುರಕ್ಷಿತತೆಗಳು ಗಂಡಾಂತರದಲ್ಲಿ ಸಿಲುಕಿವೆ. ಅಲ್ಲದೆ ಹೇಳಿಕೊಳ್ಳುವಂಥ ಒಂದು ವಿರೋಧ ಪಕ್ಷವು ಹೋಗಿ ಕಾಂಗ್ರೆಸಿಗೆ ಅಧಿಕಾರದ ಗುತ್ತಿಗೆಯನ್ನು ಕಾಯಂ ಕೊಟ್ಟಂತಾಗುವ ಪ್ರಸಂಗ ಬಂದಿದೆ.

ಮುಸಲ್ಮಾನರ ದಬ್ಬಾಳಿಕೆಯ ವಿರುದ್ಧ ಹಿಂದುಗಳನ್ನು ಸಂರಕ್ಷಿಸುವ ಒಂದು ಸಂಘಟನೆಯ ಅವಶ್ಯಕತೆಯು ೧೫-೮-೪೭ ರಿಂದ ಅಳಿದಿದೆ. ಹಿಂದು ಮಹಾಸಭೆಯು ಅಂದಿನಿಂದ ರಾಷ್ಟ್ರೀಯ ಪುನರ್ರಚನೆಯ ತಳಹದಿಯ ಮೇಲೆ ಪುನರ್ಘಟಿತವಾಗಬೇಕೆಂದು ನಮಗೆ ಮಹಾತ್ಮರ ದುಃಖದಾಯಕ ಕೊಲೆಯ ಮೊದಲೇ ಹೊಳೆದಿತ್ತು. ಆದ್ದರಿಂದ ನಾವಿನ್ನು ಎಲ್ಲ ಜಾತೀಯ ಜನರಿಗೆ ಮಹಾಸಭೆಯನ್ನು ಮುಕ್ತದ್ವಾರ ಮಾಡಿದ್ದೇವೆ. ಸ್ವತಂತ್ರ ಹಿಂದುಸ್ತಾನದ ಎಲ್ಲ ಪಕ್ಷಗಳು ಜಾತ್ಯತೀತವಾಗಿರಬೇಕೆಂದು ನಮಗೆ ಮನದಟ್ಟಾಗಿ ನಾವು ಎಲ್ಲ ಜಾತಿಗಳಿಗೆ ಅವಕಾಶ ಕಲ್ಪಿಸಿದ್ದೇವೆ ಮತ್ತು ಜನತೆ ನಮಗೆ ಬೆಂಬಲ ಕೊಡಬೇಕೆಂದು ಬೇಡುತ್ತೇವೆ.

ವಾರದ ಸಿಂಹಾವಲೋಕನ

(೮ ನೇ ಪುಟದಿಂದ)

ಆದರೆ ರಜಾಕಾರರ ಬಲೆಯೊಳಗೆ ಸಿಕ್ಕ 'ಹುಚ್ಚು' ದೊರೆಗಳು ಅತ್ತ ಲಕ್ಷ್ಯ ಕೊಡದೆ ಪರಿಸ್ಥಿತಿಯನ್ನು ಹದಗೆಡಿಸುತಿರುವರು. ಅವರ ದೇಶದಲ್ಲಿ ಇಂದು ನಡೆದ ಅತ್ಯಾಚಾರ ಸ್ತ್ರೀಮಾನಭಂಗ, ಕೊಳ್ಳಿ ಮೊದಲಾದವುಗಳನ್ನು ನೋಡಿದರೆ ನಿಜಾಮ ಸಾಹೇಬರು ಎಷ್ಟೊಂದು ಅಡ್ಡದಾರಿ ಹಿಡಿದಿರುವರೆಂಬುದು ಗೊತ್ತಾಗುವುದು. ನಿಜಾಮರ ಈ ಪ್ರತಿಗಾಮೀ ಧೋರಣಕ್ಕೆ ಬೇಸತ್ತು ಇಬ್ಬರು ಹೊಣೆಗಾರ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ವಕೀಲರು, ವಿದ್ಯಾರ್ಥಿಗಳು ಕೋರ್ಟು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿದ್ದಾರೆ. ಇತ್ತೀಚೆ ಅವರ ಆಪ್ತ ಬಂಧುಗಳಾದ ಮುಸಲ್ಮಾನ ಮುಖಂಡರೇ ಪ್ರಕಟನೆಯನ್ನು ಹೊರಡಿಸಿ ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಕರ್ತವ್ಯವನ್ನು ತಿಳಿಸಿಕೊಟ್ಟಿದ್ದಾರೆ. ರಜಾಕಾರ ಸಂಸ್ಥೆಯನ್ನು ಕೂಡಲೆ ವಿಸರ್ಜಿಸಿ ಈಗಿನ ಸರಕಾರವನ್ನು ರದ್ದುಗೊಳಿಸಬೇಕು; ಎಲ್ಲ ಪಕ್ಷಗಳ ಮನ್ನಣೆಗೆ ಪಾತ್ರವಾದ ಸರಕಾರವನ್ನು ಕೂಡಲೆ ಸ್ಥಾಪಿಸಬೇಕು. ಸಂರಕ್ಷಣ, ವಿದೇಶ ವ್ಯವಹಾರ ಸಾರಿಗೆ ಸಂಪರ್ಕ ಇವುಗಳನ್ನು ಹಿಂದುಸ್ತಾನ ಸರಕಾರಕ್ಕೆ ಒಪ್ಪಿಸಿ ಹಿಂದುಸ್ತಾನದಲ್ಲಿ ಸೇರ್ಪಡೆಹೊಂದಬೇಕು ಎಂದು ಮುಂತಾಗಿ ಅವರು ಬಿನ್ನವಿಸಿಕೊಂಡಿರುವರು. ನವಾಬರು, ಹಿಂದಿನ ಮಂತ್ರಿಗಳು, ಎಂಜಿನಿಯರರು, ತಹಸೀಲದಾರರು ಮೊದಲಾದ ಪ್ರಮುಖರು ಈ ಪ್ರಕಟನೆಗೆ ಸಹಿ ಮಾಡಿರುವರು.

ಆದರೆ ಮೂರ್ಖರಿಗೆ ಉಪದೇಶ ಕೊಟ್ಟರೆ ಕೊಟ್ಟವರ ಮೇಲೆಯೆ ಅವರು ಎರಗುವರೆಂಬಂತೆ ಈ ಹೇಳಿಕೆ ಹೊರಡಿಸಿದವರ ಮೇಲೆ ನಿಜಾಮ ಸರಕಾರ ಕ್ರಮ ತೆಗೆದುಕೊಳ್ಳಲಿದೆಯಂತೆ! ಯುಕ್ತ ರಾಷ್ಟ್ರ ಸಂಘಕ್ಕೆ ಸಿರಿಯದ ಮೂಲಕ ಹಿಂದುಸ್ತಾನದ ಮೇಲೆ ದೂರೊಯ್ಯಲು ನಿಜಾಮರು ನಿರ್ಧರಿಸಿದ್ದಾರೆಂದು ಇದೀಗ ಸುದ್ದಿ ಬಂದಿದೆ.

ರೂಪರಂಗ



ಕೆಲಸಗಾರ ಪ್ರಪಂಚ

ಸ್ವತಂತ್ರ ಭಾರತದಲ್ಲಿ ಕೂಲಿಕಾರ ಹಿತ ಯೋಜನೆಗಳು

[illegible] ಅನೇಕ ಪ್ರಶ್ನೆಗಳನ್ನು ಕೈಕೊಂಡಿತು. ಈ ರಂಗದಲ್ಲಿ ಇದು ಅನೇಕ ಕ್ರಾಂತಿಕಾರಿ ಸುಧಾರಣೆಗಳಾಗಿವೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಈ ದೇಶದಲ್ಲಿ ಇನ್ನೂ ಇತರ ಕೆಲ ದೇಶಗಳಷ್ಟು ಮುಂದುವರಿದಿಲ್ಲವೆಂಬುದು ನಿಜ. ಆದರೂ ಆ ಭಾಗದಲ್ಲಿ ಸರಕಾರ ಹಿಂದಿನ ಪ್ರಣಾಲಿಯನ್ನು ಪೂರ್ತಿಯಾಗಿ ತ್ಯಜಿಸಿ ಒಂದು ಹೊಸ ಪ್ರಗತಿಪರ ಮಾರ್ಗವನ್ನು ಕ್ರಮಿಸತೊಡಗಿದೆ. ಯೋಗ್ಯ ಕೂಲಿದರ, ಕೆಲಸದ ಸ್ಥಿತಿಗತಿಯ ಸುಧಾರಣೆ, ಹೆಚ್ಚಿನ ಜೀವನ ಮಟ್ಟ, ಶಿಕ್ಷಣ, ತರಬೇತಿ ಮೊದಲಾದ ವ್ಯವಸ್ಥೆ ಮತ್ತು ನಿರುದ್ಯೋಗ ನಿವಾರಣೆ ಇವುಗಳ ಕಡೆ ಸರಕಾರ ವಿಶೇಷ ಗಮನ ಕೊಟ್ಟಿದೆ.

ಕೆಲಸಗಾರರ ವಿಮೆ

ಸ್ವಾತಂತ್ರ್ಯದ ಒಂದು ವರ್ಷದಲ್ಲಿ ಸರಕಾರ ಈ ಬಗ್ಗೆ ಕೈಕೊಂಡ ಕ್ರಮಗಳಲ್ಲಿ ನೌಕರರ ಸರಕಾರಿ ವಿಮಾ ಕಾಯದೆಯೆ ಸರ್ವಶ್ರೇಷ್ಠವಾದುದು ಈ ಬಗೆಯ ಕಾಯದೆ ಇದಿ ಏಶಿಯದಲ್ಲಿ ಇದೇ ಮೊದಲು.

ಈ ಕಾಯಿದೆ ಪೊಟ್ಟಮೊದಲು ಹಿಂದುಸ್ಥಾನದ ೨೫ ಲಕ್ಷ ಕಾರಖಾನೆ ಕೆಲಸಗಾರರಿಗೆ ಅನ್ವಯಿಸುವದು ಮುಂದೆ ಅನುವು ದೊರೆತಂತೆ ಇತರ ಕೆಲಸಗಾರರಿಗೂ ಇದನ್ನು ಅನ್ವಯಿಸಲಾಗುವದು. ಇದರಿಂದ ಕೆಲಸಗಾರರಿಗೆ ವೈದ್ಯಕೀಯ ಸಹಾಯ ಶುಶ್ರೂಷೆ, ವರ್ಷಕ್ಕೆ ೫೬ ದಿನಗಳವರೆಗೂ ದಿನಗೂಲಿಯ ಅರ್ಧಕ್ಕಿಂತಲೂ ಹೆಚ್ಚು ಪ್ರಮಾಣದ ಅಸ್ವಾಸ್ಥ್ಯ ಭತ್ತೆ, ಹೆಂಗಸರ ಹೆರಿಗೆಯ ಕಾಲದಲ್ಲಿ ದಿನಕ್ಕೆ ಹನ್ನೆರಡಾಣೆಯಂತೆ ೧೨ ವಾರಗಳ ತನಕ ಧನಸಹಾಯ, ಅಂಗಭಂಗ ಅಥವಾ ಮರಣವೊದಗಿದರೆ ಅಂಗವಿಕಲನಾದ ಕೂಲಿಕಾರನಿಗೆ ಅಥವಾ ಅವನ ಆಶ್ರಿತರಿಗೆ ವಿಶ್ರಾಮವೇತನ—ಈ ಎಲ್ಲ ಸೌಕರ್ಯಗಳು. ಈ ಯೋಜನೆಯನ್ವಯ ವಿಮೆ ಇಳಿಸುವ ಕೆಲಸಗಾರನಿಗೆ ಲಭಿಸುವವು. ಈ ಬಗ್ಗೆ ನಿಧಿಯನ್ನು ಒಡೆಯ-ಕೆಲಸಗಾರರಿಬ್ಬರಿಂದಲೂ [illegible]ಲಾಗುವದಾದರೂ ದಿನಕ್ಕೆ ಒಂದು ರೂಪಾಯಿಕ್ಕ ಕಡಿಮೆ ದುಡಿಯುವವನು ಇದಕ್ಕೆ ಏನೂ ತೆರಬೇಕಾಗುವದಿಲ್ಲ. ಈ ಯೋಜನೆಗೆ ಬರುವ ವೆಚ್ಚದಲ್ಲಿ ೨/೩ ಅಂಶವನ್ನು ಕೇಂದ್ರ ಸರಕಾರವೆ ವಹಿಸುವದು. ವರ್ಷಕ್ಕೆ ತಲಾ ೬ ರೂಪಾಯಿ ಇದಕ್ಕೆ ವೆಚ್ಚ ಬರಬಹುದೆಂದು [illegible]ಸಲಾಗಿದೆ.

ಈ ಕಾಯದೆಯನ್ನು ಕಾರ್ಯಕ್ಕೆ ತರಲು ಸಿದ್ಧತೆಗಳು ಭರದಿಂದ ಸಾಗಿವೆ.

ಕೆಲಸದ ಸ್ಥಿತಿಗತಿಯ ಸುಧಾರಣೆ

ಇದಲ್ಲದೆ ಸುಧಾರಿಸಿದ ಫ್ಯಾಕ್ಟರಿ ಮಸೂದೆಯೊಂದು ಸಿದ್ಧವಾಗಿದ್ದು ಅದು ಸದ್ಯದ ಅಧಿವೇಶನದಲ್ಲಿಯೆ ಪಾಸಾಗಬಹುದು. ಅದು ಈ ಕಾಯದೆಯ ಪ್ರಯೋಜನವನ್ನು ೩೫ ಲಕ್ಷ ಕೂಲಿಕಾರರಿಗೆ ಅನ್ವಯಿಸುವದು. ಈಗ ವರ್ಷಾವಧಿ ಮತ್ತು ಹಂಗಾಮಿ ಕಾರಖಾನೆಗಳ ನಡುವೆ ಇದ್ದ ಭೇದವನ್ನು ಹೋಗಲಾಡಿಸಿ, ಎಲ್ಲ ಕಾರಖಾನೆಗಳಿಗೂ ಇದನ್ನು ಅನ್ವಯಿಸಲಾಗುವದು. ಕೆಲಸ ಮಾಡುವ ಸ್ಥಳ ಹೆಚ್ಚು ಆರೋಗ್ಯಕರ, ಸ್ವಚ್ಛ, ಸುರಕ್ಷಿತವಾಗಿರುವಂತೆ ಮಾಡುವದಲ್ಲದೆ ಇದು ಕೆಲಸಗಾರರಿಗೆ ಹೆಚ್ಚು ಸುಖ ಸೌಕರ್ಯಗಳನ್ನು ಒದಗಿಸುವದು. ಇದನ್ನು ನಿಷ್ಠುರವಾಗಿ ಅಮಲಿನಲ್ಲಿ ತರುವ ಸಲುವಾಗಿ ಪ್ರಾಂತಿಕ ಫ್ಯಾಕ್ಟರಿ ಇನಸ್ಪೆಕ್ಟರರುಗಳ ಕಾರ್ಯಾಲಯಗಳನ್ನು ವಿಸ್ತರಿಸಲಾಗುವದು.

ಹಿಂದುಸ್ಥಾನದ ಧಕ್ಕೆಗಳಲ್ಲಿ ಕೆಲಸಮಾಡುವ ೭೦೦೦೦ ಕೆಲಸಗಾರರಿಗೆ ಅಪಘಾತಗಳ ವಿರುದ್ಧ ಹೆಚ್ಚು ಸುರಕ್ಷಿತತೆ ಕೊಡುವ ಸಲುವಾಗಿ ಧಕ್ಕೆ ಕೆಲಸಗಾರರ ಕಾಯದೆಯನ್ನು ಪಾಸು ಮಾಡಲಾಗಿದೆ.

ಕಾರಖಾನೆಗಳೇ [illegible] ಮೊದಲಾದವುಗಳಿಗೆ ಕೂಲಿಕಾರರನ್ನು ಭರ್ತಿ ಮಾಡಿಕೊಳ್ಳುವದರಲ್ಲಿ ಗುತ್ತಿಗೆಗಾರ ಅಥವಾ ಕಂಟ್ರಾಕ್ಟರುಗಳಿಂದಾಗುವ ಅನ್ಯಾಯಗಳನ್ನು ನಿಲ್ಲಿಸುವ ಸಲುವಾಗಿ ಸರಕಾರ ಉದ್ಯೋಗ ಖಾತೆಯನ್ನು ಸ್ಥಾಪಿಸಿದೆ ಅದು ಏನೂ ಶುಲ್ಕವಿಲ್ಲದೆ ಯಾರಿಗೂ ಉದ್ಯೋಗವನ್ನು ಹುಡುಕಿಕೊಡಲು ಸಿದ್ಧವಾಗಿದೆ. ಈ ಖಾತೆಯ ಅನೇಕ ಕಾರ್ಯಾಲಯಗಳು ದೇಶದಲ್ಲೆಲ್ಲ ಇವೆ.

೨½ ಲಕ್ಷ ಕಲ್ಲಿದ್ದಲಿ ಗಣಿ ಕೆಲಸಗಾರರ ಹಿತಕ್ಕಾಗಿ ೪೮ ತಾಸಿನ ವಾರಗಳ ನಿಯಮವನ್ನು ಜಾರಿಯಲ್ಲಿ ತಂದಿರುವದಲ್ಲದೆ ಅವರಿಗಾಗಿ ಕೆಲಸಗಾರ ಪ್ರಾವಿಡೆಂಟ ಫಂಡ ಯೋಜನೆಯನ್ನು ಸುಗ್ರೀವಾಜ್ಞೆಯಿಂದ ಜಾರಿ ಮಾಡಲಾಗಿದೆ. ಈ ಯೋಜನೆ ಹೇಗೆ ಫಲಿಸುವದೆಂದು ನೋಡಿ ಉಳಿದ ಉದ್ದಿಮೆಗಳಿಗೂ ಅದನ್ನು ಅನ್ವಯಿಸಬಹುದು. ವಸತಿ ಸೌಕರ್ಯದ ಕೊರತೆಯನ್ನು ನಿವಾರಿಸಲು ೧೦ ವರ್ಷಗಳಲ್ಲಿ ೧೦ ಲಕ್ಷ ಮನೆಗಳನ್ನು ಕಟ್ಟಿಸುವ ಯೋಜನೆಯಿದ್ದು ಇದರ ಪ್ರಾರಂಭರೂಪವಾಗಿ ಝರಿಯಾ ಕಲ್ಲಿದ್ದಲಿ ಗಣಿಗಳ ಬಳಿ ೫೦,೦೦೦ ಮನೆಗಳನ್ನು ಕಟ್ಟಿಸುವ ಏರ್ಪಾಡು ನಡೆದಿದೆ.

ಕೂಲಿದರಗಳು ನ್ಯಾಯವಾಗಿರಬೇಕೆಂಬ ವಿಚಾರದಲ್ಲಿ ಹಿಂದುಸ್ಥಾನ ಸರಕಾರ ಈ ಹಿಂದೆ ಏನೂ ಮಾಡಿರಲಿಲ್ಲ. ಆದರೆ ಈಗ ಆ ಧೋರಣೆಯಲ್ಲಿ ಸಂಪೂರ್ಣ ಬದಲಾವಣೆಯಾಗಿದೆ. ಮೊನ್ನೆ ಮೊನ್ನೆ ಪಾಸಾದ ಕನಿಷ್ಠ ಕೂಲಿಯ ಕಾಯದೆಯನ್ವಯ ಬೀಡಿ, ಕಂಬಳಿ ಮೊದಲಾದ ಉದ್ದಿಮೆಗಳಲ್ಲಿ ಮಾತ್ರವಲ್ಲ ಕೃಷಿ ಮತ್ತು ತೋಟದ ಕೆಲಸಗಾರರಿಗೆ ಕೂಡ ಕನಿಷ್ಠ ಇಂತಿಷ್ಟೇ ಕೂಲಿ ಸಲ್ಲಲೇಬೇಕೆಂದು ವಿಧಿಸುವ ಹಕ್ಕು ಸರಕಾರಕ್ಕೆ ಬಂದಿದೆ. ಒಡೆಯ ಕೆಲಸಗಾರರಿಬ್ಬರ ಪ್ರತಿನಿಧಿಗಳನ್ನು ವಿಚಾರಿಸಿ ಈ ಕನಿಷ್ಠ ಪ್ರಮಾಣವನ್ನು ಅಲ್ಲಲ್ಲಿಯ ಸ್ಥಿತಿಗತಿಗನುಗುಣವಾಗಿ ವಿಧಿಸಲಾಗುವದು. ಇಂಥ ಮಧ್ಯಸ್ಥಿಕೆಯಿಂದ ತೋಟಗಳ (ಕಾಫಿ ಚಹಾ ಇತ್ಯಾದಿ) ಕೆಲಸಗಾರರಿಗೆ ಹೆಚ್ಚಿನ ಕೂಲಿ ಕೊಡಲು ತೋಟದೊಡೆಯರು ಒಪ್ಪಿದ್ದಾರೆ. ಇದರಿಂದ ಅವರಿಗೆ ಒಟ್ಟು ವರ್ಷಕ್ಕೆ ೫ ಕೋಟಿ ರೂಪಾಯಿಯಷ್ಟು ಹೆಚ್ಚು ಕೂಲಿ ದೊರೆತಂತಾಗುವದು.

ಇಂದಿನ ಜರ್ಮನಿಯ ಮುಖ, ಮನಸ್ಸು

(೫ನೆಯ ಪುಟದಿಂದ)

ಮಾತುಗಳು ರಶಿಯನ್ನರ ಭಾವನೆಗಳನ್ನು ಉದ್ರೇಕಗೊಳಿಸಿದ್ದವೆಂಬಲ್ಲಿ ಸಂದೇಹವಿಲ್ಲ. ನಾನು ಇಂಥಪ್ರಸಂಗದಲ್ಲಿ ವಾದಕ್ಕಿಳಿಯುವದು ತರವಾಗಿರಲಿಲ್ಲ. ನಾನು ಹಿಂದೀ ದೃಷ್ಟಿಕೋನವನ್ನು ಪ್ರತಿಪಾದಿಸುತ್ತ: "ನಾವು ಹಿಂದೀಯರು ಈ ವಿವಾದವನ್ನು ತಟಸ್ಥರಾಗಿ ಅವಲೋಕಿಸಬಲ್ಲೆವು. ಪ್ರಮುಖ ರಾಷ್ಟ್ರಗಳು ಇದನ್ನು ಶಾಂತಿಯಿಂದಲೇ ಬಗೆಹರಿಸಬೇಕೆಂದು ನಮ್ಮ ಒತ್ತಾಯ," ಎಂದೆ. "ರಶಿಯನ್ನರೂ ಪ್ರತಿಯೊಂದು ವಿವಾದವನ್ನು ಶಾಂತಿಯಿಂದಲೇ ಬಗೆಹರಿಸಬಯಸುತ್ತಾರೆ," ಎಂದು ತಟ್ಟನೆ ಉತ್ತರ ಬಿತ್ತು. ಇದನ್ನು ಕೇಳಿ ನನಗೆ ಆನಂದವಾಯಿತು.

ಕೊನೆಯದಾಗಿ ಬರ್ಲಿನ್ನಿನ ಮೇಯರರಾದ ಶ್ರೀಮತಿ ಶ್ರೋಡರರೊಡನೆ ಆದ ಭೆಟ್ಟಿಯನ್ನು ಉಲ್ಲೇಖಿಸುವೆ. ಹಿಂದಿನ ಜರ್ಮನ್ ಪಾರ್ಲಿಮೆಂಟಿನ ಸದಸ್ಯರೂ ಪ್ರಸಿದ್ಧ ಸಾಮ್ಯವಾದಿಗಳೂ ಆದ ಅವರು ಬರ್ಲಿನ್ನಿನ ಜನತೆಗೆ ಮಾರ್ಗದರ್ಶನ ಮಾಡುವ ಹೊಣೆ ಹೊತ್ತಿದ್ದಾರೆ. ಆಕ್ರಮಣಾಧಿಕಾರಿಗಳೂ ಅವರಲ್ಲಿ ವಿಶ್ವಾಸವಿಟ್ಟಿದ್ದರು. ಜರ್ಮನ ಜನತೆಯ ಮುಂದಿರುವ ಭಯಂಕರ ಪರಿಸ್ಥಿತಿಯ ಅರಿವಿದ್ದರೂ ಅವರು ಭಾರತದ ಕ್ಷೇಮ ಸಮಾಚಾರವನ್ನು ವಿಚಾರಿಸಿ ಸಹಾನುಭೂತಿಪರವಾಗಿ ಮಾತಾಡಿದರು. ಶ್ರೀಮತಿ ಶ್ರೋಡರರು ಜಗತ್ತಿನಲ್ಲಿ ಇಂದು ಜೀವಂತರಾಗಿರುವರು ಶ್ರೇಷ್ಠ ಮಹಿಳೆಯರಲ್ಲೊಬ್ಬರು ಅವರ ಸುದ್ದಿಗಳು ನಮ್ಮ ಕಿವಿಗೆ ಆಗಾಗ್ಗೆ ಬೀಳಬಹುದು.

ಮುಸ್ಲಿಮರನ್ನು ತಪ್ಪು ದಾರಿಗೆಳೆದಿದ್ದಾರೆ

ಡಾ. ಸೈಯದ ಲತೀಫರು ಒಂದು ಪ್ರಕಟನೆ ಹೊರಡಿಸಿ, ಹೈದರಾಬಾದದ ಮುಸಲ್ಮಾನರನ್ನು ತಪ್ಪು ಹಾದಿ ಹಿಡಿಸಲಾಗುತ್ತಿದೆಯೆಂದೂ ಸಂಸ್ಥಾನದ ಹಿತ ಬಯಸಿ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದವರನ್ನು ದೇಶದ್ರೋಹಿಗಳೆಂಬ ಬಣ್ಣ ಬಳಿಯಲಾಗುತ್ತಿದೆಯೆಂದೂ ಹೇಳಿ ಹೈದರಾಬಾದ ಸರಕಾರಕ್ಕೆ ಎಚ್ಚರಿಕೆ ಹೇಳಿದ್ದಾರೆ ಮತ್ತು ಈ ಚಟುವಟಿಕೆಯಲ್ಲಿ ಸರಕಾರದ • ಅಂಗವಿದ್ದುದಾದರೆ ಅದು ನಿಜವಾಗಿಯೂ ದುರ್ದೈವಿ ಸರಕಾರವೆಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಬ್ಯಾ. ಜಿನ್ನಾರಿಗೆ ಕ್ಯಾನ್ಸರ

ಪಾಕಿಸ್ತಾನದ ಗವರ್ನರ ಜನರಲ್ಲರಾದ ಜಿನ್ನಾರವರು ಕ್ಯಾನ್ಸರಬೇನೆಯಿಂದ ಬಳಲುತ್ತಿದ್ದಾರೆಂದು ತಿಳಿಯುತ್ತದೆ. ಈ ಮೂಲಕ ಪಾಕಿಸ್ತಾನಿಗಳ ಸ್ವಾತಂತ್ರ್ಯೋತ್ಸವಕ್ಕೆ ಕಳೆಯೇ ಇರಲಿಲ್ಲ. ಇವರ ಚಿಕಿತ್ಸೆಗಾಗಿ ಲಂಡನ್ನಿನ ಸುಪ್ರಸಿದ್ಧ ಡಾಕ್ಟರರೊಬ್ಬರು ವಿಶೇಷ ವಿಮಾನದಿಂದ ಕರಾಚಿಗೆ ಧಾವಿಸಿಬಂದಿದ್ದಾರೆ. ಈ ಡಾಕ್ಟರರಿಗೆ ಈ ರೋಗ ಗುಣಪಡಿಸುವದು ನೀಗದಿದ್ದರೆ ಜಿನ್ನಾರವರನ್ನು ಚಿಕಿತ್ಸೆಗಾಗಿ ನ್ಯೂಯಾರ್ಕಕ್ಕೆ ಕಳಿಸುವ ವಿಚಾರವಿದೆಯೆಂದು ತಿಳಿಯುತ್ತದೆ.

ಜಿನ್ನಾರು ಈ ರೋಗದಿಂದ ಪಾರಾಗದೆ ಪೈಗಂಬರ ವಾಸಿಗಳಾದರೆ ಭಾರತ ಪಾಕಿಸ್ತಾನಗಳು ಪುನಃ ಒಂದಾಗುವ ಆಂದೋಲನ ಪ್ರಾರಂಭವಾಗುವದೆಂದೂ ಇದು ಬಂಗಾಲದಲ್ಲಿ ಮೊದಲು ತಲೆಯೆತ್ತುವದೆಂದೂ ಲಂಡನ್ನಿನ ಪ್ರಮುಖ ವ್ಯಾಪಾರಿಯು ನಮ್ಮ ಲಂಡನ ಪ್ರತಿನಿಧಿಗೆ ತಿಳಿಸಿದನೆಂದು ವಾರ್ತೆ ಬಂದಿದೆ.

ಭಾರತ ಅರ್ಥಸಚಿವರ ರಾಜೀನಾಮೆ

ಭಾರತ ಅರ್ಥಸಚಿವರಾದ ಶ್ರೀ ಷಣ್ಮುಖಂ ಚೆಟ್ಟಿಯಾರರು ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟದ್ದು ಅದು ಸ್ವೀಕೃತವಾಗಿದೆ. ಆದಾಯಕರ ವಿಚಾರಣಾ ಮಂಡಳಕ್ಕೆ ಒಪ್ಪಿಸಿದ ಕೆಲವೊಂದು ಪ್ರಕರಣಗಳನ್ನು ತಾವು ಹಿಂದಕ್ಕೆ ತೆಗೆದುಕೊಂಡದ್ದೇ ತಮ್ಮ ರಾಜೀನಾಮೆಯ ಕಾರಣವೆಂದೂ ಮಂಡಳದ ಅನುಜ್ಞೆ ಪಡೆಯದೆ ಹೀಗೆ ಮಾಡಿದ್ದು ಗುರುತರ ಅಪರಾಧವೇ ಎಂದೂ ಸ್ವತಃ ಶ್ರೀ ಚೆಟ್ಟಿಯಾರರೇ ಪ್ರಾಂಜಲವಾಗಿ ಒಪ್ಪಿ ಹೀಗೆ ಹಿರಿಯೋಲಗದಲ್ಲಿ ಭಾಷಣ ಮಾಡಿದರು. ಮುಖ್ಯಮಂತ್ರಿ ಪಂ. ನೆಹರೂ ಅವರು ಅರ್ಥಸಚಿವರು ಸಲ್ಲಿಸಿದ ಸೇವೆಯನ್ನೂ ತಮ್ಮ ಅಪರಾಧವನ್ನು ಬಿಚ್ಚುಮನದಿಂದ ಒಪ್ಪಿದ್ದನ್ನೂ ಬಹಳ ಕೊಂಡಾಡಿದರು. ತಪ್ಪಿಗೆ ಪ್ರಾಯಶ್ಚಿತ್ತ [illegible] ಅರ್ಥಸಚಿವರ [illegible] ಕನಾಗಿ [illegible] ದೆಯೆಂದೂ ಪಂ. ನೆಹರು ಹೇಳಿದರು.

ಕರ್ನಾಟಕ

ಧಾರವಾಡ

ಶ್ರೀ ಗೋವಿಂದಗಿರಿ ಎಂಬ ೨೭ ವರ್ಷದ ತರುಣ ಯೋಗಿಗಳು ಹುಬ್ಬಳ್ಳಿಯ ಗುಳಕವ್ವ ನಕೆರೆಯ ಬೈಲಲ್ಲಿ ತಾ ೯ ಕ್ಕೆ ಮುಂಜಾನೆ ಸ್ಥಾನಿಕ ಅಧಿಕಾರಿಗಳ ನೇತೃತ್ವದಲ್ಲಿ ಸಮಾಧಿಯಲ್ಲಿ ಕುಳಿತು ೫ ದಿನಗಳ ನಂತರ ತಾ ೧೪ ಮುಂಜಾನೆ ಸಮಾಧಿಯಿಂದೆದ್ದರು. ಅವರು ಎಚ್ಚತ್ತಾಗ ಆಯಾಸದ ಚಿನ್ಹವಿರಲಿಲ್ಲ. ಆ ಕಾಲಕ್ಕೆ ಸ್ಥಾನಿಕ ಅಧಿಕಾರಿಗಳು ಡಾಕ್ಟರರು ಇದ್ದರಲ್ಲದೆ ದರ್ಶನಾರ್ಥಿಗಳಾಗಿ ಸಾವಿರಾರು ಜನ ನೆರೆದಿತ್ತು.

೫೦ ರೂ ಲಂಚ ಕೊಡಬಂದ ವಜೀರ ದಾವಲ ಎಂಬವನ ಮೇಲೆ ಗದಗಿನ ಫೌಜದಾರರು ಖಟ್ಲೆ ಹಾಕಿದ್ದರು. ಇದರ ವಿಚಾರಣೆಯಾಗಿ ದಾವಲನಿಗೆ ೨೦೦ ರೂ ದಂಡ ಇಲ್ಲವೆ ೨ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಗುಮಾಸ್ತ ಕಾಯದೆ ಭಂಗಮಾಡಿದ ಬಗ್ಗೆ ಹುಬ್ಬಳ್ಳಿ ಗಣೇಶ ಪೇಟೆಯ ಗುಲ್ಜಾರ ಹಾಟೇಲದ ಬಿ. ಸಯ್ಯದಮಹಮ್ಮದನಿಗೆ ೨೦ ರೂ ದಂಡ, ಗವಿಓಣಿಯ ಶ್ರೀಕೃಷ್ಣ ಕೇಫೆಯ ಮಾಲಕ ಬಿ. ಸಂಜೀವಶೆಟ್ಟಿ ಎಂಬವರಿಗೆ ೩೦ ರೂ ದಂಡ ವಿಧಿಸಲಾಗಿದೆ. ನೌಕರರ ಹಾಜರಿ ದಿನಾಲು ತುಂಬಲಿಲ್ಲವೆಂದು ಸಂತೋಷಭುವನದ ಸುಬ್ರಾವ ನಾಗಪ್ಪ ಶೆಟ್ಟಿಗೆ ೧೫ ರೂ ದಂಡ ವಿಧಿಸಲಾಗಿದೆ.

ಧಾರವಾಡದ ಕಿರಾಣಿ ವ್ಯಾಪಾರಸ್ಥರ ಸಂಘದವರು ಮುಂಬಯಿ ಸರಕಾರದ ಲೋಕೋಪಯೋಗಿ ಖಾತೆಗೆ ಪತ್ರಬರೆದು ಜೋಗ ಯೋಜನೆಯಿಂದ ದೊರಕುವ ಅಗ್ಗದರದ ವಿದ್ಯುತ್ಪೂರೈಕೆಯನ್ನು ಧಾರವಾಡಕ್ಕೂ ಕೊಡಬೇಕೆಂದು ಬಿನ್ನವಿಸಿದ್ದಾರೆ.

ಹುಬ್ಬಳ್ಳಿಯ ಸಬರ್ಬನ ಪೋಲೀಸರು ರಾಜಾಸಾಬ ಫಕ್ರುಸಾಬ ಕಪಾಲಿ ಎಂಬವನನ್ನು ತಾ ೯ ಕ್ಕೆ ಬಂಧಿಸಿದ್ದರು. ಸೆರೆಕುಡಿದು ಸಿಕ್ಕಾಬಟ್ಟೆ ಒದರಾಡಿದ ಬಗ್ಗೆ ೧ ತಿಂಗಳ ಶಿಕ್ಷೆ ವಿಧಿಸಲಾಯಿತು.

ಹಾಲಿನಲ್ಲಿ ನೀರು ಕೂಡಿಸಿ ಮಾರಿದರೆಂದು ಹುಬ್ಬಳ್ಳಿಯ ಸೀತಾರಾಮ ಗವಳಿ ಮತ್ತು ಸೋಮಣ್ಣಾ ಗವಳಿ ಇವರಿಗೆ ತಲಾ ೨೫ ರೂ ದಂಡ ವಿಧಿಸಲಾಗಿದೆ.

ಗದಗಿನ ವ್ಯಾಪಾರಸ್ಥರು ಸಭೆಗೂಡಿ ಹೈದರಾಬಾದ ಸಂಸ್ಥಾನಕ್ಕೆ ಗದಗಿನಿಂದ ಕಳ್ಳತನದಿಂದ ಸರಕು ಸಾಗಿಸತಕ್ಕದ್ದಲ್ಲವೆಂದು ನಿರ್ಣಯಿಸಿದರು.

ಇದೇ ಆಗಸ್ಟ ೧೫ ಕ್ಕೆ ಶ್ರೀಮತಿ ಯಶೋಧರಮ್ಮಾ ದಾಸಪ್ಪ ಅವರು ಅಮರಗೋಳ ರಾಯಪುರಗಳ ಮಧ್ಯ ಶ್ರೀ ಲಕ್ಷ್ಮೀ ಮೆಟಲ್ ವರ್ಕ್ಸ್‌ದ ಆವಾರದಲ್ಲಿ ಕಸ್ತೂರಬಾ ವಿದ್ಯಾಲಯದ ಪ್ರಾರಂಭೋತ್ಸವ ನೆರವೇರಿಸಿದರು. ಒಕ್ಕಲತನ ಮಂತ್ರಿ ಮಾನ್ಯ ಮಲ್ಲನಗೌಡರು ಉದ್ಘಾಟನೆಮಾಡಿದರು. ಖೇರ, ಮಾಳವಣಕರ, ಥಕ್ಕರಬಾಪಾ, ವೈಕುಂಠಲಾಲ ಮೇಥಾ, ಡಾ. ಗಿಲ್ಡರ, ಕೆ. ಸಿ. ರೆಡ್ಡಿ, ಶ್ರೀಮತಿ ಸರೋಜಿನಿನಾಯ್ಡು ಮೊದಲಾದವರ ಸಂದೇಶ ಬಂದಿದ್ದವು.

ಕಾಶಪ್ಪ ಬಾಲಪ್ಪ ಸಿಗನಂ ಎಂಬವನು ಸೆರೆ ಕುಡಿದು ರಸ್ತೆಯಲ್ಲಿ ಗೊಂದಲಹಾಕಿದ್ದಕ್ಕೆ ಹುಬ್ಬಳ್ಳಿಯಲ್ಲಿ ೧೦೦ ರೂ ದಂಡ ಇಲ್ಲವೆ ೭ ದಿನ ಕಠಿಣ ಶಿಕ್ಷೆ ವಿಧಿಸಲಾಯಿತು. ಸೆರೆ ಕುಡಿದು ಇದೇ ಪ್ರಕಾರ ರಸ್ತೆಯ ಮೇಲೆ ಗೊಂದಲಹಾಕಿದ್ದಕ್ಕೆ ಸತ್ಯಪ್ಪ ನಾಗಪ್ಪ ಕೊರವರ ಎಂಬವನಿಗೂ ೧ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ನಾಲ್ಕುವರ್ಷಗಳನಂತರ ಹುಬ್ಬಳ್ಳಿಯ ನಗರ ಸಭೆಯ ಚುನಾವಣೆ ಸಮೀಪಿಸಿದೆ. ಒಟ್ಟು ೮೦ ಸ್ಥಳಗಳಿಗೆ ೧೦೭ ಉಮೇದವಾರರು ನಿಂತಿದ್ದಾರೆ. ಧನಬಲದಿಂದ, ಪಕ್ಷಬಲದಿಂದ, ಜಾತಿಯಬಲದಿಂದ ಹೀಗೆ ಬಗೆಬಗೆಯ ಉಮೇದವಾರರು ಮುಂದೆಬಂದಿದ್ದಾರೆ. ಸವಿಮಾತುಗಳಿಂದಲೂ ವಚನಗಳಿಂದಲೂ ಜನರನ್ನು ಮರುಳುಮಾಡುವದೂ ನಡೆದಿದೆ. ಜಾತಿ, ಮತ, ಪಂಥ, ಪಕ್ಷ ಇವುಗಳಿಂದ ಅತೀತರಾದ ನಾಗರಿಕರ ಹಿತವನ್ನೇ ಗುರಿಯಾಗಿಟ್ಟುಕೊಂಡ ನಿಸ್ವಾರ್ಥರಾದ ಸಾರ್ವಜನಿಕ ಸೇವಾಬುದ್ಧಿಯುಳ್ಳವರನ್ನೇ ಆರಿಸಬೇಕೆಂದು ನಗರಸಭಾ ಚುನಾವಣೆಮಂಡಲ ಪ್ರಯತ್ನಿಸುತ್ತಿದೆ.

ಬೆಳಗಾವಿ

ಬೆಳಗಾವಿಯ ಮುಸಲ್ಮಾನರು ಈದ ದಿನ ಸಭೆ ಸೇರಿ ಹಿಂದುಸ್ತಾನ ಒಕ್ಕೂಟ ಸರಕಾರಕ್ಕೆ ನಿಷ್ಠರಾಗಿರುವ ಗೊತ್ತುವಳಿ ಮಾಡಿದರು. ಹೈದರಾಬಾದವು ಹಿಂದುಸ್ತಾನದಲ್ಲಿ ಸೇರ್ಪಡೆ ಹೊಂದಬೇಕೆಂದೂ ಯುದ್ಧ ಪ್ರಸಂಗ ಬಂದರೆ ಬೆಳಗಾವಿ ಜಿಲ್ಹೆಯ ಮುಸಲ್ಮಾನರು ಹಿಂದುಸ್ತಾನಕ್ಕೆ ಸರ್ವವಿಧ ಸಹಾಯ ನೀಡುವರೆಂದೂ ನಿರ್ಣಯ ಕೈಕೊಂಡರು.

ಅಬಕಾರಿ ಇನಸ್ಪೆಕ್ಟರರಾದ ಶ್ರೀ ಮುಸಾಳೆ ಅವರು ಸುಮಾರು ೬೦೦ ಗ್ಯಾಲನ್ ಕಳ್ಳತನದಿಂದ ತಯಾರಾದ ಭಟ್ಟಿಯ ಸೆರೆ ಜಪ್ತ ಮಾಡಿದರೆಂದು ಅಥಣಿಯಿಂದ ಸುದ್ದಿ ಬಂದಿದೆ.

ಬೈಲಹೊಂಗಲ ಗ್ರಾಮರಕ್ಷಕ ದಳಕ್ಕೆ ೧೦೫ ತರುಣರು ಹೆಸರು ಕೊಟ್ಟಿದ್ದಾರೆ.

ಹುಕ್ಕೇರಿಯ ಮುರಲೀಧರ ಪತ್ತಾರ ಮತ್ತು ಬಾಳಕೃಷ್ಣ ಪತ್ತಾರ ಎಂಬ ಇಬ್ಬರು ಮೋಟರ ಸಾಯಕಲ ಮೇಲೆ ಬಾಗೇವಾಡಿ ಸಂತೆಗೆ ಹೋಗಿ ಸಂಜೆಗೆ ತಿರುಗಿ ಬರುವಾಗ ದಾರಿಯಲ್ಲಿ ದರೋಡೆಗಾರರು ಗುಂಡು ಹಾರಿಸಿ ಬಾಳಕೃಷ್ಣನನ್ನು ಗಾಯಗೊಳಿಸಿದರು. ಮುರಲೀಧರನು ಅಂಜಿ ಓಡಿ ಹೋಗುತ್ತಿರಲು ಕೊಡಲಿಯಿಂದ ಅವನ ರುಂಡ ಕತ್ತರಿಸಿ ಅವನ ಹತ್ತರಿದ್ದ ೬೦೦ ರೂ. ಮತ್ತು ೧೬೦೦ ರೂ. ಬೆಲೆಯ ಬಂಗಾರ ತೆಗೆದುಕೊಂಡು ಪಲಾಯನ ಮಾಡಿದರು. ಬಾಳಕೃಷ್ಣನು ಆಸ್ಪತ್ರಿಯಲ್ಲಿ ಉಪಚಾರ ಹೊಂದುತ್ತಿದ್ದಾನೆ.

ವಿಜಾಪುರ

ಮುದ್ದೇಬಿಹಾಳ ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಮುಸಲ್ಮಾನರು ಈದ ದಿನ ಸಭೆಗೂಡಿ ಹೈದರಾಬಾದ ನಿಜಾಮರ ಧೋರಣವನ್ನೂ ಆಡಳಿತವನ್ನೂ ರಜಾಕಾರರ ಹಾವಳಿಯನ್ನೂ ಖಂಡಿಸಿ ಹೈದರಾಬಾದವು ಹಿಂದುಸ್ತಾನದಲ್ಲಿ ಸೇರ್ಪಡೆ ಹೊಂದಬೇಕೆಂದೂ ಹೊಣೆಗಾರ ಸರಕಾರ ಸ್ಥಾಪಿಸಬೇಕೆಂದೂ ಗೊತ್ತುವಳಿ ಮಾಡಿದರು. ಹಿಂದೀ ಮುಸಲ್ಮಾನರು ಹಿಂದುಸ್ತಾನ ಸರಕಾರಕ್ಕೆ ನಿಷ್ಠೆ ತೋರುವ ಗೊತ್ತುವಳಿಯೂ ಆಯಿತು.

ಬಾಗಲಕೋಟೆಯ ವಿದ್ಯುತ್ ಕಂಪನಿ ಮತ್ತು ಮುನಸಿಪಾಲಟಿಯ ನಡುವಿನ ವಾದವು ವಿಕೋಪಕ್ಕೆ ಹೋಗಿ ಇಬ್ಬಣವನ್ನೂ ಕೋರ್ಟಿನ ಕಟ್ಟೆಗೆ ಎಳೆದಿದೆ. ಗಂಡಹೆಂಡರ ನಡುವೆ ಕೂಸು ಗಾಸಿ ಎಂಬಂತೆ ನಾಗರಿಕರು ಕತ್ತಲೆಯಲ್ಲಿ ಕೂಡಬೇಕಾಗಿದೆ.

ಮೈಸೂರು--ಬೆಂಗಳೂರು

ಶಿವಮೊಗ್ಗಾ ನಗರ ಮತ್ತು ಶಿವಮೊಗ್ಗಾ ಜಿಲ್ಹೆಯ ಪಶ್ಚಿಮ ಭಾಗದಲ್ಲಿ ತಾ. ೧೦, ೧೧ ವಿಪರೀತ ಮಳೆಯಾಗಿ ತುಂಗಭದ್ರಾ ನದಿಗೆ ೬೩ ಫೂಟಿನ ಭಾರಿ ಮಹಾಪೂರ ಬಂದು ಶಿವಮೊಗ್ಗೆ-ತೀರ್ಥಹಳ್ಳಿ ದಾರಿ ಕಟ್ಟಾಗಿತ್ತಾಗಿ ತಿಳಿಯುತ್ತದೆ.

ತಾ. ೧೨ ಕ್ಕೆ ಹಿಂದುಸ್ತಾನದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕುವರರು ಮೈಸೂರಿಗೆ ಆಗಮಿಸಿ ಪೂರ್ವ ರಾಷ್ಟ್ರಗಳ ಆರೋಗ್ಯ ಕೇಂದ್ರಕ್ಕಾಗಿ ಆರಿಸಲ್ಪಟ್ಟ ಮೈಸೂರಿನ ಚೆಲುವಾಂಬಾ ಅರಮನೆಗೂ ಆಯುರ್ವೇದ ಕಾಲೇಜು, ಕೃಷ್ಣ ರಾಜೇಂದ್ರ ಆಸ್ಪತ್ರೆ ಮೊದಲಾದವುಗಳಿಗೂ ಭೆಟ್ಟಿಕೊಟ್ಟರು.

ಮೈಸೂರ ಸರಕಾರವು ೫ ಮಂದಿ ಕಮ್ಯುನಿಸ್ಟರನ್ನು ಗಡೀಪಾರು ಮಾಡಿ ಮಲಬಾರಕ್ಕೆ ಕಳಿಸಿದೆ.

ಶ್ರೀರಂಗಪಟ್ಟಣದ ಶ್ರೀ ರಂಗನಾಥ ಸ್ವಾಮಿಯ ದೇವಾಲಯಕ್ಕೆ ಲಾರ್ಡ ಮತ್ತು ಲೇಡಿ ಮೌಂಟ ಬ್ಯಾಟನ್ನರು ತಾ ೨೩ ಎಪ್ರಿಲದ ದಿನ ಭೆಟ್ಟಿಕೊಟ್ಟು ಹೋದಮೇಲೆ ಕೆಲ ಅರ್ಚಕರು ದೇವಾಲಯ ಅಪವಿತ್ರವಾಯಿತೆಂದು ಗರ್ಭಗುಡಿಯ ಬಾಗಿಲು ಮುಚ್ಚಿದ್ದರು. ಮೈಸೂರು ಸರಕಾರವು ಇದರ ವಿಚಾರಣೆ ನಡೆಸಿ ಅರ್ಚಕರದು ಅಧಿಕ ಪ್ರಸಂಗವೆಂದೂ ಅವರನ್ನು ಕಿತ್ತೊಗೆಯಬೇಕೆಂದೂ ಅಪ್ಪಣೆ ವಿಧಿಸಿದೆ.

ಮೈಸೂರಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ಸಾರ್ವಜನಿಕ ಸಭೆ ನೆರೆದಾಗ ಮುಖಂಡರ ಭಾಷಣ ಕಾಲಕ್ಕೆ ಜನರು, ನಿಮ್ಮ ರಾಜ್ಯದಲ್ಲಿ ರೂಪಾಯಕ್ಕೆ ಅಕ್ಕಿ ಎಷ್ಟು ಸೇರು, ರಾಗಿ ಎಷ್ಟು ಸೇರು ಮಾಡಿದ್ದೀರಿ ಎಂದು, ನೀವು ಮಜಾಮಾಡುತ್ತ ನಮಗೆ ಉಪದೇಶ ಮಾಡುತ್ತೀರಿ ಎಂದು ಗಲಾಟೆ ಮಾಡಿದರು. ಕಲ್ಲುಗಳ ತೂರಾಟವೂ ಆಯ್ತೆಂದು ತಿಳಿಯುತ್ತದೆ.

ಬಳ್ಳಾರಿ

ದಿ. ೭ ಕ್ಕೆ ಸೂರಾದು ಮುಸ್ಲಿಂ ಬಾಂಧವರು ಕೂಡ್ಲಿಗಿ ತಾಲ್ಲೂ ಕಿನಲ್ಲಿ ಜನಾಬ್ ಅಬ್ದುಲ್ ಕಾದರ್‍ಸಾಹೇಬರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ "ಶ್ರೀಮಾ ಕಲಾಮ್ ಸಂಸ್ಥೆ", ಸ್ಥಾಪಿಸಿದರು. ಹಿಂದೂ ಮುಸ್ಲೀಂ ಐಕ್ಯವೇ ನಮ್ಮ ಧ್ಯೇಯವೆಂದೂ, ಹೈದರಾಬಾದಿನ ಅತ್ಯಾಚಾರಗಳನ್ನು ಒಮ್ಮತದಿಂದ ಖಂಡಿಸುತ್ತಾ ಸಮಯಬಂದರೆ, ತೀವ್ರ ಪ್ರತಿಭಟಿಸಲು ತಯಾರಾಗಬೇಕೆಂದು ನಿರ್ಣಯಗಳನ್ನು ಗೊತ್ತು ಮಾಡಿದರು.

ದಕ್ಷಿಣ ಕನ್ನಡ

ಪೆರೂರು ಗ್ರಾಮದಲ್ಲಿಯೂ ಚಂದ್ರಗಿರಿ, ಕಲ್ಯಾಣಪುರ, ಮಾಬುಕಳಗಳಲ್ಲಿಯೂ ತಾ ೬ ರಿಂದ ವಿಪರೀತ ಮಳೆಯಾಗಿ ಬಹಳ ನಷ್ಟವಾಯಿತು. ನೆರೆಹಾವಳಿಯಿಂದ ಅನೇಕಮನೆಗಳು ದನಕರುಗಳು ನಷ್ಟವಾದವಲ್ಲದೆ ಪೈರುಗಳೂ ತೆಂಗಿನಕಾಯಿ ಕಬ್ಬು ನಾಶವಾಗಿವೆ.

ಕನ್ನಡ ಸಂಸ್ಥಾನ

ವಿಜಾಪುರ ಜಿಲ್ಹಾ ಕಲೆಕ್ಟರರು ಒಂದು ಸಂದರ್ಶನದಲ್ಲಿ, ರಾಮದುರ್ಗ ಸಂಸ್ಥಾನದಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ೨೨೫ ಗಿಡಗಳನ್ನು ಹಚ್ಚಲಾಗುವದೆಂದು ಹೇಳಿದರು. ರಾಮದುರ್ಗವು ತಾಲೂಕಾ ಸ್ಥಳವಾಗುವ ಬಗ್ಗೆ ಮಾತೆತ್ತಿ, ರಾಮದುರ್ಗದ ೩೭ ಹಳ್ಳಿಗಳು ಬದಾಮಿ ತಾಲೂಕಿನ ೫೫ ಹಳ್ಳಿಗಳು ಸೇರಿ ಹೊಸ ತಾಲೂಕು ನಿರ್ಮಾಣವಾಗಿ ಅದರ ಮುಖ್ಯ ಸ್ಥಳವು ರಾಮದುರ್ಗವಾಗುವದೆಂದೂ ಈ ಸಂಸ್ಥಾನದ ೭ ಹಳ್ಳಿಗಳು ಧಾರವಾಡ ಜಿಲ್ಹೆಯಲ್ಲಿ ೧ ಹಳ್ಳಿ ಬೆಳಗಾವಿ ಜಿಲ್ಹೆಯಲ್ಲಿ ಸೇರಿ ಹೋಗಿವೆ ಎಂದೂ ತಿಳಿಸಿದರು.

ಹರಪನಹಳ್ಳಿ ತಾ. ಕಾಮ್ಮತ್ತ ಹಳ್ಳಿಯಲ್ಲಿ ಸ್ವಾತಂತ್ರ್ಯೋತ್ಸವ ನಡೆದಿತು.

ಮುಧೋಳ ತಾ. ಚನ್ನಾಳಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ಬೆಳಗಿನಿಂದ ಸಂಜೆಯ ವರೆಗೆ ಬಗೆಬಗೆಯ ಕಾರ್ಯಕ್ರಮಗಳಾದವು. ಸಂಜೆಗೆ ಶ್ರೀಕೃಷ್ಣಾಚಾರ್ಯ ಪೂರ●ಲಿಯವರ ಅಧ್ಯಕ್ಷತೆಯಲ್ಲಿ ಸಭೆ ನೆರೆದಿತು.

ಚಂದಾದಾರರಲ್ಲಿ ವಿನಂತಿ

ಯಾದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ(ಚಂದಾಹಣ ಮುಂಗಡ)

೧ ವರ್ಷ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೭ ಆಣೆ ಹೆಚ್ಚಿಗೆ ಬೀಳುವದು.

ಸ್ವಾತಂತ್ರ್ಯೋತ್ಸವ

ಧಾರವಾಡ

ಧಾರವಾಡ ಹುಬ್ಬಳ್ಳಿಗಳಲ್ಲಿ ಸ್ವಾತಂತ್ರ್ಯೋತ್ಸವವು ವೈಭವದಿಂದ ನಡೆಯಿತು. ಮನೆ ಅಂಗಡಿ ಬೀದಿ ಎಲ್ಲೆಲ್ಲಿಯೂ ತಳಿರು ತೋರಣ ಕಟ್ಟಲಾಗಿತ್ತು. ಪ್ರಭಾತಫೇರಿ ಸಭೆ ಧ್ವಜವಂದನಾದಿ ಕಾರ್ಯಗಳೂ ನಡೆದವು. ಹುಬ್ಬಳ್ಳಿ ನಗರ ಸಭೆಯ ಅಟ್ಟದ ಮೇಲೆ ಸಂಜೆಗೆ ಸಾರ್ವಜನಿಕ ಸಭೆ ನೆರೆದು ಮಾನ್ಯ ಮಂತ್ರಿ ಮಲ್ಲನಗೌಡರು ಮಾತನಾಡಿದರು. ಧಾರವಾಡದ ಕಡಪಾ ಬೈಲಲ್ಲಿ ಬೆಳಿಗ್ಗೆ ಮಾನ್ಯ ಮಲ್ಲನಗೌಡರ ನೇತೃತ್ವದಲ್ಲಿ ಧ್ವಜವಂದನೆಯಾಯ್ತು.

ಧಾರವಾಡ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ ಭಾಲಚಂದ್ರ ಘಾಟೀಕರರ ಹಸ್ತದಿಂದ ಆಝಾದ ಉಪವನದಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ನೆನಪಿಗಾಗಿ ಒಂದು ಗಂಧದ ಗಿಡ ನೆಡಲಾಯಿತು. ಸಾಲಿ ರಾಮಚಂದ್ರರಾಯರ ಹಿರಿತನದಲ್ಲಿ ನಗರ ಸಭೆಯ ಅಟ್ಟದಮೇಲೆ ಸೂತ್ರಯಜ್ಞ ನಡೆದಿತು.

ಕೆ. ಈ. ಬೋರ್ಡ ಕಾಲೇಜದವರು ಧಾರವಾಡದಲ್ಲಿ ಹೊಸದಾಗಿ ಕೊಂಡ ಸ್ಥಳದಲ್ಲಿ ಹಾಕಿದ ಮಂಟಪದೊಳಗೆ ಸ್ವಾತಂತ್ರ್ಯೋತ್ಸವ ಜರುಗಿಸಿದರು. ಶ್ರೀ ಹುಕ್ಕೇರಿಕರರು ಅಧ್ಯಕ್ಷರಾಗಿದ್ದರು. ಹುಬ್ಬಳ್ಳಿಯ ಇಂಜನಿಯರಿಂಗ ಕಾಲೇಜದ ಪ್ರಿನ್ಸಿಪಾಲ ಶ್ರೀ ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಧ್ವಜವಂದನ ವೃಕ್ಷಾರೋಪಣ ಮೊದಲಾದ ಕಾರ್ಯಕ್ರಮಗಳಾದವಲ್ಲದೆ ಸೋಮವಾರ ವಿವಿಧ ವಿನೋದಾವಳಿಗಳು ಜರುಗಿದವು.

ಆಗಸ್ಟ ೧೫ ಸ್ವಾತಂತ್ರ್ಯೋತ್ಸವದ ಶುಭದಿನ ಶ್ರೀ. ಹರಿದಾಸರಾವ ಇವರ ಸಂಪಾದಕತ್ವದಲ್ಲಿ 'ಸರ್ವೋದಯ ಸಾಹಿತ್ಯಮಾಲೆ'ಯ ಪ್ರಾರಂಭೋತ್ಸವವು ಹುಬ್ಬಳ್ಳಿಯಲ್ಲಿ ನೆರವೇರಿತು.

ಗದಗ ಬೇಟಗೇರಿ ವ್ಯಾಪಾರಸ್ಥರು ಸ್ವಾತಂತ್ರ್ಯೋತ್ಸವದ ನಿಮಿತ್ತ ಬಡಬಗ್ಗರಿಗೆ ಸಾರ್ವತ್ರಿಕ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು.

ಧಾರವಾಡ ತಾಲೂಕು ಹೆಬ್ಬಳ್ಳಿಯಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ವಾಣಿಕೆಯ ಧ್ವಜವಂದನಾದಿ ಕಾರ್ಯಕ್ರಮಗಳಲ್ಲದೆ ಆನ್ನ ಸಂತರ್ಪಣೆ ಲಿಂಗಾನಂದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದವು. ಸಭೆಯಲ್ಲಿ ೨೫ ಜನರು ಮಹಾತ್ಮರಿಗೆ ಕಟ್ಟಿ ಪಟಗಳನ್ನೇ ಕಾಣಿಕೆ ಕೊಡುವೆವೆಂದು ಪ್ರತಿಜ್ಞೆ ಮಾಡಿದ್ದು ಒಂದು ವೈಶಿಷ್ಟ್ಯ. ಶ್ರೀ. ಕೆ. ವ್ಹಿ. ಹೆಬ್ಬಳ್ಳಿಕರರು ಸೇವಾದಲಕ್ಕೆ ಪ್ರತಿ ವರ್ಷ ೨೫ ರೂ. ಕೊಡುವೆವೆಂದು ವಾಗ್ದಾನ ಮಾಡಿದರಲ್ಲದೆ ಸೇವಾದಲದ ಗೃಹರಕ್ಷಕ ದಲಕ್ಕೆ ಕವಾಯತಿಗಾಗಿ ೧೨ ಎಕರೆ ಜಮೀನು ಕೊಡುವದಾಗಿ ಹೇಳಿದರು.

ಬೆಳಗಾವ

ಹುಕ್ಕೇರಿತಾ. ಘೋಡಗೇರಿಯಲ್ಲಿ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ನಡೆದಿತು. ಪ್ರಭಾತಫೇರಿ, ಧ್ವಜಾರೋಹಣ, ವಿವಿಧ ವಿನೋದಾವಳಿ ನಡೆದವು. ಹಾಸ್ಯಪೂರಿತ ಆಟಗಳಿಗೆ ಅಂದಿನ ಅಧ್ಯಕ್ಷರಾದ ಶ್ರೀ. ಯಲ್ಲಪ್ಪಾ ನಾಯಕರೂ ಶ್ರೀ. ಬ. ಸಿ. ಭೂರಿ ಅವರೂ ಐದೈದು ರೂ. ಹುಡುಗರಿಗೆ ಮೆಚ್ಚು ಕೊಟ್ಟರು. ಶ್ರೀ. ಅಂಬಾಜಿ ಘೋಡಗೇರಿ ಅವರು ಹರಿಜನ ಮಕ್ಕಳಿಗೆ ವಸ್ತ್ರದಾನ ಮಾಡಿದರು. ಅಣ್ಣಾ ಗೂರೀಹಿಯವರ ಭಾಷಣವಾಯ್ತು.

ಬೆಳಗಾವಿ ಲಿಂಗರಾಜ ಕಾಲೇಜದಲ್ಲಿ ಸ್ವಾತಂತ್ರ್ಯೋತ್ಸವ ಜರುಗಿ ಧ್ವಜವಂದನ ಭಾಷಣ ಕಾಲೇಜಿನ ವನಸ್ಪತಿ ಉದ್ಯಾನದಲ್ಲಿ ವೃಕ್ಷಾರೋಪಣ ಮೊದಲಾದವು ನಡೆದವು.

ವಿಜಾಪುರ

ಬಾಗೇವಾಡಿಯ ಶಾಲೆಯ ಹುಡುಗರು ಊರ ಲೈಕರು ಎಲ್ಲರೂ ಸೇರಿ ಪ್ರಭಾತಫೇರಿ ಹೊರಡಿಸಿ ಸ್ವಾತಂತ್ರ್ಯೋತ್ಸವ ನೆರವೇರಿಸಿದರು. ಮುಂಜಾನೆ ಶ್ರೀ ಗಿರಿಧರಗೌಡರು ಬಡ ಹುಡುಗರಿಗೆ ಚೊಪ್ಪಿಗೆ ಪಾಟಿ ಪುಸ್ತಕ ಕೊಟ್ಟರು. ಎಲ್ಲರಿಗೂ ಮಿಠಾಯಿ ಹಂಚಲಾಯಿತು. ಸಾಯಂಕಾಲ ಸಭೆ ಸೇರಿ ವೃಕ್ಷಾರೋಪಣ ದಿಪೋತ್ಸವ ಮಾಡಲಾಯಿತು.

ತೆಕ್ಕಲಕೋಟೆಯಲ್ಲಿಯೂ ಮೆರವಣಿಗೆ ಧ್ವಜವಂದನ ಸಾರ್ವಜನಿಕಸಭೆ ಮೊದಲಾದ ಸ್ವಾತಂತ್ರ್ಯೋತ್ಸವದ ವಿವಿಧ ಕಾರ್ಯಕ್ರಮಗಳಾದವು. ಪಾಠಶಾಲಕ ಕೃಷ್ಣಭಟ್ಟರು ಗಾಂಧಿಯವರ ಬಗ್ಗೆ ಭಾಷಣ ಮಾಡಿದರು.

ಹಿಂದುಸ್ತಾನ

ಮುಂಬಯಿ

ಭಯೋತ್ಪಾದಕ ಸಂಘಟನೆಯು ಸಲುವಾಗಿ ಮುಂಬಯಿಯಲ್ಲಿ ನಿಧಿ ಎತ್ತಲಾಗುತ್ತಿದೆ ಎಂಬ ಸುಳಿವು ಹತ್ತಿ ಗುಪ್ತ ಪೋಲೀಸರು ಎಷ್ಟೋ ಸ್ಥಳಗಳನ್ನು ಝಡತಿ ಮಾಡಿದರು. ಮುಂಬಯಿ ನಿಸ್ಮಾಜ್ ಮತ್ತು ಟ್ರಾಮವೇ ಕಂಪನಿಯ ಮುಸಲ್ಮಾನ ನೌಕರ ಸಂಘದ ಕಾರ್ಯದರ್ಶಿ ಮತ್ತು ಕಾರ್ಯಕಾರೀ ಮಂಡಲದ ಸದಸ್ಯರನ್ನು ಬಂಧಿಸಲಾಗಿದೆ. ಕಿಂಗ್ಸವೇ ಟ್ರಾಮ ಕಂಪನಿಯ ಕಾರ್ಖಾನೆಯ ಕಾವಲುಗಾರರ ಮುಖ್ಯಸ್ಥನಾದ ಶೇಖ ಇಸ್ಮಾಯಿಲ ಮತ್ತು ರಹೀಮ ಖುದ್ದಾ ಅಮೀರ ಬಕ್ಷರು ಈ ನಿಧಿಯ ಮೂಲ ಸ್ತಂಭವೆಂದು ತಿಳಿದು ಬಂದಿದೆ. ನಿಧಿಯನ್ನು ಕೂಡಿಸಿ ಔರಂಗಾಬಾದದಲ್ಲಿಯ ರಜಾಕಾರ ಮುಖಂಡರಿಗೆ ಸ್ವತಃ ಹೋಗಿ ಮುಟ್ಟಿಸುವ ಏರ್ಪಾಟು ಇಟ್ಟಿದ್ದರಂತೆ.

ಮುಂಬಯಿ ನಗರ ಸಭೆಯ ಕಾಂಗ್ರೆಸ ಪಕ್ಷದ ಪುರೋಹಿತ್ಯಕ್ಕೆ ಶ್ರೀ. ಎಸ್. ಕೆ. ಪಾಟೀಲರು ರಾಜೀನಾಮೆ ಕೊಟ್ಟಿದ್ದರಿಂದ ಈ ಸ್ಥಳಕ್ಕೆ ಶ್ರೀ. ಕೆ. ಎಸ್. ನರಿಮನ್ನರು ಆರಿಸಲ್ಪಟ್ಟರು. ಶ್ರೀ ನರಿಮನ್ನರು ಈ ಸಂದರ್ಭದಲ್ಲಿ ಮಾತನಾಡುತ್ತ ಹಿಂದಿನ ತಮ್ಮ ಘೋರ ಗಾದೆ ಬಗ್ಗೆ ವಿಷಾದವನ್ನೂ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸಿದಲ್ಲದೆ ಇನ್ನು ಮೇಲೆ ಕಾಂಗ್ರೆಸ್ಸಿನ ಸೇವೆಯನ್ನು ಪ್ರಶ್ನೆಯಿಂದಲೂ ನಿಷ್ಠೆಯಿಂದಲೂ ಮಾಡುವದಾಗಿ ಹೇಳಿದರು.

ಸುರತದಲ್ಲಿ ಸಿದ್ಧವಾಗುವ ಕಲಾತ್ಮಕ ಜರಿಯಂಚುಗಳಿಗೆ ಹಾಲಿವುಡ್ಡಿನ ತಾರೆಯರು ಮನಸೋತಿದ್ದು ಅಮೇರಿಕೆಯ ಪ್ರಸಿದ್ಧ ಸಂಸ್ಥೆಯೊಂದು ಒಬ್ಬ ವ್ಯಾಪಾರಿಕೆ ಈ ಸರಕನ್ನು ಪೂರೈಸಲು ಕೇಳಿಕೊಂಡಿದೆಯೆಂದು ತಿಳಿಯುತ್ತದೆ.

ಮದ್ರಾಸ

ಹಿಂದುಸ್ತಾನ ಸರಕಾರದವರು ಕಬ್ಬಿಣ ಮತ್ತು ಉಕ್ಕಿನ ಎರಡು ಕಾರಖಾನೆಗಳನ್ನು ಸ್ಥಾಪಿಸಬೇಕೆಂದಿದ್ದು ತೊಂಡೂರ ಹತ್ತರ ಒಂದನ್ನು ಸ್ಥಾಪಿಸಬೇಕೆಂದು ಇದಕ್ಕಾಗಿ ನೇಮಿಸಲಾದ ಮೂವರು ಅಮೇರಿಕನ ತಜ್ಞ ಸಮಿತಿಯು ಸಲಹೆ ಕೊಟ್ಟಿರುವದಾಗಿ ತಿಳಿಯುತ್ತದೆ.

ತಾ. ೧೧ ಕ್ಕೆ ಮದ್ರಾಸ ವಿಶ್ವವಿದ್ಯಾಲಯದ ಸಿಂಡಿಕೇಟಿನಲ್ಲಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ 'ಡಾಕ್ಟರ ಆಫ್ ಲಾ' ಎಂಬ ಪದವಿಯನ್ನು ಕೊಡತಕ್ಕದ್ದೆಂದು ನಿರ್ಣಯಿಸಲಾಯಿತು.

ವ್ಹ್ರೋಣಾಚಲಂ ಸಿಕಂದರಾಬಾದ ನಿಜಾಮ ಸ್ಟೇಟ ರೇಲ್ವೆಯಲ್ಲಿ ವ್ಹ್ರೋಣಾಚಲಂದಿಂದ ಕನ್ನೂರವರೆಗೆ ೩೪ ಮೈಲು ರೇಲ್ವೆಯು ಹಿಂದುಸ್ತಾನದ ಒಡೆತನದಲ್ಲಿದೆ. ಅನುಕೂಲತೆಗಾಗಿ ಇದರ ಆಡಳಿತವನ್ನು ನಿಜಾಮರಿಗೆ ಒಪ್ಪಿಸಲಾಗಿತ್ತು. ಆದರೆ ನಿಜಾಮ ರೇಲ್ವೆ ಅಧಿಕಾರಿಗಳು ಈ ಪ್ರದೇಶದ ಸಾರಿಗೆ ಸಂಪರ್ಕವನ್ನು ತಪ್ಪಿಸುವ ಸಂಚು ನಡೆಸಿದ್ದನ್ನು ಹಿಂದುಸ್ತಾನದ ವಿಶೇಷ ಗುಪ್ತಚಾರರು ಗೊತ್ತುಹಚ್ಚಿದ್ದಾಗಿಯೂ ದ್ರೋಣಾಚಲಂ ಕನ್ನೂರಲ ನಡುವಿನ ಸ್ಟೇಶನ್ನುಗಳಲ್ಲಿದ್ದ ಟೆಲಿಫೋನ ಮತ್ತು ರೇಲ್ವೆ ಸಿಗ್ನಲ್ ಉಪಕರಣಗಳನ್ನು ಕಿತ್ತುಕೊಂಡು ಹೋಗುತ್ತಿರುವದನ್ನು ತಡೆದು ಹಿಂದೀ ಪೋಲೀಸರು ಅವನ್ನೆಲ್ಲ ವಶಪಡಿಸಿಕೊಂಡರೆಂದೂ ತಿಳಿಯುತ್ತದೆ.

ಮದ್ರಾಸ ಗವ್ಹರ್ನರರ ಸ್ಥಳಕ್ಕೆ ಭಾವನಗರದ ಮಹಾರಾಜರಾದ ಸರ್ ಕೃಷ್ಣಕುಮಾರ ಸಿಂಗಜಿ, ಭಾವಸಿಂಗಜಿ ಗೋಹಿಲ ಇವರನ್ನು ನೇಮಿಸಲಾಗಿದೆಯೆಂದು ಹಿಂದುಸ್ತಾನ ಸರಕಾರದ ಪ್ರಕಟನೆ ಹೊರಟಿದೆ. ಇವರು ಹ್ಯಾರೋದಲ್ಲಿ ಶಿಕ್ಷಣ ಪಡೆದಿದ್ದು ೧೯೩೧ ರಿಂದ ಭಾವನಗರ ಸಂಸ್ಥಾನದ ಆಡಳಿತವನ್ನೆಲ್ಲ ಇವರೇ ವಹಿಸಿಕೊಂಡಿದ್ದರು.

ಪಶ್ಚಿಮ ಬಂಗಾಲ

ಪಶ್ಚಿಮ ಬಂಗಾಲದ ಮುರ್ಶಿದಾಬಾದ ಜಿಲ್ಲೆಯ ಕೆಲವು ಭಾಗವನ್ನು ಪೂರ್ವ ಪಾಕಿಸ್ತಾನದ ರಾಜಶಾಹಿ ಜಿಲ್ಲೆಯ ಸಶಸ್ತ್ರ ಪೋಲೀಸರು ಆಕ್ರಮಿಸಿದ್ದಾರೆಂದೂ ಈ ಆಕ್ರಮಣವನ್ನು ತಡೆಗಟ್ಟಲು ಹಿಂದುಸ್ತಾನದ ಪೋಲೀಸರನ್ನು ಕಳಿಸಲಾಗಿದೆಯೆಂದೂ ತಿಳಿಯುತ್ತದೆ.

ಬಂಗಾಲದ ಹಿಂದಿನ ಮುಖ್ಯ ಮಂತ್ರಿಗಳಾದ ಎಚ್. ಎಸ್. ಸುಹ್ರವರ್ದಿಯವರು

ಹೊಸದಿಲ್ಲಿ

ಹಿಂದುಸ್ತಾನ ಸರಕಾರವು ಕಾಶ್ಮೀರಕ್ಕೆ ೨॥ ರೂ. ಬಡ್ಡಿ ದರದಂತೆ ೨ ಕೋಟಿಯ ಸಾಲ ಕೊಟ್ಟದ್ದು ಈ ಬಗ್ಗೆ ಕಾಶ್ಮೀರ ಸರಕಾರವು ೩ ಕೋಟಿ ೫ ಲಕ್ಷ ರೂ.ಗಳ ಪ್ರಾಮಿಸರಿ ನೋಟುಗಳನ್ನು ಅಡವಾಗಿ ಕೊಟ್ಟದೆಯೆಂದು ತಿಳಿಯುತ್ತದೆ.

೧೯೪೮ ಜನೆವರಿ ೧ ರಿಂದ ಜುಲೈ ೩೧ರ ವರೆಗೆ ಹೊಸದಿಲ್ಲಿ ಮತ್ತು ಹಳೆ ದಿಲ್ಲಿಯಲ್ಲಿ ಕೂಡಿ ೪೩ ಕೊಲೆಗಳಾಗಿವೆಯೆಂದು ಸರದಾರ ಪಟೇಲರು ಹಿರಿಯೋಲಗದಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಮುಸ್ಲಿಂಲೀಗು ದೇಶವಿಭಜನೆಯ ಪೂರ್ವದ ಸಂಸ್ಥೆಯಾದ್ದರಿಂದ ಅದು ಕ್ರಮಬದ್ಧವಲ್ಲವೆಂದು ಹೇಳಿ, ಹಿಂದೀ ಘಟನಾ ಸಮಿತಿಯ ಸದಸ್ಯರಾದ ಶ್ರೀ ನಾಝಿರುದ್ದೀನರು ಮಧ್ಯಪ್ರಾಂತ ಮುಸ್ಲಿಂಲೀಗ ಅಧ್ಯಕ್ಷರಿಗೆ ರಾಜೀನಾಮೆಯನ್ನೊಪ್ಪಿಸಿ ಬರೆದ ಪತ್ರದಲ್ಲಿ ಹೇಳಿದ್ದಾರೆಂದು ತಿಳಿಯುತ್ತದೆ.

ನಾನಜದ ಸಂಬಂಧದಲ್ಲಿ ಹಿಂದುಸ್ತಾನ ಸರಕಾರವು ಹೊರಡಿಸಿದ ಹೇಳಿಕೆಯು ಸರಿಯೆಂದು ನಿಜಾಮ ಸರಕಾರದ ಪರವಾಗಿ ಅಂಕಿತವನ್ನಿತ್ತ ಕಾರಣಕ್ಕೆ ಕರ್ನಲ ಪೆಸ್ಸನ್ನರನ್ನು ನಿಜಾಮ ಸರಕಾರವು ಕೆಲಸದಿಂದ ಕಿತ್ತೊಗೆಯಲಿದೆಯೆಂದು ತಿಳಿಯುತ್ತದೆ. ಆಯಕಟ್ಟಿನ ಸ್ಥಳಗಳಲ್ಲಿ ತೋಫುಗಳನ್ನು ಇಡಲು ಇವರನ್ನು ನೇಮಿಸಲಾಗಿತ್ತು.

ದಿಲ್ಲಿಯ ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯ ಮೇಲೆ ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಸ್ವಾತಂತ್ರ್ಯದ ಪ್ರಥಮ ವರ್ಧಂತಿಯ ನಿಮಿತ್ತ ತಾ ೧೫ ಕ್ಕೆ ಅಶೋಕ ಚಕ್ರಾಂಕಿತ ತ್ರಿವರ್ಣಧ್ವಜ ಹಾರಿಸಿದರು. ಈ ಸಮಾರಂಭಕ್ಕೆ ೨ ಲಕ್ಷಕ್ಕೆ ಮಿಕ್ಕಿ ಜನ ನೆರೆದಿದ್ದರು.

ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯ ಮೂಲಕವೇ ನಡೆಯಬೇಕೆನ್ನುವ ತತ್ವವನ್ನು ಹಿಂದುಸ್ತಾನ ಸರಕಾರವು ಅಂಗೀಕರಿಸಿದ್ದು ಈ ಬಗ್ಗೆ ಸರಕಾರದ ಧೋರಣೆ ವಿವರಿಸುವ ಗೊತ್ತುವಳಿಯನ್ನು ತಾ ೩೪ ರ ಗೆಝೆಟಿನಲ್ಲಿ ಪ್ರಕಟಿಸಲಾಗಿದೆ.

ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಎಲ್ಲ ಪ್ರಾಂತಿಕ ಮುಖ್ಯಮಂತ್ರಿಗಳನ್ನುದ್ದೇಶಿಸಿ ಒಂದು ಪ್ರಕಟನೆ ಹೊರಡಿಸಿ, ಸಾರ್ವಜನಿಕರ ನ್ಯಾಯಬದ್ಧ ದೂರುಗಳ ವಿಚಾರಣೆಯಾಗುವ ಉದ್ದೇಶದಿಂದ ಪ್ರಾಂತಿಕ ಸರಕಾರ ಮತ್ತು ಪ್ರಾಂತಿಕ ಕಾಂಗ್ರೆಸ ಸಮಿತಿಗಳ ನಡುವೆ ಸಂಪರ್ಕವನ್ನಿಟ್ಟುಕೊಳ್ಳಬೇಕೆಂದು ಸೂಚಿಸಿದ್ದಾರೆ.

ಕಾಶ್ಮೀರ ಮುಸ್ಲಿಂ ಪರಿಷತ್ತಿನ ಪ್ರಮುಖ ಮುಂದಾಳುಗಳಾದ ಮೌಲವಿ ಅಬ್ದುಲ ಶಹಾ ಅವರು ಆ ಸಂಸ್ಥೆಗೆ ರಾಜೀನಾಮೆ ಕೊಟ್ಟು ರಾಷ್ಟ್ರೀಯ ಪರಿಷತ್ತನ್ನು ಸೇರಿ, ಒಂದು ಪ್ರಕಟನೆ ಹೊರಡಿಸಿ, ಇಸ್ಲಾಮದ ಹೆಸರಿನಲ್ಲಿ ಹೀನ ಕೃತ್ಯಗಳನ್ನು ಮಾಡುವವರ ಸಂಗ ಬೇಡವೆಂದೂ ಕಾಶ್ಮೀರದಲ್ಲಿ ದಾಳಿಗಾರರಿಗೆ ಸಹಾಯ ಮಾಡುತ್ತಿರುವವರೆಲ್ಲರೂ ದೇಶದ್ರೋಹಿಗಳೆಂದು ತಮ್ಮ ಮನವರಿಕೆಯಾಗಿದೆಯೆಂದೂ ಹೇಳಿದ್ದಾರೆ.

ಭಾಷಾವಾರ ಪ್ರಾಂತರಚನಾ ಸಮಿತಿಯವರು ಹೊರಡಿಸಿದ ಪ್ರಶ್ನಾವಲಿಗೆ ಉತ್ತರಗಳನ್ನು ಕಳಿಸುವ ಅವಧಿಯನ್ನು ಅಗಸ್ಟ ೩೧ರ ವರೆಗೆ ಬೆಳೆಸಲಾಗಿದೆಯೆಂದು ಘಟನಾ ಸಮಿತಿಯ ಕಚೇರಿಯವರು ಪ್ರಸಿದ್ಧಿಸಿದ್ದಾರೆ.

"ಡಳಿತೆಯ ವಿಷಯದಲ್ಲಿ' ಮತಭೇದ ಹುಟ್ಟಿದ್ದರಿಂದ ಹೈದರಾಬಾದದ ಮುಖ್ಯ ಸೇನಾಪತಿಯ ಪದಕ್ಕೆ ನಿಜಾಮರ ಜೇಷ್ಠಪುತ್ರರಾದ ವರ್‍ಹಾಡದ ಯುವರಾಜರೂ ಹೈದರಾಬಾದ ಅಭಿವೃದ್ಧಿ ಮಂಡಳದ ಅಧ್ಯಕ್ಷಪದಕ್ಕೆ ನಿಜಾಮರ ದ್ವಿತೀಯ ಪುತ್ರರಾದ ಮೊಅಜ್ಜಮಜಾ ಬಹದ್ದೂರರೂ ರಾಜೀನಾಮೆ ಕೊಟ್ಟದ್ದಾರೆಂದು ತಿಳಿಯುತ್ತದೆ.

ಹಿಂದುಸ್ತಾನ ಸಹಕಾರಿ ಸಂಘವನ್ನು ವಂಚಿಸಿದರೆಂದು ಕಲಕತ್ತಾ ಹಾಯಕೋರ್ಟಿನಲ್ಲಿ ದಾವೆ ಹರಲಾಗಿತ್ತೆಂದೂ ಇದರಲ್ಲಿ ಸಹಕಾರಿ ಸಂಘಕ್ಕೆ ಅನುಕೂಲ ತೀರ್ಪುಕೊಡಲಾಗಿದೆಯೆಂದೂ ತಿಳಿಯುತ್ತದೆ.

ಜನರಲ್ ಮೋಹನಸಿಂಗರು ದೇಶ ಸೇವಕ ಸೇನೆಯ ಸಹಾಯದಿಂದ ಅಧಿಕಾರಕ್ಕೆ ಬರಲು ಯತ್ನಿಸುತ್ತಿದ್ದಾರೆಂದು ಪೂರ್ವ ಪಂಜಾಬ ಸರಕಾರವು ಆರೋಪ ಹೊರಿಸಿದ್ದನ್ನು ಪ್ರತಿಭಟಿಸಿ ಸುಭಾಸ ಸೇನೆಯ ಕರ್ನಲ ಧಿಲನ್ನರು ತಾ ೧೨ ರಿಂದ ಆಮರಣ ಉಪವಾಸ ಪ್ರಾರಂಭಿಸಿದ್ದಾರೆ. ಪೂರ್ವ ಪಂಜಾಬ ಸರಕಾರವು ಈ ಆರೋಪ ಹೊರಿಸಿದ್ದಕ್ಕೆ ಒಂದು ವಿಷಾದವನ್ನಾದರೂ ವ್ಯಕ್ತಪಡಿಸಬೇಕು ಇಲ್ಲವೆ ಕೇಂದ್ರ ಸರಕಾರವು ಈ ಬಗ್ಗೆ ನಿಷ್ಪಕ್ಷಪಾತ ವಿಚಾರಣೆಯನ್ನಾದರೂ ಕೈಕೊಳ್ಳಬೇಕು. ಅಂದರೆ ಮಾತ್ರ ಉಪವಾಸ ನಿಲ್ಲಿಸುವದಾಗಿ ಧಿಲನ್ನರು ಪ್ರಕಟನೆ ಹೊರಡಿಸಿದ್ದಾರೆ.

ಬಿಹಾರದ ಪುನರ್‍ರಚನಾ ಮಂತ್ರಿ ಡಾ. ಸಯ್ಯದ್ ಮಹಮ್ಮದ ಮೊದಲ್ಗೊಂಡು ೨೬ ಪ್ರಮುಖ ಮುಸಲ್ಮಾನರು ಒಂದು ಸಂಯುಕ್ತ ಪ್ರಕಟನೆ ಹೊರಡಿಸಿ, ಹೈದರಾಬಾದದೊಡನೆ ಹೋರಾಡುವ ಪ್ರಸಂಗವೇ ಬಂದರೆ ಹಿಂದುಸ್ತಾನದ ಮುಸಲ್ಮಾನರು ಹಿಂದುಸ್ತಾನದ ಪರವಾಗಿ ದೇಶನಿಷ್ಠೆಯಿಂದ ಪ್ರಾಣಾರ್ಪಣ ಮಾಡಲು ಸಿದ್ಧರಾಗಬೇಕು ಎಂದು ಸಾರಿದ್ದಾರೆ.

ಹಿಂದೀ ಸಂಸ್ಥಾನ

ಬಡೋದೆಯ ಧಾರಾ ಸಭೆಯು (ಶಾಸನ ಸಭೆ) ತಾ. ೯ ಕ್ಕೆ ಗುಪ್ತ ಸಭೆ ಸೇರಿಸಿ ಬಡೋದೆಯ ಮಹಾರಾಜರಾದ ಪ್ರತಾಪಸಿಂಗರು ರಾಜ್ಯತ್ಯಾಗಮಾಡಿ ರಾಜ್ಯಸೂತ್ರವನ್ನು ರಾಜಕುಮಾರನಿಗೆ ವಹಿಸಿಕೊಡತಕ್ಕದ್ದೆಂದೂ ರಾಜಕುಮಾರನು ಅಲ್ಪವಯಿ ಇರುವದರಿಂದ ಹಿಂದುಸ್ತಾನ ಸರಕಾರವು ರೀಜನ್ಸಿಕೌನ್ಸಿಲ್ ನೇಮಿಸಬೇಕೆಂದೂ ಗೊತ್ತುವಳಿ ಮಾಡಿತು. ಹೀಗೆ ನಿರ್ಣಯ ಕೈಕೊಳ್ಳಲು ಮಹಾರಾಜರ ದುಂದುಗಾರಿಕೆಯೇ ಕಾರಣ.

ಜಯಪುರ ಸಂಸ್ಥಾನದ ೧೯೪೮–೪೯ ರ ಆದಾಯವು ೩,೬೧,೮೭,೦೦೦ ರೂ. ವೆಚ್ಚವು ೩,೬೧,೨೫,೦೦೦ ರೂ. ಗಳಷ್ಟು ಆಗಬಹುದೆಂದು ನಿರೀಕ್ಷಿಸಿದೆ. ಇದರಿಂದ ಈ ವರ್ಷದ ಮುಂಗಡ ಪತ್ರಿಕೆಯಲ್ಲಿ ೧೦॥ ಲಕ್ಷ ರೂ. ಗಳ ಉಳಿತಾಯ ಕಂಡು ಬರುತ್ತದೆಯೆಂದು ಈ ಸಂಸ್ಥಾನದ ಮುಖ್ಯ ಮಂತ್ರಿಗಳು ತಿಳಿಪಡಿಸಿದ್ದಾರೆ.

ಲೀನಹೊಂದಿದ ದಕ್ಷಿಣ ಸಂಸ್ಥಾನಗಳ ಅಧಿಪತಿಗಳಿಗೆ ಖಾಸಗಿ ವೆಚ್ಚಕ್ಕೆ ಕೆಳಗೆ ಕಾಣಿಸಿದಂತೆ ಹಣ ಮಂಜೂರ ಮಾಡಲಾಗಿದೆ.



ಮಂತ್ರಿಗಳಿಗೆ ಸಲಹೆ ಕೊಡಲು ಲಂಡನ್ನಿನ ಗೃಹಲಕ್ಷ್ಮಿಯರ ಪ್ರತಿನಿಧಿಯಾಗಿ ಶ್ರೀಮತಿ ಎಡಿತ್ ರಿಚರ್ಡ್‍ಸನ್ನಳನ್ನು ಅಧಿಕೃತವಾಗಿ ನಿಯಮಿಸಿಕೊಳ್ಳಲಾಗಿದೆ. ಚಿತ್ರದಲ್ಲಿ ಅವಳು ಕೆನ್ಸಾಲ್ ಹೌಸಿನಲ್ಲಿರುವ ತನ್ನ ಮನೆಯಲ್ಲಿ ಒಗೆಯುವ ಬಟ್ಟೆಗಳನ್ನು ಎದುರಿಗೆ ರಾಶಿ ಹಾಕಿಕೊಂಡು "ಕೂಪನ್ನಿನ ವ್ಯವಹಾರ ಇನ್ನು ಸಾಕು." ಎನ್ನುತ್ತ ನಿಂತಿದ್ದಾಳೆ.

ಹಿಂದುಸ್ತಾನ ಪೋರ್ತುಗಾಲ ಸರಕಾರಗಳು ಪರಸ್ಪರ ಸ್ನೇಹ ಸಂವರ್ಧನೆಗೆ ರಾಯಭಾರಿಗಳನ್ನು ನಿಯಮಿಸಲು ನಿರ್ಧರಿಸಿರುವದಾಗಿ ಹಿಂದುಸ್ತಾನ ವಿದೇಶಶಾಖೆಯ ಪ್ರಕಟನೆ ಹೊರಟಿದೆ.

ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದರು ಸ್ವಾತಂತ್ರ್ಯೋತ್ಸವದ ಬಗ್ಗೆ ಒಂದು ಪ್ರಕಟನೆ ಹೊರಡಿಸಿ, ಸ್ವಾತಂತ್ರ್ಯ ಪ್ರಾಪ್ತಿಯ ಜೊತೆಗೆ ಹುಟ್ಟಿಬಂದ ಅನೇಕ ಸಮಸ್ಯೆಗಳನ್ನು ಬಿಡಿಸುವದೂ ದೇಶದಲ್ಲಿ ಬೇರೂರಿದ ಬಡತನ, ಅನಾರೋಗ್ಯ, ಅಜ್ಞಾನ ಇವುಗಳನ್ನು ಉಚ್ಚಾಟನೆಗೊಳಿಸಿ ಎಲ್ಲರಿಗೂ ಅನ್ನವಸ್ತ್ರ ದೊರೆವಂತೆ ಮಾಡುವದೂ ಇನ್ನೂ ಹಾಗೇ ಉಳಿದಿದೆ. ಜಾತಿಭೇದಗಳನ್ನು ತೊರೆದು ಇದನ್ನು ಸಾಧಿಸಲು ಸಕಲರೂ ಪ್ರತಿಜ್ಞಾಬದ್ಧರಾಗಬೇಕು ಎಂದು ಹೇಳಿದ್ದಾರೆ.

ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಲು ಹಿಂದುಸ್ತಾನ ಸರಕಾರವು ದೇಶದ ಅರ್ಥಶಾಸ್ತ್ರಿಗಳನ್ನು ಕರೆಯಿಸಿದೆ. ಇವರು ತಾ ೧೮ ಕ್ಕೆ ಒಟ್ಟುಗೂಡಿ ಅತಿ ಪ್ರಸರಣ, ಏರಿಕೆಯ ಬೆಲೆಗಳು ಇವೇ ಮೊದಲಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿ ಇವುಗಳನ್ನು ತಡೆಯಲು ಸೂಕ್ತ ಸಲಹೆ ಕೊಡುವರೆಂದು ನಿರೀಕ್ಷಿಸಲಾಗಿದೆ. ಹಿರಿಯೋಲಗದಲ್ಲಿ ಪಂ. ನೆಹರು ಅವರು ಮೊನ್ನೆ ಈ ಬಗ್ಗೆ ಮಾಡಿದ ಸೂಚನೆಗನುಸರಿಸಿ ಈ ಪರಿಶೀಲನೆ ನಡೆಯುವದೆಂದು ತಿಳಿಯುತ್ತದೆ.

ಅಕ್ಕಲಕೋಟ ೭೩,೭೮೩ ರೂ. ಭೋರ ೮೦೪೨೧ ರೂ. ಕುರಂದವಾಡ (ಹಿರಿ) ೪೯೯೨೪ ರೂ. ಕುರಂದವಾಡ (ಕಿರಿ) ೨೮೦೦೦ ರೂ. ಫಲ್ಟನ ೧,೪೦,೪೪೨ ರೂ. ರಾಮದುರ್ಗ ೩೨೦೦೦ ರೂ. ಸಾಂಗಲಿ ೨,೨೬,೬೩೯ ರೂ. ಜಮಖಂಡಿ ೯೧,೧೬೩ ರೂ. ಔಂಧ ೭೫,೨೧೨ ರೂ. ಮಿರಜ (ಕಿರಿ) ೫೦೪೫ ರೂ. ವಾಡಿ ಜಹಾಗೀರ ೬೦೦೦ ರೂ.

ಮುಂಬಯಿಯ ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೆಹತಾ ಅವರು ತಾ. ೧೬ ರ ಮುಂಜಾನೆ ಮಿರಜಿಯಲ್ಲಿ ನವಭಾರತ ಪ್ರಕಾಶನ ಸಂಸ್ಥೆಯ ಕಟ್ಟಡದ ಶಂಕು ಸ್ಥಾಪನೆ ಮಾಡಿದರು. ಆ ಕಾಲಕ್ಕೆ, ಅಜ್ಞಾನ ನಿರ್ಮೂಲನವೇ ಈ ಸಂಸ್ಥೆಯ ಧ್ಯೇಯವಾಗಿ ಅದು ಅದನ್ನು ಪೂರೈಸಲಿ ಎಂದು ನುಡಿದರು. ಸಂಜೆಗೆ ಮಿರಜ ನಗರ ಸಭೆಯ ಪರವಾಗಿ ಅವರಿಗೆ ಮಾನಪತ್ರ ಕೊಡಲಾಯಿತು.

ವಾರದ ಭವಿಷ್ಯ

ಆಗಸ್ಟ್ ೨೩ ರಿಂದ ೨೯ ರ ವರೆಗೆ

ಮೇಷ

ಸಿಂಹ

Reg. No. B. 3148

LICENCE No. 3
Licensed to Post without Prepayment

KARMAVEER 23-8-48

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

೧ ವಿಜಯ ಸಾಮ್ರಾಜ್ಯ

ಬರೆದವರು- ಶ್ರೀ. ರಂ. ಶ್ರೀ. ಮುಗಳಿ ಯವರು ಪ್ರಕಾಶಕರು- ಶ್ರೀ. ಪ್ಯಾಟಿ ಜ್ಯಾಮದಾರರು, ಬೆಳಗಾವಿ ಪುಟ [illegible], ಬೆಲೆ ರೂ. ೧.

ವಿಜಯ ಸಾಮ್ರಾಜ್ಯವೆಂಬುದು ವಿಜಯ ನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಹೇಳುವ ಕಥೆ. ಇಲ್ಲಿ ವೀರ ಮತ್ತು ಕರುಣ ಚಿತ್ರಗಳಿವೆ. ಅವು ಚಿತ್ತಾಕರ್ಷಕವಾಗಿವೆ. ತಾನು ಮುಸ ಲ್ಮಾನನಾದರೂ ಹಿಂದುಗಳ ಮೇಲೆ ಪ್ರೇಮವಿ ಟ್ಟವ ತನ್ನನ್ನು ತೋರಿದವರ ಉಪಕಾರವನ್ನು ನೆನೆಸುತ್ತ ಕೊನೆಗೆ ತನ್ನ ಪ್ರಾಣದಿಂದಲೇ ಬೆಲೆ ತೀರಿಸಿ ಗುರುಗಾಗಿ ಪ್ರಾಣ ಬಿಟ್ಟ [illegible] ಗುಣವನ್ನೂ ಆ ಕಾಲದ ಮುಸಲ್ಮಾನ ರಾಜರು ಹಿಂದುಗಳನ್ನು ಹೇಗೆ ನಡೆಸಿಕೊಳ್ಳುತ್ತಿದ್ದರೆಂಬುದನ್ನೂ ಶ್ರೀ. ಮುಗಳಿಯವರು ಚನ್ನಾಗಿ ವರ್ಣಿಸಿದ್ದಾರೆ. ಗ್ರಂಥ ಕರ್ತರಿಂದ ಇಂಥವೇ ಅನೇಕ ಬರಹಗಳು ಬರಲೆಂದು ಹಾರೈಸುತ್ತೇವೆ.

೨ ಮೀರೆ ಮತ್ತು ನಾನು

ಬರೆದವರು— ಶ್ರೀ ಕುಪ್ಪಿ ವಾಸುದೇವ ಶೆಣೈ ಅವರು. ಪ್ರಕಾಶಕರು— ಪ್ರಭಾತ ಆಫೀಸ್ ರಥಬೀದಿ, ಮಂಗಳೂರು. ಪುಟ ೧೧೦, ಬೆಲೆ ರೂ. ೧.

'ಮೀರೆ ಮತ್ತು ನಾನು' ಎಂಬುದೊಂದು ವಿನೋದ ಪ್ರಬಂಧ. ಇಲ್ಲಿ ಮೀರೆ ಎಂಬವಳೊ ಬ್ಬಳು ತನ್ನನ್ನೇ ಅಗಲೇಕೆ, ತಾನು ಕಂಡದ್ದೇ [illegible] [illegible] ಮನುಷ್ಯನ ಸ್ವಭಾವ [illegible] ಅಭಿಪ್ರಾಯಕ್ಕೆ ಯಾವಾಗಲೂ ವಿರೋಧವನ್ನು ಹೇಳಿ ಅದರಿಂದ ಮುಖಕ್ಕೇ [illegible] [illegible] [illegible] [illegible] ಬಂಗಳು. ಅವಳ ಈ ಹಠ ಸ್ವಭಾವದಲ್ಲೂ ಆನಂದ ಹೊಂದುವ ರಸಿಕತೆ ಅವಳ ಗಂಡನ ದಿದೆ. ಅವನು ಉದಾರತೆ [illegible] [illegible] ಪ್ರೀತಿವಂತನೂ [illegible] [illegible]. ಅವಳ ಸ್ವಭಾವದಲ್ಲಿಯ ಹೊಸ [illegible] ಬಹಳ ಮಾರ್ಮಿಕವಾಗಿ ಅವಳ ಗಂಡ ತೋರಿಸಿದ್ದಾನೆ. [illegible] [illegible] [illegible]. ದಂಪತಿಗಳ ಜೀವನ [illegible] [illegible] ವಿನೋದಶೀಲತೆಗಳಿಂದ ಸುಂದರವಾಗಿ ತೋರುವಂತೆ ಚಿತ್ರಿಸಲಾಗಿದೆ. ಮೀರೆಯ ಹಠಪ್ರೇಮ ಅವಳ ಸ್ವಭಾವ ದೋಷಗಳನ್ನು ಅನೇಕ ಪೇಳಿ ಗುಣವಾಗಿ ತೋರುವಂತೆ ಮಾಡಲು ಅವರಿಗೆ ಸಹಾಯ ವಾಗಿದೆ. ಈ ಸರಸ ಪ್ರಬಂಧವನ್ನು ಬರೆದ ಬರಹಗಾರರು ಶ್ಲಾಘ್ಯರೆನ್ನಬೇಕು.

೩ ತೋರಣ ಭಾಗ ೩, ೪.

(ಕಾವ್ಯಸಂಕಲನ)

ಪ್ರಕಾಶಕರು, ಬೆಳಗಾವಿಯ ಪಠ್ಯ ಪುಸ್ತಕ ಸಮಿತಿಯ ಪರವಾಗಿ ಶ್ರೀ. ಡಾ. ಕುಲಕರ್ಣಿ, ಮನೋಹರ ಗ್ರಂಥ ಭಾಂಡಾರ, ಧಾರವಾಡ. ಪುಟಗಳು೩೨,೫೦. ಒಂದೊಂದರಬೆಲೆ೧೩ ಆಣೆ.

ಬೆಳಗಾವಿಯ ಪಠ್ಯಪುಸ್ತಕ ಸಮಿತಿಯ ವರು ಕೈಕೊಂಡ ಈ ಕಾರ್ಯ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಸಂಪಾದಕ ಮಂಡಲದಲ್ಲಿ ೧೨ ಜನರಿದ್ದಾರೆ. ಎಲ್ಲರೂ ಶಿಕ್ಷಣದ ಅನುಭವವಿದ್ದವರು. ಇವರು ಆಯ್ದುದನ್ನು ಶಿಕ್ಷಣ ದೃಷ್ಟಿಯಿಂದ ಸಮರ್ಪಕವಿರುವನು ಸಹಜವಿದೆ. ಇಲ್ಲಿ ಆಯ್ದ ಕವನಗಳಲ್ಲಿ ಆಧುನಿಕ ಮತ್ತು ಪ್ರಾಚೀನ ಕವಿಗಳ ಒಳ್ಳೆಯ ಕೃತಿಗಳೇ ಇವೆ. ಎರಡೂ ಭಾಗಗಳಲ್ಲಿ ಮತ್ತೆ ಮತ್ತೆ ಅದೇ ಕವಿಗಳ ಕೃತಿಗಳನ್ನೇ ಆಯ್ದದ್ದೇಕೆ? ವೈವಿಧ್ಯದ ದೃಷ್ಟಿಯಿಂದಲಾದರೂ ಬೇರೆ ಕವಿಗಳ ಕೃತಿಗಳನ್ನು ಕೊಡಬಹುದಾಗಿತ್ತು. ಇದ್ದ ಸ್ಥಿತಿಯಲ್ಲಿಯೂ ಸಂಕಲನವು ಸೊಗಸಾಗಿದ್ದು ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಕವಿ ಪರಿಚಯ ಶಬ್ದಾರ್ಥ ಪ್ರಶ್ನೆಗಳು ಸಂದರ್ಭ ಸಹಿತ ಕೊಡಲಾಗಿದೆ.

೪ ಕಥಾವಳಿ (ವಿಶೇಷ ಸಂಚಿಕೆ)

ಈ ಸಲದ ಕಥಾವಳಿಯ ವಿಶೇಷ ಸಂಚಿಕೆ ಎಂದಿನಂತೆ ಸಾಮಾನ್ಯರ ಮನಸ್ಸನ್ನು ವರ್ಣರಂಜಿತ ಸ್ತ್ರೀಮುಖಗಳಿಂದ ಆಕರ್ಷಿಸು ವಂಥದಿದೆ. ಅಭ್ಯುದಯ, ಅಂಚೆಯ ಪೆಟ್ಟಿಗೆ ಮುಂತಾದ ಕವನಗಳು, ವಿಶ್ವಶಾಂತಿ, ಚಾಮರ ಸೇನೆ ಮುಂತಾದ ಪ್ರಬಂಧಗಳು, ಕಾರ್ಡಿನ ಕತೆಗಳಲ್ಲಿ ಫಲವಾರು ಮತ್ತು ಮಕ್ಕಳ ಬಳಗದ ಕೆಲವು ಬರಹಗಳು ಉತ್ತಮ ವರ್ಗಕ್ಕೆ ಸೇರಿದವಾಗಿವೆ. ಯಥಾ ರೂಢಿ, ರಾಶಿ ವರ್ಷ ಭವಿಷ್ಯವೂ ಇದರೊಂದಿಗೆ ಮೇಲೆ ಅಕ್ಕರಿಗರು ತಮ್ಮ ಭಾಗ್ಯವನ್ನು ಅವಲೋಕಿಸದೆ ಇರುವರೆ? ಕತೆಗಳು ಬೇರೆ ವಿವಿಧವಾಗಿವೆ. ಅಂತೂ ಸಂಚಿಕೆ ಮುದ್ದಾಗಿದೆ.

ಸಾದರ ಸ್ವೀಕಾರ

ಅನರು ಮತ್ತು ದೇವಕ್ಕ

ಲೇಖಕರು, ಐರಣಿ ಶ್ರೀನಿವಾಸ. ಪ್ರಕಾಶಕರು, ಗೋಕರ್ಣದ ಪರ್ಣಕುಟಿ ಗ್ರಂಥ ಮಾಲೆಯ ಪರವಾಗಿ ಶ್ರೀ ಬಾಲಚಂದ್ರ ವೆಂಕಟೇಶ ಘಾಟೇಕರ ಧಾರವಾಡ. ಪುಟಗಳು ೯೦ ಬೆಲೆ ೧ ರೂ. ೮ ಆಣೆ.

ಕಾಲನ ಕರೆ

ಬರೆದವರು, ಗಂಗಾಧರ ಚಿತ್ತಾಲ. ಪ್ರಕಾಶಕರು, ಗೋಕರ್ಣದ ಪರ್ಣಕುಟಿ ಗ್ರಂಥ ಮಾಲೆಯ ಪರವಾಗಿ ಶ್ರೀ ಎಚ್. ಬಿ. ನವಲೂರ, ಧಾರವಾಡ. ಪುಟಗಳು ೪೫ ಬೆಲೆ ೧ ರೂ.

ವಾರದ ಭವಿಷ್ಯ

(೧೫ ನೇ ಪುಟದಿಂದ)

ಉತ್ತಮ. ಆದರೆ ನೋಕರರಿಗಿಂತ ಧಂದೆ ಮಾಡುವವರಿಗೆ ಅಪ್ರತಿಷ್ಠೆಯ ಅಂಜಿಕೆ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಆದರೆ ಅವರಲ್ಲಿ ಒಬ್ಬರು ಬಹಳ ದೂರ ಸ್ಥಳಾಂತರ ಹೋಗುವದರಿಂದ ಮನಸ್ಸು ಬಹಳ ಕಷ್ಟವು. ಛಿಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಚಿತ್ರಾದ ೪ ನೇ ಮತ್ತು ಸ್ವಾತಿಯ ಮೊದಲನೇ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೫, ೨೬, ೨೯ ಅನುಕೂಲ.

ವೃಶ್ಚಿಕ

ಪ್ರಕೃತಿ ನಾದುರಸ್ತ. ಹೆಂಡತಿಯದು ಹಾಗೆಯೇ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು. ಪ್ರತಿಷ್ಠೆ ಕುಂಬ ಮತ್ತು ಲಾಭ ಅನುಕೂಲ. ಆದರೆ ವರಿಷ್ಠರು ಇಲ್ಲವೆ ಆಶ್ರಯದಾತರು ಬೇಕೆಂತಲೆ ತೊಂದರೆ ಕೊಡುತ್ತಲೆ ಹೋಗುವ ಸಂಭವ. ಅನೇಕರೊಡನೆ ನಿರರ್ಥಕವಾಗಿ ಬಾಯಿಗೆ ಬಾಯಿ ಜಗಳ. ಕ್ಷಣಿಕ ಉಳಿಯುವಂಥ ವೈರದಪ್ರಸಂಗ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಛಿಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧೆಯ ೪ ನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೩, ೨೪, ೨೭, ೨೮ ಅನುಕೂಲ.

ಧನು

ಪ್ರಕೃತಿ ಅಲ್ಪ ಸ್ವಲ್ಪ ಕೆಡುವ ಸಂಭವ. ಆದರೆ ಸ್ತ್ರೀ ಸುಖ ಉತ್ತಮ. ಸ್ಥಾವರದಲ್ಲಿ ಸ್ವಲ್ಪ ಸೋಯಿ ಮಾಡುವದರಲ್ಲಿ ಕೆಲ ಮಟ್ಟಿಗೆ ವೆಚ್ಚ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ಮಿತಿಮೀರಿ. ವಾದದಲ್ಲಿ ಒಳ್ಳೆ ಯಶಸ್ಸು. ಆದರೆ ಅದಕ್ಕಾಗಿ ಖಾಸಗಿ ವೆಚ್ಚ ಬಹಳ ಮಾಡಬೇಕಾದ ಸಂಭವ. ಮಿತ್ರ ಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರ ಛಿಟ್ಟಿಗಿಂತ ಹೆಚ್ಚು ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೫, ೨೬, ೨೯ ಅನುಕೂಲ.

ಮಕರ

ಪ್ರಕೃತಿಗೆ ಸ್ವಲ್ಪ ಕ್ಲೇಶ. ಹೆಂಡತಿಗೂ ಕಿರುಕಳ ಕಾಯಿಲೆ. ಅಪ್ತರು ಏನೇನೋ ಕಿಟಬಿಟಿ ಎಬ್ಬಿಸುವರು. ಇಲ್ಲವೆ ವರ್ಚಸು ಕೆಡಿಸಲು ಪ್ರಯತ್ನಿಸುವರು. ಆದರಿಂದ ಬಹಳ ಮನಸ್ತಾಪ. ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕುಂಠಿತ. ಧಂದೆಯವರಿಗಿಂತ ನೋಕರ ವರ್ಗಕ್ಕೆ ಮಾತ್ರ ಸ್ವಲ್ಪ ಅನುಕೂಲ. ಅಲ್ಪ ಸ್ವಲ್ಪ ರಾಜಕೀಯ ತೊಂದರೆ. ಯಾವಳೊಬ್ಬ ಸ್ತ್ರೀಯಿಂದ ಅಪಮಾನದ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಪ್ರವಾಸಾದಿ ಕೆಲಸ ಅತಿ ತೊಂದರೆಯಿಂದ. ಉತ್ತರಾಷಾಢಾದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೩, ೨೭, ೨೮ ಅನುಕೂಲ.

ಕುಂಭ

ಎಲ್ಲರ ಪ್ರಕೃತಿ ಅನುಕೂಲ. ಆದರೆ ಪ್ರತಿಯೊಂದು ಕೆಲಸದಲ್ಲಿ ಹೆಂಡತಿ ಮತ್ತು ನಿಮ್ಮಲ್ಲಿ ಮತಭೇದವಾಗಿ ಪ್ರಾಪಂಚಿಕ ಸಮಾಧಾನ ಕಡಮೆಯೇ ಉದ್ಯೋಗದಲ್ಲಿ ಪ್ರಗತಿ ಉತ್ತಮ ಆದರೆ ಆ ಮಾನದಿಂದ ಲಾಭ ಮತ್ತು ಪ್ರತಿಷ್ಠೆ ಬಹಳ ಕಡಮೆ. ಯಾವದೊಂದು ಕೆಲಸದಲ್ಲಿ ಪ್ರತ್ಯಕ್ಷ ಕೃತಿಗಿಂತ ನಿರರ್ಥಕ ಚರ್ಚೆಯೇ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಶತ್ರುಗಳು ಗುಪ್ತ ರೀತಿಯಿಂದ ಬಹಳ ತೊಂದರೆ ಕೊಡುವರು. ಮಿತ್ರತ್ವದಲ್ಲಿ ವಿರೋಧ. ಪ್ರವಾಸಾದಿ ಕೆಲಸ ಬಹಳ. ಧನಿಷ್ಠೆಯ ೪ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೩, ೨೪, ೨೯ ಅನುಕೂಲ.

ಮೀನ

ಪ್ರಕೃತಿ ಉತ್ತಮ ಆದರೆ ಮಿತ್ರಪಕ್ಷದಲ್ಲಿಯ ವಿರೋಧದಿಂದ ಇಲ್ಲವೆ ಅವರಲ್ಲಿ ಒಬ್ಬರ ಮೇಲಿನ ಆಕಸ್ಮಿಕ ಆಪತ್ತಿಯಿಂದ ಪ್ರಾಪಂಚಿಕ ಸುಖದತ್ತ ದುರ್ಲಕ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಂದಾಜಿನಷ್ಟು. ಆದರೆ ಪ್ರತಿಯೊಂದು ಮಾತು ಸಾಧ್ಯವಾಗಬೇಕಾದರೆ ಅತ್ಯಂತ ತೊಂದರೆ. ಸ್ಥಾವರದಲ್ಲಿ ಸ್ವಲ್ಪ ಹಾನಿ. ಮಕ್ಕಳಲ್ಲಿ ಭಾವೀ ಉತ್ಕರ್ಷದ ಕೆಲ ಸಂಗತಿ ಸಂಭವಿಸುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಅಷ್ಟೇ ಹಾನಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಛಿಟ್ಟಿ ಅನುಕೂಲ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೨೩, ೨೪, ೨೭, ೨೮ ಅನುಕೂಲ.

[illegible]